ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮ

ಸಾಹಿತ್ಯ ಮತ್ತು ಇತಿಹಾಸದ ಅಂತರ್‌ಸಂಬಂಧದ ಅಧ್ಯಯನ

(ಎಂ.ಫಿಲ್.ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ಷಣ್ಮುಖಪ್ಪ ಬೊದೂರ

ಮಾರ್ಗದರ್ಶಕರು

ಡಾ. ಎ. ಸುಬ್ಬಣ್ಣ ರೈ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ಸಂಶೋಧಕರ ಘೋಷಣಾ ಪತ್ರ

ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಡಾ. ಎ. ಸುಬ್ಬಣ್ಣ ರೈ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶ ಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೫.೧೦.೨೦೦೮
ಸ್ಥಳ : ವಿದ್ಯಾರಣ್ಯ

(ಷಣ್ಮುಖಪ್ಪ ಬೊದುರು)
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ, ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಷಣ್ಮುಖಪ್ಪ ಬೊದುರು ಅವರು ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮ ಎಂಬ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅತವಾ ಇತರೆ ಉದ್ದೇಶಗಳಿಗಾಗಲೀ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 17.10.2006
ಸ್ಥಳ : ವಿದ್ಯಾರಣ್ಯ

(ಡಾ. ಎ. ಸುಬ್ಬಣ್ಣ ರೈ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ, ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧೧ ಉದ್ದೇಶ

೧೨ ವ್ಯಾಪ್ತಿ

೧.೧. ಉದ್ದೇಶ

"ಭಾರತವು ವೈವಿಧ್ಯತೆಗಳ ದೇಶ. ಹಾಗಾಗಿಯೇ ವಸಾಹತುಶಾಹಿಗಳು, ಮಿಶನರಿಗಳು ಇಲ್ಲಿಯ ಸಂಸ್ಕೃತಿಯನ್ನು ಅಧ್ಯಯನ ಮಾಡಲು ವಿಶೇಷ ಆಸಕ್ತಿ ತಳೆದರು. ಅವರ ದೇಶದ ಏಕರೂಪಿ ಸಂಸ್ಕೃತಿಯ ಎದುರು ಇಲ್ಲಿಯ ಬಹುರೂಪಿ ಸಂಸ್ಕೃತಿಯು ಭಾರತವನ್ನು ವಿಭಿನ್ನವಾಗಿ ಕಾಣಿಸಿತು. ಎ.ಕೆ. ರಾಮಾನುಜನ್ ಅವರು ಭಾರತೀಯತೆ ಎನ್ನುವ ಒಂದು ಚಿಂತನಾಕ್ರಮ ಇದೆಯೇ?" (ರಾಜಾರಾಮ ಹೆಗಡೆ (ಸಂ.), ೨೦೦೪, ಪು. ೨೮೧) ಎನ್ನುವ ಲೇಖನದಲ್ಲಿ ಇಂತಹ ಭಿನ್ನತೆಯನ್ನು ನಿರೂಪಿಸಿದ್ದಾರೆ. ಹೀಗೆ ಮುಂದುವರಿಕೆಯಾಗಿ "ಭಾರತದಲ್ಲಿ ಏನನ್ನಾದರೂ ಇದು ಸತ್ಯ ಎಂದು ನಿರೂಪಿಸ ಹೊರಟರೆ ಅದಕ್ಕೆ ವಿರುದ್ಧವಾದ ಅನೇಕ ಸಂಗತಿಗಳು ನಾವು ಹೇಳಿದ ಸತ್ಯವನ್ನು ಅನುಮಾನಿಸುವಂತೆ ಮಾಡುತ್ತವೆ (ಅದೇ) ಎನ್ನುವ ಎ.ಕೆ. ರಾಮಾನುಜನ್‌ನವರ ಮಾತನ್ನು ಕರ್ನಾಟಕ ಸಂಸ್ಕೃತಿಯ ವಿಷಯದಲ್ಲಿಯೂ ಅನ್ವಯಿಸಬಹುದು. ಏಕೆಂದರೆ ಒಂದು ಸಂಪ್ರದಾಯ, ಆಚರಣೆ, ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಯದೇ ಆದ ಸ್ವರೂಪವನ್ನು ಹೊಂದಿರುತ್ತವೆ. ಇದರ ಪ್ರಭಾವ ಬರಹ ರೂಪದ ಸಾಹಿತ್ಯದಲ್ಲೂ ಕಾಣುತ್ತದೆ. ಅಂದರೆ ಒಂದು ಪರಂಪರೆಯನ್ನು ಜನಪದ ಸಾಹಿತಿಗಳು, ಶಿಷ್ಟಸಾಹಿತಿಗಳು ಏಕಕಾಲದಲ್ಲಿ ಹಲವು ಬಗೆಯಲ್ಲಿ ಮುಖಾಮುಖಿಯಾಗಿಸುತ್ತಾರೆ. ಇಂತಹ ಮುಖಾಮುಖಿಗೆ ಒಂದು ಪರಂಪರೆಯೇ ಇದೆ.

ಸಾವಿರದ ಐದುನೂರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಸಮೃದ್ಧತೆಯನ್ನು ಪಡೆದುಕೊಂಡಿದೆ. ಹಾಗೂ ವೈವಿಧ್ಯತೆಯಿಂದ ಕೂಡಿದೆ. ಈ ಕಾಲಘಟ್ಟದಲ್ಲಿ ಜೈನ, ವೀರಶೈವ, ಹಾಗೂ ವೈದಿಕ ಮತದ ಕವಿಗಳು ಉಲ್ಲೇಖಿತರಾಗಿದ್ದಾರೆ. ಇಲ್ಲಿ ಪ್ರಮುಖವಾಗಿ 'ತೀರ್ಥಂಕರ ಚರಿತೆ', 'ಶಿವಶರಣರ ಜೀವನ', 'ರಾಮಾಯಣ', 'ಮಹಾಭಾರತ', 'ಭಾಗವತ ಕಥೆ' ಮೊದಲಾದವುಗಳನ್ನು ಕಾವ್ಯದ ವಸ್ತುಗಳನ್ನಾಗಿ ಮಾಡಿಕೊಂಡು ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಈ ಸಾಹಿತ್ಯ ಸೃಷ್ಟಿಯು ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ ಮೊದಲಾದ ಛಂದೋರೂಪಗಳಲ್ಲಿ ಬಹುರೂಪಿಯಾಗಿ ಮೈದಳೆದಿದೆ. ಇದಕ್ಕಿಂತ ವಿಶಿಷ್ಟವಾಗಿ ವಚನ ಹಾಗೂ ಕೀರ್ತನಾ ಸಾಹಿತ್ಯವಿದೆ. ಶಾಸ್ತ್ರ, ಕೃತಿ ಹಾಗೂ ಸಂಕಲನಗಳಿವೆ. ವಚನ ಚಳುವಳಿಯನ್ನು ಆಧರಿಸಿ ಅನೇಕ ನಾಟಕ, ಕಾದಂಬರಿಗಳು ಬರುತ್ತಿವೆ. ಇವುಗಳು ವಚನ ಚಳುವಳಿಯನ್ನು ಭಿನ್ನವಾಗಿ ತಿಳಿಯಲು ಅವಕಾಶ ಮಾಡಿಕೊಟ್ಟಿವೆ.

ಹೊಸಗನ್ನಡ ಸಾಹಿತ್ಯದಲ್ಲಿ ಆಧುನಿಕವಾದ ವಸ್ತು-ವಿಚಾರಗಳು ಪ್ರತಿಪಾದಿತವಾದವು. ಇಂದು ಸಾಹಿತ್ಯದ ವಸ್ತು ಹಾಗೂ ಬರಹಗಾರರ ದೃಷ್ಟಿಕೋನಗಳು ಬದಲಾಗುತ್ತಾ ನಡೆದಿವೆ. ಅಗತ್ಯಕ್ಕೆ ತಕ್ಕಂತೆ ತಮ್ಮ ಅನುಭವಗಳಿಗೆ ಸಾಹಿತ್ಯ ರೂಪ ಕೊಡುತ್ತಾ ಬಂದಿದ್ದಾರೆ.

ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಕುಮಾರರಾಮನದು ಪ್ರಮುಖ ಹೆಸರು. ವಿಜಯನಗರ ಪೂರ್ವದ ಇತಿಹಾಸದಲ್ಲಿ ಕುಮ್ಮಟದ ನಾಯಕರ ಮನೆತನದಲ್ಲಿ ಮೂರನೆಯ ಹಾಗೂ ಕೊನೆಯ ಅರಸನಾಗಿ ಈತ ಉಲ್ಲೇಖಿತನಾಗಿದ್ದಾನೆ. ಐತಿಹಾಸಿಕ ಆಕರಗಳಲ್ಲಿ ಈತನ ಬಗೆಗೆ ಹೆಚ್ಚಿನ ವಿವರಗಳು ಲಭಿಸದೆ ಹೋದರೂ ಮೌಖಿಕ ಸಾಹಿತ್ಯ ಪರಂಪರೆಯಲ್ಲೂ, ಆಧುನಿಕಪೂರ್ವ ಸಾಹಿತ್ಯ ಕೃತಿಗಳಲ್ಲೂ ಈತನ ಬಗೆಗೆ ಸಾಕಷ್ಟು ವಿವರಗಳು ಲಭ್ಯವಾಗುತ್ತವೆ. ಪರದಾರ ಸೋದರನಾಗಿ, ಶತ್ರು ಸೈನ್ಯದ ವಿರುದ್ಧ ವೀರಾವೇಶದಿಂದ ಹೋರಾಡಿದ ಪರಾಕ್ರಮಿಯಾಗಿ, ಎಲ್ಲಕ್ಕೂ ಮುಖ್ಯವಾಗಿ ಜನಪದರ ಆರಾಧ್ಯ ದೈವವಾಗಿ, ಸ್ಥಳೀಯ ಜನಮಾನಸದಲ್ಲಿ ನೆಲೆನಿಂತಿರುವ ಕುಮಾರರಾಮನು ಕನ್ನಡ ನಾಡಿನ ಓರ್ವ ಸಾಂಸ್ಕೃತಿಕ ನಾಯಕನಾಗಿ ಪ್ರಸ್ತುತವೆನಿಸುತ್ತಾನೆ. ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ಹಲವು ಮಂದಿ ಕವಿಗಳು ಕುಮಾರರಾಮನನ್ನು ನಾಯಕನನ್ನಾಗಿಸಿ ಕಾವ್ಯಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹದಿನಾರನೇ ಶತಮಾನದ ನಂಜುಂಡ ಕವಿಯ 'ರಾಮನಾಥ ಚರಿತೆ'ಯು 'ಕುಮಾರರಾಮನ ಸಾಂಗತ್ಯ'ವೆಂದೇ ಪ್ರಸಿದ್ಧವಾಗಿದೆ. ಐತಿಹಾಸಿಕ ಆಕರಗಳೊಂದಿಗೆ ಈ ಸಾಂಗತ್ಯ ಕೃತಿಯನ್ನು ಪ್ರಮುಖ ಆಧಾರವಾಗಿರಿಸಿ ಕೊಂಡು ಹೊಸಗನ್ನಡ ಸಂದರ್ಭದಲ್ಲೂ ಕುಮಾರರಾಮನಿಗೆ ಸಂಬಂಧಿಸಿದಂತೆ ವಿವಿಧ ಪ್ರಕಾರಗಳ ಹಲವಾರು ಕೃತಿಗಳು ರಚನೆಗೊಂಡಿವೆ.

ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧವನ್ನು ಸಾಹಿತ್ಯಾಧ್ಯಯನಗಳು ಹಲವು ಮಾದರಿಗಳಲ್ಲಿ ಗುರುತಿಸಿವೆ. ಹೀಗೆ ವಿವಿಧ ಲೇಖಕರ ರಚನೆಯಲ್ಲಿ ಕುಮಾರರಾಮನು ವಿಭಿನ್ನ ನೆಲೆಗಳಲ್ಲಿ ಚಿತ್ರಿತನಾಗಿದ್ದಾನೆ. ಹೀಗಾಗಿ ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಚಿತ್ರಿತನಾದ ಕುಮಾರರಾಮನನ್ನು ಇತಿಹಾಸ ಮತ್ತು ಸಾಹಿತ್ಯದ ಅಂತರ್‌ಸಂಬಂಧಗಳ ನೆಲೆಯಲ್ಲಿ ಶೋಧಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಹೀಗೆ ಸಮುದಾಯದ ಆಚರಣಾಲೋಕ, ಮೌಖಿಕ ಸಾಹಿತ್ಯ ಹಾಗೂ ಮಧ್ಯಕಾಲೀನ ಗ್ರಂಥಸ್ಥ ಸಾಹಿತ್ಯವನ್ನು ಹಿನ್ನೆಲೆಯಾಗಿರಿಸಿಕೊಂಡು ರಚಿತವಾದ ಹೊಸಗನ್ನಡ ಸಾಹಿತ್ಯದಲ್ಲಿನ ಕುಮಾರರಾಮನ ಬಹುಮುಖತೆ ಹೇಗೆ ಚಿತ್ರಿತವಾಗಿದೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವೂ ಪ್ರಸ್ತುತ ಅಧ್ಯಯನ'ದಲ್ಲಿವೆ. ಚರಿತ್ರೆಯಲ್ಲಿ ಬಿಂಬಿತನಾಗಿರುವ, ಸಾಹಿತ್ಯ ಕೃತಿಗಳಲ್ಲಿ ಚಿತ್ರಿತನಾಗಿರುವ ಕುಮಾರರಾಮನು ಹೇಗೆ ಭಿನ್ನ ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದಲ್ಲಿ ಮಂಟೇಸ್ವಾಮಿ, ಮಹದೇಶ್ವರ, ಸಿರಿ, ಜುಂಜಪ್ಪ, ಮೈಲಾರಲಿಂಗ, ಎಲ್ಲಮ್ಮ ಮುಂತಾದ ಸಾಂಸ್ಕೃತಿಕ ನಾಯಕ-ನಾಯಕಿಯರು ಒಂದು ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಿ

ಕೊಂಡಿರುವುದನ್ನು ಸಂಶೋಧನೆಗಳು ಗುರುತಿಸಿವೆ. ಅದೇ ರೀತಿ ಕುಮಾರರಾಮನ ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಆಯಾಮಗಳು ಹಾಗೂ ಆಧುನಿಕಪೂರ್ವ ಸಾಹಿತ್ಯ ಕೃತಿಗಳು ಆತನನ್ನು ಚಿತ್ರಿಸಿದ ಬಗೆ ಇತ್ಯಾದಿಗಳ ಕುರಿತು ನಮ್ಮಲ್ಲಿ ಈಗಾಗಲೇ ಅಧ್ಯಯನಗಳು ನಡೆದಿವೆ. ಆದರೆ ಆಧುನಿಕ ಕನ್ನಡ ಸಾಹಿತ್ಯವು ಮಧ್ಯಕಾಲೀನ ಚಾರಿತ್ರಿಕ ವ್ಯಕ್ತಿಯಾದ ಕುಮಾರಾಮನನ್ನು ಹೇಗೆ ಚಿತ್ರಿಸಿದೆ ಎಂಬುದರ ಬಗೆಗೆ ಇದುವರೆಗೆ ಯಾವ ಅಧ್ಯಯನಗಳು ನಡೆದಂತಿಲ್ಲ. ಸುರೇಶ ಹರ್ಲಾಪೂರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕುಮಾರರಾಮನ ಅಧ್ಯಯನದ ಆಕರಗಳು' ಎಂಬ ಪಿಎಚ್.ಡಿ. ಮಹಾಪ್ರಬಂಧದ ಉಪ ಅಧ್ಯಾಯ ಒಂದರಲ್ಲಿ ಕುಮಾರರಾಮನ ಕುರಿತಾದ ಆಧುನಿಕ ಕನ್ನಡ ಸಾಹಿತ್ಯದ ಬಗೆಗೆ ಪ್ರಸ್ತಾಪಿಸುತ್ತಾರೆ. ಆದರೆ ಅಲ್ಲಿ ಕುಮಾರರಾಮನ ಕುರಿತಾದ ಅಧ್ಯಯನಕ್ಕೆ ಹೊಸಗನ್ನಡವು ಹೇಗೆ ಆಕರವಾಗಿ ಬಳಕೆಯಾಗಬಹುದು ಎಂಬುದರ ಸೂಚನೆ ಅಷ್ಟೇ ಇದೆ. ವಿಸ್ತೃತವಾಗಿ ಅವುಗಳ ಅಧ್ಯಯನವನ್ನು ಅಲ್ಲಿ ನಡೆಸಲಾಗಿಲ್ಲ. ಈ ಹಿನ್ನೆಲೆಯಲ್ಲಿ 'ಹೊಸಗನ್ನಡ ಸಾಹಿತ್ಯ'ದಲ್ಲಿ ಕುಮಾರರಾಮ ಎಂಬ ವಿಷಯವನ್ನು ಎತ್ತಿಕೊಂಡು ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ.

೧.೨. ವ್ಯಾಪ್ತಿ

ಜನಪದ ಸಾಂಸ್ಕೃತಿಕ ನಾಯಕನಾದ ಕುಮಾರರಾಮನ ಪರಂಪರೆ ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಒಂದು ಪಂಥವಾಗಿ ಬೆಳೆದಿದೆ.[೧] ಹದಿನಾರನೇ ಶತಮಾನದ ನಂಜುಂಡ ಕವಿಯ 'ರಾಮನಾಥ ಚರಿತೆ' (ಕುಮಾರರಾಮನ ಸಾಂಗತ್ಯ) ಕಾವ್ಯವನ್ನು ಗಮನಿಸಿದರೆ ಆ ಕಾಲಕ್ಕಾಗಲೇ ಈ ಪಂಥವು ನಮ್ಮ ಶಿಷ್ಟಕವಿಗಳ ಮೇಲೆ ಪ್ರಭಾವ ಬೀರಿರುವುದು ಮನದಟ್ಟಾಗುತ್ತದೆ. ಮೂಲತಃ ಜನಪದರ ಸ್ಮೃತಿ ಕೋಶದಲ್ಲಿ ಮೈತಳೆದ ಕುಮಾರರಾಮ ಶಿಷ್ಟ ಸಾಹಿತಿಗಳನ್ನು ಕೃತಿ ರಚನೆಗೆ ಪ್ರೇರೇಪಿಸಿದುದು ಉಂಟು. ಹಾಗಾಗಿ ಕುಮಾರರಾಮನು ಮೌಖಿಕ ಪರಂಪರೆಯಲ್ಲಿಯೂ ಗ್ರಂಥಸ್ಥ ಸಾಹಿತ್ಯದಲ್ಲಿಯೂ ನಾಟಕ, ಕಾದಂಬರಿ, ಕಾವ್ಯ ಮೊದಲಾದ ಬೇರೆ ಬೇರೆ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಂಡಿದ್ದಾನೆ. ಹೀಗೆ ಕುಮಾರರಾಮನ ಬಹುಮುಖತೆಯನ್ನು ತಿಳಿಯುವುದು ಒಂದರ್ಥದಲ್ಲಿ ಚರಿತ್ರೆಯ ಪುನಾರಚನೆಯೇ ಆಗಿದೆ. ಬಸವಣ್ಣನಂತಹ ವಚನಕಾರನ ಬಹುಮುಖತೆಯನ್ನು ಗುರುತಿಸುವ ಹಲವು ಅಧ್ಯಯನಗಳಾಗಿವೆ. ಆದರೆ ಮಧ್ಯಕಾಲೀನ ಕರ್ನಾಟಕದ ಪ್ರಾದೇಶಿಕ ಇತಿಹಾಸದಲ್ಲಿ ಪ್ರಮುಖನಾದ ಕುಮಾರರಾಮನ ಬಗೆಗೆ ಇಂತಹ ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ಆಧುನಿಕ ಕನ್ನಡ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳು ಕುಮಾರರಾಮನನ್ನು ಯಾವೆಲ್ಲ ದೃಷ್ಟಿಕೋನಗಳಿಂದ ಚಿತ್ರಿಸಿವೆ ಎಂಬುದನ್ನು ಕಂಡುಕೊಳ್ಳಲು ಉದ್ದೇಶಿಸಿರುವ ಈ ಅಧ್ಯಯನವು ಅಂತಹ ಕೊರತೆಯನ್ನು

---

೧. ತುಂಗಭದ್ರ ನದಿಯ ಉತ್ತರ ಭಾಗದ ಪ್ರದೇಶವನ್ನು ಒಟ್ಟಾಗಿ ಉತ್ತರ ಕರ್ನಾಟಕವೆಂದು ಇಲ್ಲಿ ಪರಿಗಣಿಸಲಾಗಿದೆ. ಇದರಲ್ಲಿ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳು ಒಳಗೊಳ್ಳುತ್ತವೆ.

ಸ್ವಲ್ಪಮಟ್ಟಿಗೆ ನೀಗಿಸಬಹುದೆಂದು ಭಾವಿಸಲಾಗಿದೆ. ಈ ತಾತ್ವಿಕ ತಿಳುವಳಿಕೆಯು ಕುಮಾರರಾಮನ ಬಹುಮುಖತೆಯನ್ನು ತಿಳಿಯಲು ಪ್ರೇರೇಪಿಸುತ್ತದೆ. ಕಾರಣ ಸಾಹಿತ್ಯ ಮತ್ತು ಇತಿಹಾಸದ ಅಂತರ್ ಸಂಬಂಧವನ್ನು ಗುರುತಿಸುವ ನೆಲೆಯಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮನ ಅಭಿವ್ಯಕ್ತಿಯ ಬೇರೆ ಬೇರೆ ನೆಲೆಗಳನ್ನು ಶೋಧಿಸುವ ಪ್ರಯತ್ನ ಇಲ್ಲಿಯದು.

ಕುಮಾರರಾಮನ ಕುರಿತಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿವಿಧ ಪ್ರಕಾರಗಳ ಸುಮಾರು ಮೂವತ್ತರಷ್ಟು ಕೃತಿಗಳು ರಚನೆಗೊಂಡಿವೆ. ಅವುಗಳಲ್ಲಿ ಕಾವ್ಯ, ನಾಟಕ, ಕಾದಂಬರಿ, ಗದ್ಯ ಬರಹಗಳು ಮುಂತಾದ ಕೃತಿಗಳಿವೆ. ಇವುಗಳಲ್ಲಿ ಅರ್ಧಭಾಗದಷ್ಟು ಕೃತಿಗಳನ್ನು ಪ್ರಸ್ತುತ ಅಧ್ಯಯನಕ್ಕೆ ಪ್ರಧಾನ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಅವುಗಳಲ್ಲಿ ಆರು ನಾಟಕ ಕೃತಿಗಳು, ಮೂರು ಕಾದಂಬರಿ ಗಳು, ಒಂದು ಯಕ್ಷಗಾನ ಪ್ರಸಂಗ ಹಾಗೂ ಆರು ಗದ್ಯ ಬರಹಗಳು ಸೇರಿವೆ. ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮನನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ಕಂಡುಕೊಳ್ಳಲು ಪ್ರಸ್ತುತ ಕೃತಿಗಳು ಸಾಕಾಗಬಹುದಾದರೂ ಸಮಗ್ರ ಕೃತಿಗಳ ಅಧ್ಯಯನದ ಮೂಲಕ ಇನ್ನಷ್ಟು ಅಂಶಗಳು ಪ್ರಕಟವಾಗುವ ಸಾಧ್ಯತೆ ಇದೆ. ಆ ಎಲ್ಲಾ ಕೃತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಾಗದಿರುವುದು ಪ್ರಸ್ತುತ ಸಂಪ್ರಂಬಧದ ಮಿತಿಯು ಕಾರಣ. ಆದರೂ ಇಲ್ಲಿ ಅಧ್ಯಯನಕ್ಕೆ ಬಿಂಬಿತವಾದ 'ಕುಮಾರರಾಮನ ಸಾಂಸ್ಕೃತಿಕ ಚಹರೆಗಳನ್ನು ಕಟ್ಟಿಕೊಡಲು ಸಹಕಾರಿಯಾಗಿವೆ ಎಂಬ ವಿಶ್ವಾಸವನ್ನು ಇರಿಸಿಕೊಳ್ಳಲಾಗಿದೆ.

ಅಧ್ಯಾಯ-೨

ಪ್ರಸ್ತಾವನೆ-ವಿಷಯ ಪ್ರವೇಶ

೨೧ ಕುಮಾರರಾಮ : ಐತಿಹಾಸಿಕ ಮತ್ತು ಸಾಹಿತ್ಯಿಕ ಹಿನ್ನೆಲೆ

೨೨ ಕ್ಷೇತ್ರಕ್ಕೆ ಸಂಬಂಧಪಟ್ಟ ಇದುವರೆಗಿನ ಅಧ್ಯಯನಗಳು

ಹದಿನಾಲ್ಕನೇ ಶತಮಾನದ ಆದಿಭಾಗವು ದಕ್ಷಿಣ ಭಾರತದಲ್ಲಿ ಅದರಲ್ಲೂ ಹೆಚ್ಚಾಗಿ ಕರ್ನಾಟಕ ಚರಿತ್ರೆಯಲ್ಲಿಯೇ ಒಂದು ಪ್ರಮುಖ ಮೈಲಿಗಲ್ಲು. ಹೊಯ್ಸಳರು ತಮ್ಮ ರಾಜ್ಯದ ಉತ್ತರ ಭಾಗದ ಗಡಿಗಳನ್ನು ಸಂರಕ್ಷಿಸಲು ಅಸಮರ್ಥರಾದಾಗ ಸೇವುಣರು ಹೊಯ್ಸಳರ ರಾಜ್ಯದೊಳಗೆ ಬರುವಂತಾಯಿತು. ದೇವಗಿರಿಯ ಸೇವುಣರು, ದ್ವಾರಸಮುದ್ರದ ಹೊಯ್ಸಳರು, ವಾರಂಗಲ್ಲಿನ ಕಾಕತೀಯರು ಇತ್ಯಾದಿ ರಾಜಮನೆತನಗಳು ರಾಜ್ಯಭಾರ ಮಾಡುತ್ತಿದ್ದವು. ದೆಹಲಿ ಸುಲ್ತಾನನ ದಂಡನಾಯಕ ಮಲ್ಲಿಕಾಫರನ ಪ್ರಬಲವಾದ ದಾಳಿಯಿಂದ ಅವನತಿಯನ್ನು ಕಂಡವು. ಈ ಅವಕಾಶವನ್ನು ಮುಮ್ಮಡಿ ಸಿಂಗನಾಯಕನು ಉಪಯೋಗಿಸಿಕೊಂಡು ಕುಮ್ಮಟ ರಾಜ್ಯವನ್ನು ಹಂಪೆಯ ಪರಿಸರದಲ್ಲಿ ಸ್ಥಾಪಿಸಿದನು. ಸ್ವತಂತ್ರವಾಗಿಯೂ ಆಳ್ವಿಕೆ ಮಾಡಲು ಪ್ರಾರಂಭಿಸಿದನು. ಮುಮ್ಮಡಿ ಸಿಂಗನಾಯಕನು ಕುಮ್ಮಟದುರ್ಗದಲ್ಲಿ ರಾಜ್ಯಭಾರ ಮಾಡಿದನೆಂದು ಚರಿತ್ರೆಕಾರರು ಗುರುತಿಸಿದ್ದಾರೆ. ಇವನ ಉತ್ತರಾಧಿಕಾರಿಗಳಾದ ಕಂಪಿಲ ಮತ್ತು ಕುಮಾರರಾಮನ ಹೆಸರುಗಳನ್ನು ಚರಿತ್ರೆಕಾರರು ಉಲ್ಲೇಖಿಸಿದ್ದಾರೆ.

ಕ್ರಿ.ಶ. ೧೨೮೦ರ ವೇಳೆಗೆ ಮುಮ್ಮಡಿ ಸಿಂಗನಾಯಕ ಎಂಬುವನು ಕರ್ನಾಟಕ ರಾಜಕೀಯ ಚರಿತ್ರೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಇವನು ಮೊದಲಿಗೆ ಹೊಯ್ಸಳರ ಪರವಿದ್ದು, ನಂತರ ಸೇವುಣರ ಪಕ್ಷ ವಹಿಸುತ್ತಾನೆ. ಈ ನಡುವೆ ದರೋಜಿ ಮತ್ತು ಕಂಪಲಿ ಪ್ರದೇಶಗಳನ್ನು ಗೆದ್ದು, ನಂತರದಲ್ಲಿ ಕುಮ್ಮಟದುರ್ಗವನ್ನು ಹಿಡಿಯುತ್ತಾನೆ. ಕುಮ್ಮಟದುರ್ಗವು ಕರ್ನಾಟಕ ಪ್ರಾಚೀನ ಕೋಟೆಗಳಲ್ಲಿ ಒಂದಾಗಿದ್ದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ.

೨.೧. ಕುಮಾರರಾಮ : ಐತಿಹಾಸಿಕ ಮತ್ತು ಸಾಹಿತ್ಯಿಕ ಹಿನ್ನೆಲೆ

ಕುಮಾರರಾಮನ ವಿಚಾರವಾಗಿ ಇತಿಹಾಸಕಾರರ ಅಭಿಪ್ರಾಯಗಳನ್ನು ಗಮನಿಸಬಹುದಾಗಿದೆ. ವಿದೇಶಿ ಚರಿತ್ರೆಕಾರರಾದ ಬರೌನಿ, ಫೆರಿಷ್ತಾ, ಇಸಾಮಿ, ಇಬ್ನಬಟೂಟ್, ನ್ಯೂನಿಜ್ ಇವರ ಹೊತ್ತಿಗೆಗಳು ಕುಮಾರರಾಮನ ಬಗ್ಗೆ ಸುಳಿವು ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕುಮಾರರಾಮನ ಇತಿಹಾಸ ತಿಳಿಸುವಲ್ಲಿ ವಿದೇಶಿ ಪ್ರವಾಸಿಗರ ಬರಹಗಳು ಪ್ರಮುಖ ಪಾತ್ರವಹಿಸುತ್ತವೆ. ಅವುಗಳೆಂದರೆ ಫ್ರಾನ್ಸಿಸ್ ಬುಕನನ್‌ನ ಪ್ರವಾಸ ವೃತ್ತಾಂತ, ಮೆಕಂಜಿಯ ಹಸ್ತಪ್ರತಿ ಹಾಗೂ ಇತರ ಕೈಫಿಯತ್ತು. ಇವುಗಳ ಆಧಾರದ ಮೇಲೆ ಫಾದರ್ ಎಚ್. ಹೆರಾಸ್, ರಾಬರ್ಟ್ ಸಿವೆಲ್, ಲೂಯಿರೈಸ್, ವಿನ್ಸಂಟ್ ಸ್ಮಿತ್ ಮುಂತಾದವರು ಕುಮಾರರಾಮನ ಐತಿಹಾಸಿಕತೆಯನ್ನು ಖಚಿತಪಡಿಸಿದ್ದಾರೆ. ಅವನು ವಾಸಿಸುತ್ತಿದ್ದ

ಕೋಟೆ ಕೊತ್ತಲಗಳ ಪ್ರದೇಶದ ಮೇರೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಹೀಗೆ ಚರಿತ್ರೆಕಾರರ ದೃಷ್ಟಿಯಲ್ಲಿ ಕುಮಾರರಾಮ ಕಾಣಿಸಿಕೊಂಡಿದ್ದಾನೆ.

ಇತಿಹಾಸಕಾರರ ಅಭಿಪ್ರಾಯಗಳಲ್ಲದೇ ಶಾಸನಗಳಲ್ಲಿಯೂ ಕುಮಾರರಾಮನನ್ನು ಕುರಿತ ಕುರುಹುಗಳು ದೊರಕುತ್ತವೆ. ಕ್ರಿ.ಶ. ಹದಿಮೂರನೇ ಶತಮಾನದ ಹರಿಹರದ ಶಾಸನವು ಸೇವುಣ ರಾಮಚಂದ್ರನ ಆಳ್ವಿಕೆಯ ಕಾಲಕ್ಕೆ ಸೇರಿದ್ದಾಗಿದೆ. ಮುಮ್ಮಡಿ ಸಿಂಗನಾಯಕನ ಮಗನಾದ ಖಂಡೇರಾಯನು ದೇವಾಲಯವೊಂದಕ್ಕೆ ಹರಿಹರ ಗ್ರಾಮವನ್ನು ಪುನರ್‌ದತ್ತಿಯಾಗಿ ನೀಡುತ್ತಾನೆಂದು ಇದು ತಿಳಿಸುತ್ತದೆ. ಕಂಪಿಲದೇವನಿಗೆ ಖಂಡೇರಾಯ ಎಂಬ ಹೆಸರು ಇತ್ತು. ಹಂಪೆಯ ಹೇಮಕೂಟದ ದೇವಾಲಯವೊಂದ ರಲ್ಲಿರುವ ಶಾಸನವು ಮುಮ್ಮಡಿ ಸಿಂಗನಾಯಕನ ಮಗನಾದ ಕಂಪಿಲದೇವನು ಸಂಗಮೇಶ್ವರದೇವನ ಆರಾಧಕನಾಗಿದ್ದನೆಂದು ತಿಳಿಸುತ್ತದೆ. ತನ್ನ ತಾಯಿ ಮತ್ತು ತಂದೆ ಹಾಗೂ ಪೆರುಮಯನಾಯಕ ಇವರ ಜ್ಞಾಪಕಾರ್ಥವಾಗಿ ಶಿವಾಲಯವೊಂದನ್ನು ಕಟ್ಟಿಸಿದನು. ಅಲ್ಲಿ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆಂದು ಆ ಶಾಸನವು ತಿಳಿಸುತ್ತದೆ. ಕುಮ್ಮಟದುರ್ಗದಲ್ಲಿ ಕ್ರಿ.ಶ. ೧೩೧೫ರ ವೀರಗಲ್ಲು ಶಾಸನವನ್ನಾಧರಿಸಿ ಕಂಪಿಲದೇವನು ಹೊಯ್ಸಳ ವಂಶದ ಒಂದು ಶಾಖೆಗೆ ಒಳಪಟ್ಟವನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹಂಪೆಯ ಪ್ರಸನ್ನ ವಿರೂಪಾಕ್ಷ ದೇವಾಲಯದ ಹತ್ತಿರವಿರುವ, ಕಂಪಿಲರಾಯನಿಗೆ ಸಂಬಂಧಿಸಿದ ಶಾಸನವನ್ನು ಆಧರಿಸಿ ಆರ್.ಎಸ್. ಪಂಚಮುಖಿಯವರು ವಂಶಾವಳಿಯನ್ನು ಈ ರೀತಿ ಯಾಗಿ ಗುರುತಿಸಿದ್ದಾರೆ.

ಪೆರುಮೆಯ ನಾಯಕ (?)
|
ಮುಮ್ಮಡಿ ಸಿಂಗೇಯನಾಯಕ
|
ಮಾದನಾಯಕಿತಿ
|
ವೀರ ಕಂಪಿಲದೇವ
|
ಕುಮಾರ ರಾಮನಾಥ

(ವರದರಾಜ್‌ರಾವ್ ಜಿ.; ೧೯೯೯; ಪು. ೨೮)

ಜಿ. ವರದರಾಜರಾವ್ ಅವರು ಸಂಡೂರಿನ ರಾಮಪ್ಪುಡದಲ್ಲಿ ದೊರೆತ ಶಾಸನವನ್ನಾಧರಿಸಿ ಸಂತತಿಯನ್ನು ಹೀಗೆ ನಿರೂಪಿಸಿದ್ದಾರೆ.

ಮುಮ್ಮಡಿ ಸಿಂಗ
|
ಖಂಡೇರಾಯ/ಕಂಪಿಲರಾಯ
|
ವೀರಗುಜ್ಜಲ ಹರಿಹದೇವಿ
|
ಹೊಸಮಲೆಯ ರಾಮನಾಥ ಒಡೆಯ (ಅದೇ)

ಚನ್ನಬಸಪ್ಪ ಪಾಟೀಲ ಅವರು ಕುಮ್ಮಟದ ಶಾಸನವನ್ನಾಧರಿಸಿ ಕುಮಾರರಾಮನ ವಂಶಾವಳಿಯನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ.

ಪೆರುಮಯ ನಾಯಕ
|
ಮುಮ್ಮಡಿಸಿಂಗೇಯ ನಾಯಕ
|
ಮಾದನಾಯಕಿತಿಯೊಡನೆ ವಿವಾಹ
|
ಖಂಡೇರಾಯ ಅಲಿಯಾಸ್ ಕಂಪಿಲರಾಯ
|
ಗುಜ್ಜಲ ಹರಿಯಲದೇವಿಯೊಡನೆ ವಿವಾಹ
|
ಕುಮಾರ ರಾಮನಾಥ (ಅದೇ)

ಈ ವಂಶಾವಳಿಗಳೆಲ್ಲಾ ಹೆಚ್ಚುಕಡಿಮೆ ಸಾಮ್ಯತೆಯಿಂದ ಕೂಡಿವೆ. ಕುಮ್ಮಟದುರ್ಗದಲ್ಲಿ ಕಂಡುಬಂದ ವೀರಗಲ್ಲು, ಶಾಸನಗಳು, ಸುಲ್ತಾನನ ದಾಳಿಗಳಲ್ಲಿ ರಾಮನಾಯಕ ಮತ್ತು ಸಿಂಗ ಎಂಬ ವೀರರು ಕದನಗಳಲ್ಲಿ ಹೋರಾಡುತ್ತ ಮಡಿದರೆಂದು ತಿಳಿಸುತ್ತವೆ. ಈತನನ್ನು ಕುರಿತ ಶಾಸನಗಳು ಧಾರವಾಡ ಜಿಲ್ಲೆಯ ಸಂಗೂರು, ಬಳ್ಳಾರಿ ಜಿಲ್ಲೆಯ ರಾಮಘಡ ಮತ್ತು ಶಿವಮೊಗ್ಗ ಜಲ್ಲೆಯ ತೀರ್ಥಹಳ್ಳಿಯಲ್ಲಿ ಮೊದಲಾದ ಕಡೆಗಳಲ್ಲಿ ಲಭಿಸಿವೆ. ಕೆಲವು ಕೈಫಿಯತ್ತುಗಳು ದೊರೆತಿವೆ. ಈತನ ಪೂಜೆಗಾಗಿ ದೇವಾಲಯಗಳನ್ನು ಕಟ್ಟಿಸಿರುವ ವಿಚಾರಗಳು ಶಾಸನಗಳಲ್ಲಿ ಉಕ್ತವಾಗಿವೆ.

ಹೀಗೆ ಶಾಸನಗಳಲ್ಲಿ ಕುಮಾರರಾಮನ ಅಸ್ಥಿತ್ವ ಮತ್ತು ಅವನ ಮನೆತನದ ಬಗ್ಗೆ ವಿವರಗಳು ಸಿಗುತ್ತವೆ. ಕೈಫಿಯತ್ತು ಹಾಗೂ ಚರಿತ್ರೆಕಾರರು ಕುಮ್ಮಟದುರ್ಗ, ಕಂಪಿಲ, ಕುಮಾರರಾಮನ ಚರಿತ್ರೆಯ ಅಂಶಗಳನ್ನು ನೀಡಿದ್ದಾರೆ.

ಕುಮಾರರಾಮನ ಕಥೆ ಲಿಖಿತ ಮಾಧ್ಯಮಗಳಲ್ಲಿ ಪ್ರಸಾರಗೊಳ್ಳುವ ಪೂರ್ವದಲ್ಲಿಯೇ ಮೌಖಿಕ ಪರಂಪರೆಯಲ್ಲಿ ಮುಂದುವರಿದುಕೊಂಡು ಬಂದಿದೆ. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಾದ ಹಾಡು, ಕಥೆ, ಕಥನಗೀತೆ, ಮಹಾಕಾವ್ಯಗಳಲ್ಲಿ ಬಿಂಬಿತವಾಗಿದೆ. ಜನಪದ ರಂಗಕಲೆಗಳಾದ ತೊಗಲು ಗೊಂಬೆಯಾಟ, ಬಯಲಾಟ, ಸಣ್ಣಾಟ, ಯಕ್ಷಗಾನಗಳಲ್ಲಿ 'ಕುಮಾರರಾಮ' ಮೂಡಿಬಂದಿದ್ದಾನೆ. ಜನಪದ ಆಚರಣೆ ಸಂಪ್ರದಾಯಗಳಾದ ಶೂಲದ ಹಬ್ಬ ಮತ್ತು ಜಾತ್ರೆಗಳಲ್ಲಿ ಅವನ ಕಥೆ ಹರಡಿ ಕೊಂಡಿದೆ. ಜನಪದರ ನಂಬಿಕೆ, ಆಚರಣೆ, ಸಂಪ್ರದಾಯಗಳಲ್ಲಿ, ಉತ್ಸವ ಪರ್ವಗಳಲ್ಲಿ ಒಟ್ಟಾರೆ ಸಾಂಸ್ಕೃತಿಕ ಬದುಕಿನಲ್ಲಿ ಆತ ಚಿರಸ್ಮರಣೀಯನಾಗಿದ್ದಾನೆ. ನುಡಿಗಟ್ಟಿನಿಂದ ಮಹಾಕಾವ್ಯದವರೆಗೆ ಜನಪದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿವೆ. ಇಲ್ಲಿ ಹಬ್ಬ ಹರಿದಿನ ಮೊದಲಾದ ಆಚರಣೆಗಳಲ್ಲಿ ಕುಮಾರರಾಮನ ಜೀವನ ಅಭಿವ್ಯಕ್ತವಾಗಿದೆ. ಉದಾತ್ತ ನಾಯಕನಾದ ಕುಮಾರರಾಮನ ಜೀವನವು

ಅವನು ಬದುಕಿರುವಾಗ ಅಥವಾ ತೀರಿಹೋದ ಮೇಲೆ ದಂತಕಥೆಯ ಸ್ವರೂಪ ಪಡೆದುಕೊಂಡಿತು. ಅವನ ಭವ್ಯ ಜೀವನವನ್ನು ಜನಪದ ಕವಿಗಳು ಮಹಾಕಾವ್ಯದ ವ್ಯಾಪ್ತಿಯಲ್ಲಿ ವರ್ಣಿಸಿರುವುದು ಗಮನಾರ್ಹ (ತಳವಾರ ಎನ್.ಎಂ.; ೨೦೦೨; ಪು. ೧೧-೧೨).

ಕುಮಾರರಾಮನ ದುಂದುಮೆ, ಜಗ್ಗಲಿಗೆಯ ಹಾಡು, ಲಾವಣಿ, ತಂಬೂರಿ ಸಂಪ್ರದಾಯ ಹೀಗೆ ಗೀತೆಯ ನಾನಾ ಪ್ರಕಾರಗಳಲ್ಲಿ ಪ್ರಸಾರಗೊಂಡಿದ್ದಾನೆ. ಬಿ.ಎಸ್. ಗದ್ದಿಗಿಮಠ ಅವರು ಸಂಪಾದಿಸಿರುವ ಜನಪದ ಗೀತೆಗಳು ಎಂಬ ಸಂಕಲನದಲ್ಲಿ ಕುಮಾರರಾಮನನ್ನು ವಸ್ತುವಾಗಿರಿಸಿಕೊಂಡ 'ಕಂಪಲಿ' ಮತ್ತು 'ಕರ್ನಾಟಕದ ಕಂದ' ಎಂಬ ಎರಡು ಗೀತೆಗಳಿವೆ. ಇಲ್ಲಿ ನೈತಿಕ ಮೌಲ್ಯದ ರಕ್ಷಣೆಗೆ ಬದ್ಧನಾದ ಅವನನ್ನು ಬಲಾತ್ಕಾರದ ಅಪವಾದ ಹೊರಿಸಿ ದುರಂತಕ್ಕೆ ಈಡು ಮಾಡಲಾಯಿತು ಎಂಬುದೇ ಈ ಗೀತೆಗಳ ಕಥಾವಸ್ತು (ವರದರಾಜರಾವ್ ಜಿ.; ೧೯೬೬; ಪು. ೩೫೨).

ಕುಮಾರರಾಮನನ್ನು ಕುರಿತು ಜನಪ್ರಿಯವಾದ ಹಾಡುಗಳಿರುವಂತೆಯೇ ಜನಜನಿತವಾದ ಕಥೆಗಳೂ ಇವೆ. ಇವನ ಕುರಿತು ಗೊಂದಲಿಗರು, ಬುರ್ರಕಥಾ ಬಾಲನಾಗಮ್ಮ ಸಂಪ್ರದಾಯದವರು ಈ ಕಥೆಯನ್ನು ದೀರ್ಘವಾಗಿ ಮತ್ತು ಆಕರ್ಷಣೀಯವಾಗಿ ಹೇಳುತ್ತಾರೆ (ತಳವಾರ ಎನ್.ಎಂ., ೨೦೦೨, ಪು. ೩೪).

ಕುಮಾರರಾಮನ ಜೀವನ ಜನಪದ ಸಾಹಿತ್ಯ ಪರಂಪರೆಯಲ್ಲಿ ಕಥೆ, ಕಾವ್ಯವಾಗಿ ಉಳಿದು ಬೆಳೆದುಕೊಂಡು ಬಂದಿದೆ. ಮೌಖಿಕವಾದ ಈ ಶಬ್ದ ಮಾಧ್ಯಮದ ಜೊತೆಗೆ ಜನಪದ ಸಂಪ್ರದಾಯ, ಆಚರಣೆಗಳಲ್ಲಿಯೂ ಸ್ಥಾನ ಪಡೆದುಕೊಂಡ ಸಂಗತಿಗಳು ಸಿಗುತ್ತವೆ. ಕನ್ನಡನಾಡಿನ ವಿವಿಧೆಡೆಗಳಲ್ಲಿ ಕುಮಾರರಾಮನ ದೇವಾಲಯಗಳಿದ್ದು, ಆತನ ಹೆಸರಿನಲ್ಲಿ ಜಾತ್ರೆಗಳು ನಡೆಯುವುದನ್ನು ಇಂದಿಗೂ ಕಾಣುತ್ತೇವೆ. ಕುಮ್ಮಟದುರ್ಗದಲ್ಲಿಯೇ ಕುಮಾರರಾಮನ ಜಾತ್ರೆ ನಡೆಯುವುದು ಇದಕ್ಕೆ ನಿದರ್ಶನ. 'ದರೋಜಿ' ಹತ್ತಿರದ 'ರಾಂಪುರ'ದಲ್ಲಿ ಚಂಡಿನಾಟದ ಉತ್ಸವ ನಡೆಯುತ್ತದೆ. 'ಕೊರಟಗೆರೆ' ಮತ್ತು 'ಸುಲದಾಳ'ಗಳಲ್ಲಿಯೂ ಕುಮಾರರಾಮನ ದೇವಾಲಯಗಳಿದ್ದು ಪ್ರತಿವರ್ಷ ಜಾತ್ರೆ ನಡೆಯುತ್ತದೆ (ಅದೇ).

ಇತ್ತೀಚಿನ ಕೆಲವು ಪಂಡಿತರ ಪ್ರಯತ್ನದಿಂದ ಕುಮಾರರಾಮನಿಗೆ ಸಂಬಂಧಿಸಿದ ಕೆಲವು ಸಮಸ್ಯೆಗಳಿಗೆ ಸ್ವಲ್ಪಮಟ್ಟಿನ ಪರಿಹಾರ ದೊರಕಿದೆ. ಕುಮಾರರಾಮನು ಐತಿಹಾಸಿಕ ವ್ಯಕ್ತಿಯೆಂದು ಗುರುತಿಸಲು ಈ ಕೆಳಕಂಡ ಅಂಶಗಳು ಪರಿಶೀಲನಾರ್ಹವೆನಿಸಿವೆ.

೧. ಹಂಪೆ ಮತ್ತು ಜಟ್ಟಂಗಿ ರಾಮೇಶ್ವರಗಳಲ್ಲಿ ಕುಮಾರರಾಮನ ಸ್ಮರಣಾರ್ಥ ಪ್ರದೇಶಗಳಿರುವುದು.

೨. ಹಾನಗಲ್ಲಿನ ಮೂಡೂರು, ಮಲ್ಲುಂದ, ಶಿರಗೋಡ, ತುಮಕೂರು, ಕೊರಟಗೆರೆ ತಾಲ್ಲೂಕು ದೊಡ್ಡಪಾಲನಹಳ್ಳಿ, ಸಿದ್ದಾಪೂರ ತಾಲ್ಲೂಕು ಬೇಡಕರ್ಣಿ ಇವೇ ಮೊದಲಾದ ಕಡೆಗಳಲ್ಲಿ ಇರುವ ಅವನ ಹೆಸರಿನ ದೇವಾಲಯಗಳು.

೩. ಕ್ರಿ.ಶ. ೧೪೦೭ರ ಹಾವೇರಿ ಬಳಿಯ ಸಂಗೂರಿನ ಶಾಸನ, ಕ್ರಿ.ಶ. ೧೪೩೨ರ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಶಾಸನ, ಕ್ರಿ.ಶ. ೧೫೨೮ರಲ್ಲಿ ಸಂಡೂರಿನ ರಾಮಘಡದಲ್ಲಿ ದೊರೆತ ಶಾಸನ.

೪. ಜಿ. ವರದರಾಜರಾವ್ ಅವರು ತಮ್ಮ ನಿಬಂಧದಲ್ಲಿ ಉಲ್ಲೇಖಿಸಿರುವ ಇತ್ತೀಚಿನ 'ತಜ್‌ಕೆರಾತುಲ್ ಅವಾಲಿಯಾ' ಎಂಬ ಉರ್ದು ಗ್ರಂಥವಿದ್ದು, ತನ್ನ ಪೌರುಷ ಮತ್ತು ಶೌರ್ಯ ಗುಣಗಳಿಗೆ ಹೆಸರಾದವನು ಕುಮಾರರಾಮನಾಗಿದ್ದಾನೆ. ಕೆಚ್ಚೆದೆಯ ವೀರ, ಕಲಿ, ಜಟ್ಟಿ ಇತ್ಯಾದಿ ಗೌರವಗಳಿಗೆ ಪಾತ್ರನಾದ ಕುಮ್ಮಟದ ಯುವರಾಜ.

ಒಟ್ಟಾರೆಯಾಗಿ ಕರ್ನಾಟಕದ ಇತಿಹಾಸದಲ್ಲಿ ಒಂದು ಚಿಕ್ಕ ರಾಜ್ಯ ಅರಸು ಮನೆತನವಾಗಿದ್ದ ಕುಮ್ಮಟರಾಜ್ಯ ಕುಮಾರರಾಮನಿಂದಾಗಿ 'ಜನಪದ ಸಾಹಿತ್ಯ' ಪರಂಪರೆಯಲ್ಲಿ ಸ್ಥಾನ ಪಡೆದಿರುವ ಸಂಗತಿ ಗಮನಾರ್ಹವಾಗಿದೆ. ಹೀಗೆ 'ಜನಪದ ಸಾಹಿತ್ಯ'ದ ಪ್ರಕಾರಗಳಾದ ಕಥೆ, ಕಾವ್ಯ, ಆಚರಣೆ, ಸಂಪ್ರದಾಯ, ನಂಬಿಕೆ ಇವುಗಳಿಗೆ ಕುಮಾರರಾಮ ನಾಯಕ, ಈತನ ಬಗೆಗೆ ಅಷ್ಟಿಷ್ಟು ಐತಿಹಾಸಿಕ ಮಾಹಿತಿಗಳು ದೊರೆಯುತ್ತವೆ. ಜನಪದರಲ್ಲಿ ಒಬ್ಬ ಐತಿಹ್ಯ ವೀರನಾಗಿ ಚಿರಸ್ಮರಣೀಯನಾಗಿದ್ದಾನೆ.

ಕುಮಾರರಾಮನನ್ನು ಕುರಿತ 'ಜನಪದ ಸಾಹಿತ್ಯ' ಕಂಡುಬಂದಂತೆ ಇಲ್ಲಿ ಇವನ ಕುರಿತ 'ಲಿಖಿತ ಸಾಹಿತ್ಯ'ವು ವಿಪುಲವಾಗಿ ರಚನೆಯಾಗಿರುತ್ತದೆ. ಮಧ್ಯಕಾಲೀನ ಸಂದರ್ಭದಲ್ಲಿ ಕುಮಾರರಾಮನನ್ನು ಪ್ರಧಾನವಾಗಿಸಿ ಪ್ರಾಸಂಗಿಕ ಉಲ್ಲೇಖದ ಕಾವ್ಯಗಳು, ಸ್ವತಂತ್ರ ಕಾವ್ಯಗಳು ಕಂಡುಬರುತ್ತವೆ. ಮೊದಲಿಗೆ ಕುಮಾರರಾಮನನ್ನು ಕುರಿತ ಪ್ರಾಸಂಗಿಕವಾಗಿ ಉಲ್ಲೇಖಿಸುವ ಕೃತಿಗಳನ್ನು ಈ ಕೆಳಗಿನಂತೆ ಇಲ್ಲಿ ಚರ್ಚಿಸಲಾಗಿದೆ.

'ಚನ್ನಬಸವ ಪುರಾಣ', 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ', 'ನವರತ್ನ ಮಾಲಿಕೆ' ಎಂಬ ಕತೆಗಳಲ್ಲಿ ಈತನ ಪ್ರಾಸಂಗಿಕ ಪ್ರಸ್ತಾಪ ಬರುತ್ತದೆ. ನೇರವಾಗಿ ಕುಮಾರರಾಮನನ್ನು ಕುರಿತು ಹುಟ್ಟಿದ ಸ್ವತಂತ್ರ ಕಾವ್ಯಗಳ ಸಂಖ್ಯಾನಿರ್ಣಯ ಚರ್ಚೆಯ ವಿಷಯವಾಗಿಯೇ ಉಳಿದಿದೆ. ಈ ವಿಷಯವಾಗಿ ಮೊದಲು ಆಸಕ್ತಿ ವಹಿಸಿದವರು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು. ಅವರ ಪ್ರಕಾರ ಈತನನ್ನು ಕುರಿತ ಕಾವ್ಯ ಬರೆದವರು ಐದು ಜನ. ೧. ನಂಜುಂಡ, ೨. ಪಾಂಚಾಳಗಂಗ, ೩. ಗಂಗ, ೪. ನಾಗಸಂಗಯ್ಯ, ೫. ಮಹಾಲಿಂಗಸ್ವಾಮಿ. ಈ ಸಮಸ್ಯೆಯನ್ನು ಜಿ. ವರದರಾಜ ರಾವ್ ಅವರು ಕೈಗೆತ್ತಿಕೊಂಡು ಸಮಗ್ರ ಅಧ್ಯಯನ ಮಾಡಿದ್ದಾರೆ. ಇದರ ಫಲವಾಗಿ ಪಾಂಚಾಳಗಂಗ, ಗಂಗ, ನಾಗಸಂಗಯ್ಯ ಇವರ ಕೃತಿಗಳು ಒಂದೇ ಪಠ್ಯದ ವಿಸ್ತೃತ ರೂಪಗಳಾಗಿವೆ. ಇಲ್ಲಿ ಇವು ಸಂಕೋಚ ಆವೃತ್ತಿಗಳೆಂದು ಹೇಳುತ್ತಾರೆ. ಇವುಗಳ ಸಂಖ್ಯೆಯನ್ನು ಐದರಿಂದ ಎರಡಕ್ಕೆ ಇಳಿಸಿದ್ದಾರೆ. ಹೀಗೆ ಕುಮಾರರಾಮನನ್ನು ಕುರಿತ ಮಧ್ಯಕಾಲೀನ ಕನ್ನಡ ಸಾಹಿತ್ಯದಿಂದ ತೊಡಗಿ ಆಧುನಿಕ ಕಾಲಘಟ್ಟದವರೆಗೆ ಕುಮಾರರಾಮನ ಕಥೆ ಆಕರ್ಷಕವಾಗಿ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತವಾಗಿದೆ.

'ಚನ್ನರಾಮ ಸಾಂಗತ್ಯ' ಕೃತಿಯು ವಿಶಿಷ್ಟವಾದ ಚರಿತ್ರೆಯ ಅಂಶಗಳನ್ನು ತಿಳಿಸುತ್ತದೆ. ಈ ಕೃತಿಯ ವಿವರ ಹೀಗಿದೆ. ಕಂಪಲಿಯ ಅಧಿದೈವ ಸೋಮೇಶ್ವರ ಈ ದೇವರ ಕೃಪೆಯಿಂದ ಮುಮ್ಮಡಿ ಸಿಂಗನಾಯಕನಿಗೆ ಪುತ್ರನೊಬ್ಬನು ಹುಟ್ಟುತ್ತಾನೆ. ಆ ಮಗುವಿಗೆ ಕಂಪಿಲರಾಯ ಎಂದು ಹೆಸರಿಡುತ್ತಾರೆ ಎಂಬ ಸಂಗತಿ ಈ ಕೃತಿಯಲ್ಲಿ ದೊರೆಯುತ್ತದೆ. ಕಂಪಿಲದೇವರಾಯನ ಮಗನಾದ ರಾಮನಾಥನು ತನ್ನ ಶೌರ್ಯ, ಪ್ರಾಮಾಣಿಕ ನಡತೆ ಮತ್ತು ತ್ಯಾಗಗಳಿಗೆ ಪ್ರಸಿದ್ಧಿ ಪಡೆದವನೆಂದು ಈ ಸಾಂಗತ್ಯ ಕೃತಿಯಿಂದ ತಿಳಿದುಬರುತ್ತದೆ. ಕುಮಾರರಾಮನ ತಾತ ಮುಮ್ಮಡಿಸಿಂಗನಾಯಕನು ಒಬ್ಬ. ಈತನು ಶೂರ ನಾಯಕನಾಗಿದ್ದನು. ಆತನಿಗೆ ಮತ್ತು ಮಂಚಕ್ಕನ ಹೊಟ್ಟೆಯಲ್ಲಿ ಕಂಪಿಲನ ಜನನದ ವೃತ್ತಾಂತ ವಿದೆ. ಇವರು ಪೂವಾಲಿ ಕುಲದವರೆಂದು ಈ ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ.

ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದಲ್ಲಿ ಈ ಬಗೆಗೆ ಕಂಪಿಲನ ಹೊಸಮಲೆದುರ್ಗ ದಲ್ಲಿನ ರಾಜ್ಯಾಡಳಿತ, ಕುಮ್ಮಟದ ಕೋಟೆಯ ನಿರ್ಮಾಣದ ಕುರಿತು ಚಿತ್ರಿಸಲಾಗಿದೆ. ನಂತರ ದೆಹಲಿ ಸುಲ್ತಾನನು ೯೬ ಲಕ್ಷ ಸೈನಿಕರೊಡನೆ ಕುಮ್ಮಟಕ್ಕೆ ಮುತ್ತಿಗೆ ಹಾಕಿದ ಸಂದರ್ಭ ಮೂಡಿಬಂದಿದೆ. ಕಂಪಿಲ-ಕುಮಾರರಾಮನಾಥರು ಈ ಕದನದಲ್ಲಿ ಹತರಾದದ್ದು ಮತ್ತು ಇತರ ವಿವರಗಳಿವೆ.

ಲಿಂಗಣ್ಣ ಕವಿಯ 'ಕೆಳದಿನೃಪವಿಜಯ'ದಲ್ಲಿ ಕುಮಾರರಾಮ ಮತ್ತು ಕಂಪಿಲರಾಯನು ರಾಜ್ಯಂ ಗೈಯಿತ್ತಿಸುವ ಸನ್ನಿವೇಶವನ್ನು ತರಲಾಗಿದೆ. ಕೃತಿಯಲ್ಲಿ ದೆಹಲಿ ಸುಲ್ತಾನನ ದಾಳಿಯಿಂದ ವಾರಂಗಲ್ಲಿನ ಅವನತಿಯ ವಿವರಣೆ ಕೊಡಲಾಗಿದೆ. ದೆಹಲಿ ಸುಲ್ತಾನನ ಸೈನ್ಯವು ವಾರಂಗಲ್ಲಿನ ಕಾಕತೀಯ ವೀರರನ್ನು ಸೆರೆಹಿಡಿದ ಮಾಹಿತಿ ಕೊಡಲಾಗಿದೆ (ವರಜರಾಜ ರಾವ್ ಜಿ., ೧೯೬೬, ಪು. ೭). ಹೀಗೆ ಮುಂದುವರಿಕೆಯಾಗಿ ವಿದ್ಯಾರಣ್ಯರ ಕಾಲಜ್ಞಾನ, ಚೆನ್ನಬಸವ ಕಾಲಜ್ಞಾನ ಇವು ಕೂಡ ಕುಮಾರ ರಾಮನ ಕುರಿತು ಪ್ರಾಸಂಗಿಕವಾಗಿ ಚಿತ್ರಿಸುತ್ತವೆ.

ಕುಮಾರರಾಮನ ಕುರಿತು ಪ್ರಧಾನವಾಗಿರಿಸಿಕೊಂಡು ಕಾವ್ಯ ರಚಿಸಿದ ಆಧುನಿಕ ಪೂರ್ವಕವಿಗಳು ಸರಳತೆಯ ಮೂಲಕ ಸುಂದರ ನಿರೂಪಣೆಗೆ ಸಹಕಾರಿಯಾದ ಸಾಂಗತ್ಯ ಪ್ರಕಾರವನ್ನು ರೂಢಿಸಿಕೊಂಡಿದ್ದಾರೆ. ಇಲ್ಲಿ ಕುಮಾರರಾಮನ ವೀರ ಜೀವನ ಕುರಿತು ಬಹುಪಾಲು ಕವಿಗಳು ಹಾಡಿದ್ದಾರೆ. ಅವರುಗಳಲ್ಲಿ ಪ್ರಧಾನನಾದವನು ನಂಜುಂಡ ಕವಿ. ಇವನು ಹದಿನಾರನೇ ಶತಮಾನದಲ್ಲಿ ಬದುಕಿ ಬಾಳಿದವನು. ಇವನ ಕೃತಿಯ ಹೆಸರು 'ರಾಮನಾಥ ಚರಿತೆ'. ಅದು 'ಕುಮಾರರಾಮನ ಸಾಂಗತ್ಯ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಕೃತಿ ಕುಮಾರರಾಮನ ಆದರ್ಶ ಜೀವನವನ್ನು ಬಿಂಬಿಸುತ್ತದೆ. ಈ ಸಂದೇಶವನ್ನು ಬಹುಜನಕ್ಕೆ ಮುಟ್ಟಿಸಲು ನೆರವಾದ ಗ್ರಂಥವಾಗಿದೆ. ಇನ್ನೂ ಅನೇಕರು ಕುಮಾರರಾಮನ ಜೀವನವನ್ನು ಆಧರಿಸಿ ಸಾಂಗತ್ಯ ಕೃತಿಗಳನ್ನು ರಚಿಸಿದ್ದಾರೆ. ಅವರಲ್ಲಿ 'ಚನ್ನರಾಮ ಸಾಂಗತ್ಯ'ವನ್ನು ರಚಿಸಿದ ಪಾಂಚಾಳಗಂಗ ಮತ್ತು 'ಬಾಲರಾಮನ ಸಾಂಗತ್ಯ' ಕೃತಿಯ ಕರ್ತೃ ಮಹಾಲಿಂಗಸ್ವಾಮಿ ಮುಖ್ಯರು. ಕುಮಾರರಾಮನನ್ನು ಕುರಿತ ಕೃತಿ ರಚಿಸಿದ ಇನ್ನುಳಿದ ಕವಿ ಕೃತಿಗಳನ್ನು ಈ ರೀತಿ

ಹೆಸರಿಸಬಹುದಾಗಿದೆ. ಕವಿಜಾಣ ಗಂಗಯ್ಯನ 'ಚೆನ್ನರಾಮ ಸಾಂಗತ್ಯ', ನಾಗಸಂಗಯ್ಯನ 'ಪರದಾರ ಸೋದರ ರಾಮನ ಸಾಂಗತ್ಯ' ಅಥವಾ 'ಪರನಾರಿಯರಿಗೆ ಸೋದರನೆಂಬ ಕಥೆ' ಇವುಗಳಲ್ಲದೆ ತೆಲುಗಿನಲ್ಲಿಯೂ ಕುಮಾರರಾಮನ ಬಗೆಗೆ ಕಾವ್ಯ ರಚನೆಯಾದ 'ಕುಮಾರ ರಾಮುನಿ ಕಥಾ' ಎಂಬ ಈ ಸಾಂಗತ್ಯ ಕೃತಿಯ ಕರ್ತೃ ಯಾರೆಂಬುದು ತಿಳಿದುಬಂದಿಲ್ಲ. ಹೀಗೆ ಸಾಂಗತ್ಯ ಕೃತಿಗಳು, ಕೈಫಿಯತ್ತುಗಳು, ಉದಂತಗಳು, ಕುಮಾರರಾಮನನ್ನು ಓರ್ವ ಸಾಂಸ್ಕೃತಿಕ ನಾಯಕನಂತೆ ಕಾಣಲು ಅನುವು ಮಾಡಿಕೊಡುತ್ತವೆ.

ಹೊಸಗನ್ನಡದಲ್ಲಿ ಮೂಲಗ್ರಂಥಗಳನ್ನಾಧರಿಸಿ ಕುಮಾರರಾಮನನ್ನು ನಾಯಕತ್ವದ ಸ್ಥಾನದಲ್ಲಿ ನಿಲ್ಲಿಸಿ ವಿಮರ್ಶಾತ್ಮಕ ಬರಹಗಳು ಬಂದಿವೆ. ತೌಲನಿಕ ಬರಹಗಳನ್ನು ರಚಿಸಿದ್ದಾರೆ. ಈ ಕುರಿತು ಲೇಖನಗಳನ್ನು ಇತ್ತೀಚಿನ ಪಂಡಿತರನೇಕರು ಬರೆದಿದ್ದಾರೆ. ಕುಮಾರರಾಮನಿಗೆ ಸಂಬಂಧಿಸಿದ ಮೂಲ ಸಾಹಿತ್ಯದ ಹಲವು ತುಣುಕುಗಳನ್ನು ಕೆಲವು ಪಂಡಿತರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಮುಖ್ಯರಾದವರು ಜಿ. ವರದರಾಜ ರಾವ್, ದೇ. ಜವರೇಗೌಡ, ಎನ್. ಅನಂತರಂಗಾಚಾರ್ಯ, ಬಿ.ಎಸ್. ಗದಗಿನಮಠ, ಚದುರಂಗ, ಎಂ.ಎಚ್. ರಾಮಶರ್ಮ, ಹುಲ್ಲೂರು ಶ್ರೀನಿವಾಸ ಜೋಯಿಸ, ಕೆ. ರಾಮಕೃಷ್ಣಯ್ಯ, ಎನ್. ವೆಂಕಟರಮಣಯ್ಯ, ವೈ.ವಿ. ಸುಬ್ಬಯ್ಯನಾಯ್ಡು ಇವರೇ ಮೊದಲಾದವರೂ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕುಮಾರರಾಮನ ಬಗೆಗೆ ಪೂರಕ ಸಾಹಿತ್ಯ ಮತ್ತು ಐತಿಹಾಸಿಕ ಕೃತಿಗಳನ್ನು ರಚಿಸಿದ್ದಾರೆ. ಇನ್ನೂ ಚರಿತ್ರೆಕಾರರಾದ ಬಿ.ಎಲ್. ರೈಸ್, ಎಚ್. ಹೆರಾಸ್, ಕೆ.ವಿ. ನೀಲಕಂಠಶಾಸ್ತ್ರಿ, ಎನ್. ವೆಂಕಟರಮಣಯ್ಯ, ಎಂ. ರಾಮರಾವ್, ಬಿ.ಎ. ಸಾಲೆತ್ತೂರು, ರಾಬರ್ಟ್ ಸಿವೆಲ್, ಎಸ್. ಶ್ರೀಕಂಠಯ್ಯ ಇವರುಗಳ ಕೃತಿಗಳು ಇಲ್ಲಿ ಉಲ್ಲೇಖನೀಯ. ಎಂ.ಎಚ್. ರಾಮಶರ್ಮರು ಸುಮಾರು ಆರು ಲೇಖನಗಳನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಸುಮಾರು ಇಪ್ಪತ್ತು ಲೇಖನಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ರಚಿಸಿದ್ದಾರೆ. ಇತರ ಲೇಖಕರಿಗಿಂತ ಹೆಚ್ಚು ಲೇಖನಗಳನ್ನು ಪ್ರಕಟಿಸಿದವರು ಇವರಿರ್ವರೇ.

ಹೀಗೆ ಒಟ್ಟಿನಲ್ಲಿ ಹೇಳುವುದಾದರೆ 'ಕುಮಾರರಾಮ' ಕುರಿತಾಗಿ ಆಧುನಿಕ ಸಂದರ್ಭದಲ್ಲಿ ರಚನೆಯಾದ ವಿವಿಧ ಪ್ರಕಾರಗಳ ಸಾಹಿತ್ಯ ಕೃತಿಗಳಿಗೆ ಮಧ್ಯಕಾಲೀನ ಐತಿಹಾಸಿಕ ಅಂಶಗಳು, ಮೌಖಿಕ ಸಂಪ್ರದಾಯದ ಕಾವ್ಯಗಳು, ಕೃತಿಗಳು, ಹಾಗೂ ನಂಜುಂಡ ಕವಿಗಳು ರಚಿಸಿದ ಸಾಂಗತ್ಯ ಕೃತಿಗಳು ಪ್ರಮುಖ ಆಕರಗಳಾಗಿವೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅದರಲ್ಲೂ ಹದಿನಾರನೇ ಶತಮಾನದ ನಂಜುಂಡ ಕವಿಯ 'ರಾಮನಾಥ ಚರಿತೆ' ಅಥವಾ 'ಕುಮಾರರಾಮನ ಸಾಂಗತ್ಯ' ಆಧುನಿಕ ಲೇಖಕರನ್ನು ವಿಶೇಷವಾಗಿ ಪ್ರಭಾವಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ.

೨.೨. ಕ್ಷೇತ್ರಕ್ಕೆ ಸಂಬಂಧಪಟ್ಟ ಇದುವರೆಗಿನ ಅಧ್ಯಯನಗಳು

ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಕುಮಾರರಾಮನ ಹೆಸರು ಉಲ್ಲೇಖನೀಯ.

ಕುಮ್ಮಟದ ನಾಯಕರ ಮನೆತನದಲ್ಲಿ ಕೊನೆಯವನಾಗಿ ಕಂಡುಬರುವ ಈತನ ಬಗೆಗೆ ಐತಿಹಾಸಿಕ ಆಕರಗಳಲ್ಲಿ ಹೆಚ್ಚಿನ ವಿವರಗಳಿಲ್ಲದಿದ್ದರೂ ಮೌಖಿಕ ಸಾಹಿತ್ಯ ಮತ್ತು ಲಿಖಿತ ಸಾಹಿತ್ಯ ಪರಂಪರೆಯಲ್ಲಿ ಸಾಕಷ್ಟು ವಿವರಗಳು ಲಭ್ಯವಾಗುತ್ತವೆ. ಜನಮಾನಸದಲ್ಲಿ ಆತ ಓರ್ವ ಆದರ್ಶ ಐತಿಹಾಸಿಕ ಪುರುಷನಾಗಿ, ಸಾಂಸ್ಕೃತಿಕ ನಾಯಕನಾಗಿ, ಆರಾಧ್ಯ ದೈವವಾಗಿ ನೆಲೆನಿಂತಿದ್ದಾನೆ. ಕರ್ನಾಟಕದಾದ್ಯಂತ ಆತನ ಗುಡಿಗಳಿದ್ದು ಅಲ್ಲಲ್ಲಿ ಆತನ ಆರಾಧನೆ ಜಾತ್ರೆಗಳು ನಡೆಯುತ್ತವೆ. ಕುಮಾರರಾಮನ ಬಗೆಗೆ ಪ್ರಚಲಿತವಿರುವ ಐತಿಹಾಸಿಕ ವಿವರಗಳು, ಮೌಖಿಕ ಸಂಪ್ರದಾಯಗಳು, ನಂಬಿಕೆ, ಆಚರಣೆಗಳು ಹಾಗೇ ಲಿಖಿತ ಸಾಹಿತ್ಯಗಳನ್ನೆಲ್ಲ ಒಟ್ಟಾಗಿ 'ಕುಮಾರರಾಮನ ಪಂಥ' ಎಂದು ಕರೆಯಬಹುದಾಗಿದೆ. ಹೀಗೆ ಒಟ್ಟಾರೆಯಾಗಿ ಕುಮಾರರಾಮನ ಪಂಥದ ಕುರಿತಾಗಿ ಈಗಾಗಲೇ ಹಲವು ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಕೆಲವು ಎಂ.ಫಿಲ್., ಪಿಎಚ್.ಡಿ.ಗಳಂಥ ಪದವಿ ಸಂಶೋಧನೆಗಳಾದರೂ ಇನ್ನೂ ಕೆಲವು ಐತಿಹಾಸಿಕ ಲೇಖನಗಳ ರೂಪದಲ್ಲಿವೆ. ಕುಮಾರರಾಮನ ಕುರಿತಾಗಿ ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ರಚಿತವಾದ ಐತಿಹಾಸಿಕ ಲೇಖನಗಳ ಕುರಿತಾಗಿ ಈಗಾಗಲೇ ಪ್ರಸ್ತಾಪಿಸಲಾಗಿದೆ. ಆದುದರಿಂದ ಇಲ್ಲಿ ಮುಖ್ಯವಾಗಿ ಕುಮಾರರಾಮನ ಪಂಥದ ಕುರಿತಾಗಿಯೂ ಕಾವ್ಯ-ಕೃತಿಗಳ ಕುರಿತಾಗಿಯೂ ನಡೆದ ಅಧ್ಯಯನಗಳನ್ನು ಗಮನಿಸಬೇಕಾಗುತ್ತದೆ.

ಅವುಗಳಲ್ಲಿ ಜಿ. ವರದರಾಜ ರಾವ್ ಅವರ 'ಕುಮಾರರಾಮನ ಸಾಂಗತ್ಯಗಳು' ಎಂಬ ಕೃತಿಯು ಪ್ರಮುಖವಾದುದು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಈ ಪಿಎಚ್.ಡಿ. ಮಹಾ ಪ್ರಬಂಧವು ೧೯೬೬ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಕುಮಾರರಾಮನ ಪಂಥ ಕುರಿತಾಗಿ ಇದುವರೆಗೆ ನಡೆದ ಅಧ್ಯಯನಗಳಲ್ಲಿ ಪ್ರಸ್ತುತ ಕೃತಿಗೆ ಮಹತ್ವದ ಸ್ಥಾನವಿದೆ. ಕುಮಾರರಾಮನ ಕಥೆಯನ್ನು ಆರು ಜನ ಕವಿಗಳು ಬರೆದಿರುವರೆಂಬ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಪ್ರಾಯವನ್ನು ಸಕಾರಣವಾಗಿ ವಿಮರ್ಶಿಸಿ ಅದು ಸೂಕ್ತವಲ್ಲವೆಂದು ಇಲ್ಲಿ ತೋರಿಸಿಕೊಡಲಾಗಿದೆ.

ನಂಜುಂಡ, ಪಾಂಚಾಳಗಂಗ ಮತ್ತು ಮಹಾಲಿಂಗ ಸ್ವಾಮಿಗಳ ಕೃತಿಗಳನ್ನು ತೌಲನಿಕವಾಗಿ ಇಲ್ಲಿ ಪರಿಶೀಲಿಸಲಾಗಿದೆ. ಜನಜನಿತವಾದ ಕಥೆಗಳು, ಯಕ್ಷಗಾನಗಳು, ಜನಪದ ಸಾಹಿತ್ಯ, ಕೈಫಿಯತ್ತುಗಳು ಮೊದಲಾದವುಗಳಲ್ಲಿ ಚಿತ್ರಿತವಾಗಿರುವ ಕುಮಾರರಾಮನ ವ್ಯಕ್ತಿತ್ವವನ್ನು ಈ ಮಹಾ ಪ್ರಬಂಧದಲ್ಲಿ ಪರಿಚಯಿಸಲಾಗಿದೆ. ಚಾರಿತ್ರಿಕ ದೃಷ್ಟಿಯಿಂದ ಕುಮಾರರಾಮನ ಸಾಂಗತ್ಯಗಳ ಸ್ಥಾನವನ್ನು ಆಧಾರ ಸಹಿತವಾಗಿ ಈ ಅಧ್ಯಯನದಲ್ಲಿ ವಿಚಾರ ಮಾಡಲಾಗಿದೆ. ಸಾಹಿತ್ಯ ಕೃತಿಯಾಗಿಯೂ, ಸಾಂಸ್ಕೃತಿಕವಾಗಿಯೂ ಕುಮಾರರಾಮನ ಸಾಂಗತ್ಯಗಳ ಮಹತ್ವವನ್ನು ವಿಮರ್ಶಿಸಲಾಗಿದೆ. ಕುಮಾರರಾಮನ ಕಥೆಯನ್ನು ಮೂವರು ಕವಿಗಳು ಹೇಗೆ ನಿರೂಪಿಸಿದ್ದಾರೆ ಎಂಬುದನ್ನು ಇಲ್ಲಿ ಪರಸ್ಪರವಾಗಿ ಹೋಲಿಸಿ ನೋಡಲಾಗಿದೆ. ರಣಧೀರನನ್ನು ಕುರಿತು ಸಾಹಿತಿಗಳೂ, ಚರಿತ್ರಕಾರರೂ ಪದೇ ಪದೇ ವಿಚಾರ ಮಾಡಿರುವುದರಿಂದ ಅವನ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲಿದ್ದಾರೆ.

ಎನ್.ಎಂ. ತಳವಾರ ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ 'ನಂಜುಂಡ ಕವಿಯ ರಾಮನಾಥ ಚರಿತೆ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾ ಪ್ರಬಂಧವು ೨೦೦೩ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

ಕವಿ-ಕಾವ್ಯ ಪರಿಚಯ, ಕುಮಾರರಾಮನ ಕಾಲದ ಯುದ್ಧ ಪದ್ಧತಿ, ಕಾವ್ಯದಿಂದ ವ್ಯಕ್ತವಾಗುವ ಆ ಕಾಲದ ನಂಬಿಕೆ, ಸಂಪ್ರದಾಯ ಆಚರಣೆಗಳು ಹಾಗೂ ಜೀವನ ಮೌಲ್ಯಗಳು ಹೀಗೆ ರಾಮನಾಥ ಚರಿತೆಯಲ್ಲಿ ಅಭಿವ್ಯಕ್ತವಾಗಿರುವ ಸಾಂಸ್ಕೃತಿಕ ಸಂಗತಿಗಳನ್ನು ಅಧ್ಯಯನಕಾರರು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಸುರೇಶ ಬಿ. ಹರ್ಲಾಪೂರ ಅವರು 'ಕುಮಾರರಾಮನ ಅಧ್ಯಯನದ ಆಕರಗಳು' ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ೨೦೦೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಕುಮಾರರಾಮನ ಕುರಿತು ಬಂದ ಎಲ್ಲಾ ಆಕರಗಳನ್ನು ಕ್ರೂಡೀಕರಿಸಿ ಇದನ್ನು ಸಿದ್ಧಪಡಿಸಲಾಗಿದೆ. ಕುಮಾರರಾಮನ ಕುರಿತಾದ ಅಧ್ಯಯನಕ್ಕೆ ಲಭ್ಯವಾಗುವ ವಿವಿಧ ಬಗೆಯ ಆಕರಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿ, ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಆ ಮೂಲಕ ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಕುಮಾರರಾಮನಿಗೆ ಇದ್ದ ಸಾಂಸ್ಕೃತಿಕ ಮಹತ್ವವನ್ನು ತೆರೆದುತೋರಿಸಲಾಗಿದೆ. ಕುಮಾರರಾಮ ಮತ್ತು ಆತನ ಮನೆತನದ ಐತಿಹಾಸಿಕ ಹಿನ್ನೆಲೆಯನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ. ಶಾಸನಗಳು, ವೀರಗಲ್ಲು, ವಾಸ್ತುಶಿಲ್ಪ, ಕೈಫಿಯತ್ತುಗಳು, ದಾಖಲು ಸಾಹಿತ್ಯ, ಜನಪದ ಆಚರಣೆಗಳು, ಜನಪದ ಸಾಹಿತ್ಯ, ಶಿಷ್ಟ ಸಾಹಿತ್ಯ ಇತ್ಯಾದಿ ಆಕರಗಳು ಕುಮಾರರಾಮನ ಬಗೆಗಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಹೇಗ ನೇರವಾಗುತ್ತವೆ ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ. ಜನಪದ ಸಾಹಿತ್ಯದಲ್ಲಿ ಐತಿಹ್ಯ, ವದಂತಿ, ಗೀತೆಗಳು, ಕಥೆಗಳು, ಯಕ್ಷಗಾನ ಪ್ರಸಂಗಗಳು ಇತ್ಯಾದಿ ಪ್ರಕಾರಗಳನ್ನು ಗುರುತಿಸಿಕೊಳ್ಳಲಾಗಿದೆ. ಜನಪದ ಆಚರಣೆಗಳಲ್ಲಿ ಜಾತ್ರೆಗಳು, ಹಬ್ಬಗಳು ಕುಲದೇವತಾ ಪದ್ಧತಿ ಈ ಕುರಿತು ಮಾಹಿತಿ ಒದಗಿಸಲಾಗಿದೆ. ಅದೇ ರೀತಿ ಶಿಷ್ಟ ಸಾಹಿತ್ಯವನ್ನು ಮಧ್ಯಕಾಲೀನ ಸಾಂಗತ್ಯ ಕೃತಿಗಳು ಮತ್ತು ಆಧುನಿಕ ಕನ್ನಡ ಸಾಹಿತ್ಯ ಎಂದು ವಿಂಗಡಿಸಿಕೊಳ್ಳಲಾಗಿದೆ. ಸಂಶೋದಕರು ನಡುಗನ್ನಡಪದ ಸಾಂಗತ್ಯ ಕೃತಿಗಳನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆಧುನಿಕ ಸಾಹಿತ್ಯದಲ್ಲಿ ಕಾದಂಬರಿಗಳು, ನಾಟಕಗಳು ಹಾಗೂ ಇತರ ಕೃತಿಗಳನ್ನು ಪ್ರಸ್ತಾಪಿಸಲಾಗಿದೆ. ಕುಮಾರರಾಮನ ಕುರಿತು ಬಂದಿರುವಂತಹ ಎಲ್ಲಾ ಆಕರಗಳ ಕುಮಾರರಾಮನ ಬಗಗೆ ಲಭ್ಯವಿರುವ ಎಲ್ಲಾ ವಿಧದ ಆಕರಗಳನ್ನು ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಬಹುದಾದ ಸಾಧ್ಯತೆ ಯನ್ನು ಪ್ರಸ್ತುತ ಮಹಾಪ್ರಬಂಧವು ತೆರೆದುತೋರಿಸುತ್ತದೆ. ಅನುಬಂಧದಲ್ಲಿ ಕುಮಾರರಾಮನನ್ನು ಪ್ರತಿನಿಧಿಸುವ ದೇವಾಲಯಗಳ ಯಾದಿಯನ್ನು ಚಿತ್ರಸಹಿತ ಕೊಡಲಾಗಿದೆ.

ಒಟ್ಟಾರೆಯಾಗಿ ಕುಮಾರರಾಮನ ಬಗೆಗೆ ಅಧ್ಯಯನ ನಡೆಸಬಯಸುವ ಆಸಕ್ತರಿಗೆ ಅವಶ್ಯವಿರುವ ಆಕರಗಳ ವಿವರವಾದ ಮಾಹಿತಿಯನ್ನು ಪ್ರಸ್ತುತ ಮಹಾಪ್ರಬಂಧವು ಒದಗಿಸಿಕೊಡುತ್ತದೆ.

ಜಿ.ಎಂ. ಮಂಜುನಾಥ ಅವರು ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕುಮ್ಮಟದ ನಾಯಕರು : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧವನ್ನು ಕೂಡ ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಇಲ್ಲಿ ಕುಮ್ಮಟದ ಬಗ್ಗೆ ಅಥವಾ ಕುಮಾರರಾಮನ ಬಗೆಗೆ ಲಭ್ಯವಿರುವಂಥ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ಕುಮ್ಮಟದುರ್ಗ ಮತ್ತು ಅಲ್ಲಿನ ನಾಯಕ ಮನೆತನದ ಕುರಿತು ಲಭ್ಯವಾಗುವ ವಿವಿಧ ಆಕರಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಶಾಸನಗಳು, ಕೈಫಿಯತ್ತುಗಳು ಮತ್ತು ವಿದೇಶಿ ಪ್ರವಾಸಿಗರ ಬರಹಗಳನ್ನು ಪ್ರಮುಖ ಆಕರವಾಗಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ. ಇನ್ನಿತರ ಪ್ರಾಕ್ತನ ಸಾಮಗ್ರಿಗಳನ್ನು ಆನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ. ಆ ಕಾಲದಲ್ಲಿ ಸ್ತ್ರೀಯರಿಗಿದ್ದ ಸ್ಥಾನಮಾನ, ಕುಮಾರರಾಮನ ಐತಿಹಾಸಿಕತೆ, ಕುಮ್ಮಟದ ನಾಯಕರ ಕಾಲದ ವಾಸ್ತು ಶಿಲ್ಪ, ಧರ್ಮ, ಉತ್ಸವ, ಆಚರಣೆಗಳು ಇತ್ಯಾದಿ ಅಂಶಗಳ ಬಗೆಗೆ ಇಲ್ಲಿ ಚರ್ಚಿಸಲಾಗಿದೆ.

ಸುರೇಶ ಬಿ. ಹರ್ಲಾಪುರ ಅವರು 'ಕೈಫಿಯತ್ತುಗಳಲ್ಲಿ ಕುಮಾರರಾಮ' ಎಂಬ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದು ೨೦೦೨ರಲ್ಲಿ ಪುಸ್ತಕವಾಗಿಯೂ ಪ್ರಕಟಗೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ಕೈಫಿಯತ್ತುಗಳಲ್ಲಿ ಬಿಂಬಿತವಾಗಿರುವ ಕುಮಾರರಾಮನ ಚಹರೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಕುಮಾರರಾಮನ ಮನೆತನದ ಐತಿಹಾಸಿಕ ಹಿನ್ನೆಲೆಯನ್ನು ಕೈಫಿಯತ್ತುಗಳ ಮುಖೇನ ತಿಳಿಯುವ ಪರಿ ಇಲ್ಲಿದೆ. ಮುಂದುವರಿಕೆಯಾಗಿ ಕುಮಾರರಾಮನ ಪೂರ್ವಿಕ ಮನೆತನದ ಇತಿಹಾಸವನ್ನು ಕೈಫಿಯತ್ತುಗಳ ಸಹಾಯದಿಂದ ಕಟ್ಟಿಕೊಡಲಾಗಿದೆ. ಕುಮಾರರಾಮನ ಸಾಹಸ, ವೀರತ್ವದ ಗುಣಗಳು ಕೈಫಿಯತ್ತುಗಳಲ್ಲಿ ಹೇಗೆ ಬಿಂಬಿತವಾಗಿವೆ ಎಂಬುದನ್ನು ದಾಖಲೆಗಳ ಸಹಿತ ಚಿತ್ರಿಸಲಾಗಿದೆ. ಕೈಫಿಯತ್ತುಗಳಿಗೆ ಪೂರಕವಾಗಿ ಜನಪದ ಸಾಹಿತ್ಯದಲ್ಲೂ ಕುಮಾರರಾಮನನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ಇಲ್ಲಿ ಪ್ರಾಸಂಗಿಕವಾಗಿ ಚಿತ್ರಿಸಲಾಗಿದೆ. ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕುಮಾರರಾಮನ ಮಹತ್ವವನ್ನು ಪಡೆದುಕೊಂಡ ರೀತಿಯ ಕಡೆ ಲಕ್ಷವಹಿಸಲಾಗಿದೆ. ಇಲ್ಲಿ ಇತಿಹಾಸ ಶೋಧನೆಯನ್ನು ಸಾಂಸ್ಕೃತಿಕ ವಿವರಗಳ ಪರಿಶೀಲನೆಯನ್ನು ಜೊತೆ ಜೊತೆಯೆ ನಡೆಸಿದ್ದಾರೆ. ಪ್ರಸ್ತುತ ಸಂಪ್ರಬಂಧದಲ್ಲಿ ಇತಿಹಾಸ ಶೋಧನೆಗೆ ಹೆಚ್ಚಿನ ಲಕ್ಷಕೊಡಲಾಗಿದೆ. ಹಾಗೇನೆ ಇತಿಹಾಸವನ್ನು ಕೈಫಿಯತ್ತುಗಳ ಮೂಲಕ ಶೋಧಿಸಿರುವುದು ಗಮನಾರ್ಹವಾಗಿದೆ. ಕೈಫಿಯತ್ತುಗಳು ಮೌಖಿಕ ಪರಂಪರೆ ಮತ್ತು ಲಿಖಿತ ಪರಂಪರೆಗಳೆರಡರ ಸಂಯೋಜಿತ ರೂಪಗಳೆನ್ನಬಹುದು. ಈ ಅಧ್ಯಯನದಲ್ಲಿ ಕೈಫಿಯತ್ತುಗಳು ಒದಗಿಸುವ ಸಾಮಗ್ರಿಗೆ ಹಿನ್ನೆಲೆಯಾಗಿ ಶಾಸನ ಮತ್ತು ಶಿಷ್ಟಕಾವ್ಯಗಳ ವಿವರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಇಡಿಯಾಗಿ

ಕುಮಾರರಾಮನ ಇತಿಹಾಸ ನೋಡಬೇಕೆಂದವರಿಗೆ ಇದೊಂದು ಆಕರ ಗ್ರಂಥದಂತಿದೆ. ಈ ಕೃತಿಯು ಕೈಫಿಯತ್ತುಗಳನ್ನು ಲಕ್ಷವಾಗಿರಿಸಿಕೊಂಡು ಬೇರೆ ಇಂಥ ಅಧ್ಯಯನಗಳನ್ನು ನಡೆಸಲು ಮಾರ್ಗಸೂಚಿಯನ್ನು ಒದಗಿಸುತ್ತದೆ.

ಎಸ್.ಎಂ. ಸಾವಿತ್ರಿಯವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕುಮಾರರಾಮ ಸಂಪ್ರದಾಯದ ಅಧ್ಯಯನ' ಎಂಬ ಎಂ.ಫಿಲ್ ಸಂಪ್ರಬಂಧವು ೨೦೦೭ರಲ್ಲಿ ಪುಸ್ತಕವಾಗಿ ಪ್ರಕಟಣೆ ಕಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ಕಂಪ್ಲಿ ಕುಮ್ಮಟದುರ್ಗದ ಸುತ್ತಲಿನ ಪರಿಸರದ ಬಗ್ಗೆ ವಿವರಗಳನ್ನು ಕಟ್ಟಿಕೊಡಲಾಗಿದೆ. ಕುಮಾರರಾಮ ಚಾರಿತ್ರಿಕ ವೀರನಾದ ಬಗೆಯನ್ನು ಚಿತ್ರಿಸಿದ್ದಾರೆ. ಜನಪದ ದೈವವಾಗಿರುವಂಥ ಪರಿಯನ್ನು ತಿಳಿಸಲಾಗಿದೆ. ಈತನ ಸಂಪ್ರದಾಯವು ಹರಡಿಕೊಂಡಿರುವಂಥ ಸೀಮೆಗಳನ್ನು ಗುರುತಿಸಿದ್ದಾರೆ. ಮೌಖಿಕ ಸಾಹಿತ್ಯದ ಮೂಲಕ ಕುಮಾರರಾಮನ ಸಂಪ್ರದಾಯ ಹೇಗೆ ವಿಸ್ತಾರ ಪಡೆದುಕೊಂಡಿದೆ ಎಂಬುದನ್ನು ವಿವೇಚಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕುಮಾರರಾಮನ ಪಂಥಕ್ಕೆ ಸಂಬಂಧಪಟ್ಟ ವಿವಿಧ ಅಂಶಗಳನ್ನು ಅಧ್ಯಯನಕಾರರು ಕಂಡುಕೊಂಡಿದ್ದಾರೆ.

ಇಲ್ಲಿ ಹೆಸರಿಸಿದ ಪದವಿ ಅಧ್ಯಯನ ಪ್ರಬಂಧಗಳಲ್ಲದೆ ಕುಮಾರರಾಮನಿಗೆ ಸಂಬಂಧಪಟ್ಟಂತೆ ಇತರ ಅಧ್ಯಯನ ಕೃತಿಗಳು ಪ್ರಕಟವಾಗಿವೆ. ಅವುಗಲಲ್ಲಿ ದೇ. ಜವರೇಗೌಡ ಅವರ 'ನಂಜುಂಡ ಕವಿ' ಎಂಬ ಕೃತಿಯು ಪ್ರಮುಖವಾದುದು. ಇಲ್ಲಿ ಲೇಖಕರು ಕವಿ-ಕಾವ್ಯ ಕುರಿತು ವಿಚಾರ ಮಾಡುತ್ತಾ ಕಾವ್ಯ ನಾಯಕನಾದ ಕುಮಾರರಾಮನ ಕಥೆ ಮತ್ತು ಚರಿತ್ರೆಯ ಕುರಿತು ವಿಮರ್ಶಾತ್ಮಕ ನೋಟ ಅರಿಸುತ್ತಾರೆ. ಕುಮಾರರಾಮ ಐತಿಹಾಸಿಕ ವ್ಯಕ್ತಿಯೇ?, ನಂಜುಂಡ ಕವಿಯ ಕಾಲ ದೇಶ ಮತ ವಿಚಾರ, ಕುಮಾರರಾಮನ ಕಥೆಯ ಹರವು, ಕಥಾಸಾರ, ಕಥಾ ಸಂವಿಧಾನ, ಪಾತ್ರ ರಚನೆ, ವರ್ಣನೆಗಳು, ನಂಜುಂಡನ ಶೈಲಿ, ನಂಜುಂಡನ ಕಾಲದ ಜನಪದ ಜೀವನ, ರಾಮನಾಥ ಚರಿತ ವೀರ ಕಾವ್ಯವೇ?, ಕಾವ್ಯದಲ್ಲಿ ಚರಿತ್ರಾಂಶಗಳು, ಕನ್ನಡ ಸಾಹಿತ್ಯಲೋಕದಲ್ಲಿ ನಂಜುಂಡನ ಸ್ಥಾನ ಇತ್ಯಾದಿ ವಿವರಗಳನ್ನು ಸಂಶೋಧಿಸಿಕೊಟ್ಟಿದ್ದಾರೆ.

ಪ್ರಮುಖವಾಗಿ ಕೃತಿಕಾರರು ಕುಮ್ಮಟದುರ್ಗ ಹಾಗೂ ಕುಮಾರರಾಮನ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ. ಕುಮಾರರಾಮನ ವ್ಯಕ್ತಿ ಚಿತ್ರಣದ ಕುರಿತು ವಿದೇಶಿ ಪಂಡಿತರ ಮಾಹಿತಿ ರೂಪದಲ್ಲಿ ಉಲ್ಲೇಖಿಸಿದ್ದಾರೆ ಈತನ ಕುರಿತು ಜನಪದರಲ್ಲಿ ಮತ್ತು ಶಿಷ್ಟಕವಿಗಳಲ್ಲಿ ಹರಡಿಕೊಂಡಿರುವ ಕಥೆಯನ್ನು ಸವಿಸ್ತಾರವಾಗಿ ಕಟ್ಟಿಕೊಟ್ಟಿದ್ದಾರೆ. ಕುಮಾರರಾಮನ ವ್ಯಕ್ತಿತ್ವದ ಚಿತ್ರಣವನ್ನು ನಂಜುಂಡ ಕವಿಯ ಮೂಲಪಠ್ಯದ ಪದ್ಯಗಳ ಸಹಿತ ಇಲ್ಲಿ ಕೊಡಲಾಗಿದೆ.

ಪುರುಷೋತ್ತಮ ಬಿಳಿಮಲೆಯವರ 'ಕುಮಾರರಾಮ ಮತ್ತು ಕುಮ್ಮಟದುರ್ಗ' ಎಂಬುದು ಕುಮಾರರಾಮನಿಗೆ ಸಂಬಂಧಪಟ್ಟ ಐತಿಹಾಸಿಕ ಸ್ಥಳಗಳಲ್ಲಿ ಕ್ಷೇತ್ರಾಧ್ಯಯನ ನಡೆಸಿ ರಚಿಸಲಾದ ಕಿರುಹೊತ್ತಿಗೆ. ಇದು ಇನ್ನೂಳಿದ ಕೃತಿಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಮಧ್ಯಕಾಲೀನ ಸಾಂಗತ್ಯ

ಕೃತಿಗಳನ್ನು ಹಿನ್ನೆಲೆಯಾಗಿರಿಸಿಕೊಂಡು, ಕುಮ್ಮಟದುರ್ಗ ಮತ್ತು ಇತರೆಡೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ ಮಾಹಿತಿಗಳನ್ನು ಇಲ್ಲಿ ವಿಶ್ಲೇಷಣೆ ಒಳಪಡಿಸಲಾಗಿದೆ. ಈ ಚಿಕ್ಕ ಕೃತಿಯು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಂಡ ಹಲವಾರು ಪ್ರತ್ಯಕ್ಷ ಸಂಗತಿಗಳ ಮೂಲಕ ಕಾವ್ಯಗಳಲ್ಲಿನ ವಿವರಗಳಿಗೆ ಹೊಸಬೆಳಕನ್ನು ಚೆಲ್ಲುತ್ತದೆ. ನಂಜುಂಡಾದಿ ಕವಿಗಳಲ್ಲಿ ಬರುವ ಕಲ್ಪನಾತೀತ ಅಂಶಗಳಿಗೆ ಈ ಕೃತಿಯು ಖಚಿತತೆ ಹೊದಗಿಸಿದಂತಿದೆ. ಕುಮ್ಮಟ ಪರಿಸರದಲ್ಲಿ ಬರುವ ಅಂಶಗಳನ್ನು ಲೇಕಕರು ಸ್ವತಹ ಪ್ರತ್ಯಕ್ಷವಾಗಿ ಕಂಡುಕೊಂಡು ಕೃತಿಯಲ್ಲಿ ಈ ಕೆಳಗಿನಂತೆ ಗುರುತಿಸಿದ್ದಾರೆ. ಕುಮಾರರಾಮ ಮತ್ತು ಕುಮ್ಮಟದುರ್ಗ, ಕುಮ್ಮಟದುರ್ಗ-ಹೊಸಮಲೆದುರ್ಗ, ತಾಲ್ಲೂಕು ಕಂಪಲಿ ಕೈಫಿಯತ್ತಿನಲ್ಲಿರುವ ವಿವರಗಳು, ಕೋಟೆಗಳು, ಕುದುರೆ ಕಲ್ಲುಗಳು, ಸಭಾಂಗಣ, ಶಸ್ತ್ರಗಾರ, ಅನೆಲಾಯ, ಅರಮನೆ ಅವಶೇಷ ತೋರಣ, ಬೊಲ್ಲನ ಕೆರೆ, ವಕ್ರಾಣಿಕೆರೆ, ಮಾದಿಗ ಹಂಪಯ್ಯನ ಕೆರೆ, ಇತರ ದೋಣೆಗಳು, ಹಾಲುಬಾವಿ, ಜೈನದೇವಸ್ಥಾನ, ಈಶ್ವರಗುಡಿ, ರಾಮಸ್ವಾಮಿ ಗುಡಿ, ಕಾಗಿರಾಮನ ಕಲ್ಲು, ಹೊಸಮಲೆ ದುರ್ಗ, ಕುಮ್ಮಟ ಜಾತ್ರೆ ಇತ್ಯಾದಿ ಈ ಕೃತಿಯು ಕುಮ್ಮಟದುರ್ಗದಲ್ಲಿ ದಾಖಲೆಗಳ ಮೂಲಕ ಕುಮಾರರಾಮನ ಅಸ್ತಿತ್ವಕ್ಕೆ ಇನ್ನಷ್ಟು ಐತಿಹಾಸಿಕತೆಯನ್ನು ಒದಗಿಸಿದೆ. ಲೇಖಕರು ಪ್ರತ್ಯಕ್ಷವಾಗಿ ಪರಾಮರ್ಶಿಸಿದ ವಿವರಗಳನ್ನು ಇಲ್ಲಿ ವಿಶ್ಲೇಷಿಸಿದ್ದಾರೆ. ಕುಮಾರರಾಮನಿಗೆ ಸಂಬಂಧಪಟ್ಟ ಕೆರೆ, ಗುಡಿ, ಕೋಟೆ, ಇತ್ಯಾದಿಗಳನ್ನು ದಾಖಲಿಸುತ್ತಾ, ಅವುಗಳನ್ನು ಖಚಿತವಾಗಿ ನಿರ್ಧರಿಸಿ ಕೃತಿಗಿಳಿಸಿದ್ದಾರೆ.

ಇದೊಂದು ಚಿಕ್ಕ ಕೃತಿಯಾದರೂ ಸಂಶೋಧನಾತ್ಮಕ ಮೌಲ್ಯವುಳ್ಳದ್ದು. ಕುಮಾರರಾಮನಿಗೆ ಸಂಬಂಧಪಟ್ಟ ಲಿಖಿತ ಆಕರಗಳಿಗಿಂತಲೂ ಮುಖ್ಯವಾಗಿ ಮೌಖಿಕ ಆಕರಗಳು ಮತ್ತು ಜನಪದ ನಂಬಿಕೆ, ಆಚರಣೆಗಳನ್ನು ಅವಲಂಬಿಸಿ ಈ ಕೃತಿಯು ರಚನೆಯಾಗಿದೆ. ವಿಶೇಷವಾಗಿ ಕುಮ್ಮಟದುರ್ಗ ಮತ್ತು ಹೊಸಮಲೆ ದುರ್ಗ ಪರಿಸರದಲ್ಲಿ ಪ್ರಚಲಿತವಿರುವ ಕುಮಾರರಾಮನ ಪಂಥವನ್ನು ವಿಶ್ಲೇಷಣೆಗೆ ಒಳಪಡಿಸುವ ಪ್ರಸ್ತುತ ಕೃತಿಯು ತತ್ಸಬಂಧವಾದ ವಿಸ್ತೃತ ಅಧ್ಯಯನಗಳಿಗೆ ನಿಲ್ಲುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಕುಮ್ಮಟದುರ್ಗ, ಕುಮ್ಮಟದ ನಾಯಕರು, ಅದೇ ರೀತಿ ಕುಮಾರರಾಮನ ಕುರಿತಾಗಿ ಐತಿಹಾಸಿಕ ನೆಲೆಗಳಿಂದ ಅಧ್ಯಯನಗಳು ನಡೆದಿವೆ. ಮೌಖಿಕ ಸಾಹಿತ್ಯ, ನಂಬಿಕೆ, ನಡವಳಿಕೆ, ಆಚರಣೆಗಳ ಕುರಿತಾಗಿಯೂ ಅಧ್ಯಯನಗಳಾಗಿವೆ. ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಕುಮಾರರಾಮನು ಹೇಗೆ ಚಿತ್ರಿತನಾಗಿದ್ದಾನೆ ಎಂಬುದರ ಕುರಿತಾಗಿಯು ಅಧ್ಯಯನಗಳು ನಡೆದಿವೆ. ಆದರೆ ಇವೆಲ್ಲವುಗಳ ಆಧಾರದಿಂದ ಕುಮಾರರಾಮನ ಕುರಿತಂತೆ ರಚಿತವಾದ ಆಧುನಿಕ ಕನ್ನಡ ಸಾಹಿತ್ಯದ ಬಗೆಗೆ ಇದುವರೆಗೆ ಅಧ್ಯಯನಗಳು ನಡೆದಂತೆ ಇಲ್ಲ. ಆದುದರಿಂದ ಇಲ್ಲಿ ಪ್ರಸ್ತಾಪಿಸಿದ ಅಧ್ಯಯನಗಳನ್ನೆಲ್ಲಾ ಹಿನ್ನೆಲೆಯಾಗಿಸಿಕೊಂಡು, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುಮಾರ ರಾಮನು ಹೇಗೆ ಬಿಂಬಿತನಾಗಿದ್ದಾನೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಮುಂದಿನ ಅಧ್ಯಯನಗಳಲ್ಲಿವೆ.

ಅಧ್ಯಾಯ-೩

ಆಧುನಿಕ ಕನ್ನಡ ನಾಟಕಗಳಲ್ಲಿ ಕುಮಾರರಾಮ

೩.೧. ಪ್ರವೇಶ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಟಕ ಬಳಕೆಯಲ್ಲಿ ಕಂಡುಬಂದಿತ್ತಾದರೂ ಅದು ಒಂದು ಪ್ರತ್ಯೇಕ ಪ್ರಕಾರವಾಗಿ ಬೆಳೆದಿರಲಿಲ್ಲ. ವಸಾಹತುಶಾಹಿಗೆ ನಮ್ಮ ದೇಶ ಒಳಪಟ್ಟಿದ್ದರಿಂದ ಮತ್ತು ಹೊಸ ಶಿಕ್ಷಣ ಪದ್ಧತಿಯ ದ್ಯೋತಕವಾಗಿ ನಾಟಕ ಪ್ರಕಾರ ಹುಟ್ಟಿಕೊಂಡಿತು. ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬೆಳೆಯಲಾರಂಭಿಸಿತು. ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಹುಲುಸಾಗಿ ಬೆಳೆಯಿತು. ಮೊದಲು ನಾಟಕ ಪ್ರಕಾರದ ಹುಟ್ಟಿಗೆ ಕಾರಣರಾದವರು ಬಿ.ಎಂ.ಶ್ರೀ, ಶ್ರೀರಂಗ, ಸಂಸ, ಟಿ.ಪಿ. ಕೈಲಾಸಂ, ರಾಜರತ್ನಂ, ಜಿ.ಬಿ. ಜೋಶಿ, ದ.ರಾ. ಬೇಂದ್ರೆ, ಪರ್ವತವಾಣಿ, ಚಂದ್ರಶೇಖರ ಕಂಬಾರ, ಕುವೆಂಪು, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದವರಾಗಿದ್ದಾರೆ. ಪ್ರಮುಖ ನಾಟಕ ಕೃತಿಗಳು ಅಶ್ವತ್ಥಾಮನ್, ವಿಗಡ ವಿಕ್ರಮರಾಯ, ಬೆರಳಿಗೆ ಕೊರಳ್, ಸಾಯೋ ಆಟ, ತಾಳಿಕೋಟೆ, ಕಾಕನಕೋಟೆ ಇತ್ಯಾದಿ. ಇದು ಮುಂದೆ ನವ್ಯ, ನವ್ಯೋತ್ತರ, ಪ್ರಗತಿಶೀಲ, ದಲಿತ ಬಂಡಾಯದ ಕಾಲಘಟ್ಟದಲ್ಲಿ ಹುಲುಸಾಗಿ ಬೆಳೆಯಿತು. ಇದಕ್ಕೆ ಪುಷ್ಟಿಕೊಟ್ಟವರು ಗಿರೀಶ್ ಕಾರ್ನಾಡ್, ಪಿ. ಲಂಕೇಶ್, ಚದುರಂಗ ಮುಂತಾದವರಾಗಿದ್ದಾರೆ. ಈ ಕಾಲಘಟ್ಟದಲ್ಲಿ ಹೊಸ ದೃಷ್ಟಿಕೋನಗಳಿಂದ ಹಲವಾರು ನಾಟಕಗಳು ಹುಟ್ಟಿಕೊಂಡವು. ಮುಖ್ಯವಾಗಿ ಇಲ್ಲಿ ಕುಮ್ಮಟದುರ್ಗದ ಚರಿತ್ರೆಯನ್ನಾಧರಿಸಿ, ಕುಮಾರರಾಮನನ್ನು ನಾಯಕನನ್ನಾಗಿಸಿ ರಚಿತವಾದ ಆಧುನಿಕ ನಾಟಕಗಳ ಕುರಿತು ಚರ್ಚಿಸಲಾಗಿದೆ.

ಕುಮಾರರಾಮನ ಕಥೆ ಅಥವಾ ಚರಿತ್ರೆಯನ್ನಾಧರಿಸಿ ಹೊಸಗನ್ನಡದಲ್ಲಿ ಹಲವಾರು ನಾಟಕ ಕೃತಿಗಳು ರಚನೆಯಾಗಿವೆ. ಕೆಲವು ಪ್ರಕಟವಾಗದೆ ಇವೆ. ಪ್ರಕಟಗೊಂಡ ಕೃತಿಗಳನ್ನಷ್ಟೇ ಇಲ್ಲಿ ಅಧ್ಯಯನಕ್ಕೆ ಪರಿಗಣಿಸಲಾಗಿದೆ.

೩.೨. ಕುಮ್ಮಟ ವಲ್ಲಭ

ಕುಮಾರರಾಮನ ಸುಪ್ರಸಿದ್ಧ ಕಥೆಯನ್ನು ಆಧರಿಸಿ ವಸುದೇವ ಭೂಪಾಲಂ ಅವರು ರಚಿಸಿದ ಐತಿಹಾಸಿಕ ನಾಟಕ "ಕುಮ್ಮಟ ವಲ್ಲಭ". ಕುಮ್ಮಟದ ಬಗ್ಗೆ ಇರುವ ಐತಿಹಾಸಿಕ ಸಾಮಗ್ರಿಗಳು ದುರ್ಬಲವಾದವು ಎನ್ನುವ ಅಭಿಪ್ರಾಯ ಭೂಪಾಲಂ ಅವರದು ಎಂದು ಶ್ರೀಕಂಠ ಕೊಡಿಗೆ (೧೯೯೪, ಮುನ್ನುಡಿಯಲ್ಲಿ, ಪು.೮) ಅಭಿಪ್ರಾಯ ಪಡುತ್ತಾರೆ. ಮುಂದುವರಿದು ಹೀಗೆ ಹೇಳುತ್ತಾರೆ "ನಾಟಕದ

ಪ್ರಮುಖ ಕಥಾಭಾಗ ಹಾಗೂ ಪ್ರಮುಖ ಪಾತ್ರಗಳು ಇತಿಹಾಸಕ್ಕೆ ಸತ್ಯವಾಗಿವೆ. ಪ್ರಮುಖ ಪಾತ್ರಗಳ ರೂಪುರೇಷೆಗಳು ಇತಿಹಾಸದಂತಿವೆ. ಕೆಲವು ಉಪಪಾತ್ರಗಳನ್ನು ನಿರ್ಮಿಸುವುದೂ, ಐದು ಅಂಕದ ನಾಟಕ ಬಂಧಕ್ಕೆ ಹೊಂದಿಕೊಳ್ಳುವಂತೆ ಕಥೆಯ ಕಾಲಕ್ರಮದಲ್ಲಿ ಕೆಲವು ಸಣ್ಣ ವ್ಯತ್ಯಾಸಗಳನ್ನು ಮಾಡಿಕೊಳ್ಳುವುದೂ ಅವಶ್ಯಕವಾಯಿತು". "ಲೇಖಕರೇ ಮುನ್ನುಡಿಯಲ್ಲಿ ಹೇಳಿಕೊಂಡಿರುವರು" (ಅದೇ ಮುನ್ನುಡಿಯಲ್ಲಿ) ಎಂದು ಅಭಿಪ್ರಾಯಪಡುತ್ತಾರೆ. ಕುಮಾರರಾಮನ ಮಾನವೀಯ ಮೌಲ್ಯವುಳ್ಳ ವ್ಯಕ್ತಿತ್ವವನ್ನು ಸಮರ್ಪಕವಾಗಿ ಚಿತ್ರಿಸಿದ್ದಾರೆ. ಅಲ್ಲದೇ ಈ ನಾಟಕದಲ್ಲಿ ಮೂಲಕಥೆಯ ಸಾಮಗ್ರಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಜಾತಿಯ ಗಡಿಗಳನ್ನು ಲೆಕ್ಕಿಸದೆ ಪ್ರೇಮದ ಸ್ವರೂಪವನ್ನು, ಅದು ದುರಂತದಲ್ಲಿ ಕೊನೆಗೊಂಡಿದ್ದನ್ನು ನಾಟ್ಯೀಕರಿಸಿ ತೋರಿಸುವ ಸಂವಾದ ಶೈಲಿ ಇಲ್ಲಿದೆ. ಸಂಭಾಷಣಾ ಪ್ರಧಾನವಾಗಿ ವ್ಯಕ್ತಿಚಿತ್ರಗಳನ್ನು ಮೂಡಿಸುವುದರಲ್ಲಿ ಈ ನಾಟಕದ ಯಶಸ್ಸಿದೆ. ಐತಿಹಾಸಿಕ ನಾಟಕಗಳ ಸಾಲಿನಲ್ಲಿ ವಸ್ತು ನಿರ್ವಹಣೆಯ ದೃಷ್ಟಿಯಿಂದ 'ಕುಮ್ಮಟ ವಲ್ಲಭ' ಗಮನ ಸೆಳೆಯುತ್ತದೆ (ಅದೇ) ಎಂಬ ಅಭಿಪ್ರಾಯವಿದೆ.

'ಕುಮ್ಮಟ ವಲ್ಲಭ' ಕನ್ನಡ ನಾಟಕಗಳಲ್ಲಿಯೇ ಒಂದು ವಿಶಿಷ್ಟ ಬಗೆಯ ನಾಟಕ. ಇಲ್ಲಿರುವ ವಸ್ತು ಸಂಕೀರ್ಣತೆ ಇದಕ್ಕೆ ವಿಶಿಷ್ಟತೆಯನ್ನು ತಂದಿದೆ. ಒಂದು ಕಡೆಯಿಂದ ಚರಿತ್ರೆ, ಇನ್ನೊಂದು ಕಡೆಯಿಂದ ಪೌರಾಣಿಕತೆ ಹೀಗೆ ಹಲವು ಮೂಲಗಳಿಂದ ಇದು ಸ್ಫೂರ್ತಿಯನ್ನು ಪಡೆದಿದೆ. ಅಲ್ಲದೇ ಈ ನಾಟಕದ ಮೂಲಕ 'ವಸುದೇವ ಭೂಪಾಲಂ' ಕೊಡುವ ಸಂದೇಶ ವಿನೂತನವಾದುದು. ಕಂಪಿಲನ ಮೂಲಕ ನಾಟಕಕಾರರು ಹೇಳಿಸುವ ಮಾತುಗಳನ್ನು ಇಲ್ಲಿ ಗಮನಿಸಬಹುದು. "ಕುಮ್ಮಟ ವೇನು ಕಲ್ಲು ಸಕ್ಕರೆಯೋ, ಶತ್ರು ಪರಂಪರೆ ಇರುವೆಗಳಂತೆ ನಮ್ಮನ್ನು ಮುತ್ತಲು! ಕುಮ್ಮಟೇಶ್ವರನ ಸಂಪತ್ತು ಸುತ್ತಮುತ್ತಲ ಅರಸರಿಗೆ ಕಣ್ಣೊತ್ತುತ್ತಿದೆ. ಕತ್ತಲೆಯಲ್ಲಿ ಜ್ಯೋತಿ ಬೆಳಗಿದೊಡನೆಯೆ ಸುತ್ತಲೆತ್ತಲು ಸಾವಿರ ಹುಳು ಬೆಳಕಿಗೆರಗಿ ಅಸುನೀಗುವಂತೆ ಅರಿಸೈನಿಕರ ಪಾಡಾಯಿತು. ಕನ್ನಡ ನಾಡ ದೇವಿಯ ಸೊಬಗು ಬೆಡಗುಗಳಿಗೆ ಮರುಳಾಗಿ ತಾವೇ ಗಂಡರಾಗಲು ಹಿಂದೂಸ್ಥಾನದ ಅರಸು, ಅರಸುಗುವರರೆಲ್ಲ ಚಂಡಿ ಹಿಡಿದಿರುವಂತೆ ಕಂಡುಬರುತ್ತದೆ. ಕರ್ನಾಟಕದ ಕಟ್ಟಾಳುಗಳು ಮಸೆವೆತ್ತಿ ಕೂರ್ಗತ್ತಿಯಿಂದ ಅರಿಸಿರಗಳನ್ನು ಕತ್ತರಿಸಿ, ತಳ್ತಿರಿದು, ಉಳಿದವರನ್ನು ತೋಳ್ದು ತಮ್ಮ ತೋಳ್ಬಲವನ್ನು ತೋರಿಸಿದ್ದಾರೆ. ಕುಮ್ಮಟದ ಕಾವಲಿಗೆ ಕುಮಾರರಾಮನಂಥ ಗಂಡುಗೊಡಲಿಯಿರುವಾಗ ಕಡಿಮೆಯೇನು! ಹುಳಿಯಾರಿನ ಮಾರನಗೌಡನ ಹೊಟ್ಟೆಕಿಚ್ಚನ್ನು ಕುಮ್ಮಟದ ಕಲಗಚ್ಚಿನಿಂದ ತೊಳೆದು ಗೌಡನ ಹುಂಬತನದ ಜಂಬಕ್ಕೆ ಕತ್ತರಿ ಹಾಕಿಯಾಯ್ತು. ರಾಮನಾಥನು ಮಾರನಗೌಡನ ಬಿಂದಿಗೆ ಚಿನ್ನ, ಐದೂರು, ಹೊನ್ನದ ಗಿಣಿಗಳನ್ನು ಕಿತ್ತು ತಂದನು. ವೀರ ಬಲ್ಲಾಳನ ಪ್ರಧಾನ ಬೇಚಿ ದಣ್ಣಾಯಕ, ಸಿಂಗಯ್ಯ ದಣ್ಣಾಯಕರು ರಾಮನಿಂದ ದೊಣ್ಣೆಯೇಟು ತಿಂದು ದೇಶಾಂತರ ಓಡಿದರು. ಈ ಗುತ್ತಿಯ ಜಗದಪ್ಪಿನಾಯ್ಕನ ಸರತಿ. ಲಕ್ಷಾಂತರ ತುಳಿಲಾಳುಗಳನ್ನು ತಂದು ಮುತ್ತಿಗೆ ಸುತ್ತಿದ್ದಾನೆ. ರಾಮನೆಂಬ

ರಣಧೀರನಿರಬೇಕಾದರೆ ಕಪ್ಪಕಾಣಿಕೆ ಕೊಡುವ ಗೊಡವೆಯುಂಟೆ! ಬಾಲ ಕುಯ್ಯುವ ಮೊದಲೇ ಈ ಕುನ್ನಿಗಳಿಗೆ ಬುದ್ಧಿ ಬರಬಾರದೆ. ಬೇಚಚಮೂಪ! ಸಂಗ್ರಾಮದ ಸುದ್ದಿಯೇನು?" (ಶ್ರೀಕಂಠ ಕೊಡಿಗೆ (ಸಂ); ೨೦೦೬; ಪು. ೫೩೨) ಈ ಮಾತುಗಳಲ್ಲಿ ಕಂಪಿಲನ ನಾಡಪ್ರೇಮ, ಕುಮಾರರಾಮನ ಶೌರ್ಯದ ಬಗೆಗೆ ಆತನಿಗಿರುವ ವಿಶ್ವಾಸ, ಅಭಿಮಾನಗಳು ವ್ಯಕ್ತವಾಗುತ್ತವೆ. ಶ್ರೀಕಂಠ ಕೊಡಿಗೆ ಅವರು ನಾಟಕದ ಕುರಿತು ಹೀಗೆ ಹೇಳುತ್ತಾರೆ. ವಸ್ತು ಹಾಗೂ ಧೋರಣೆಯಲ್ಲಿ ಈ ಬಗೆಯ ಸಂಕೀರ್ಣತೆಯನ್ನು ಹೊಂದಿದ ನಾಟಕ ಕನ್ನಡದಲ್ಲಿ ಅತ್ಯಂತ ವಿರಳವೆಂದು ಹೇಳಬಹುದು.

ಇಲ್ಲಿ ನಾಟಕಕಾರರು ಬಾಬಮಿಯನ್ನು ಹಿಂದೂಧರ್ಮ ಮತ್ತು ಇಸ್ಲಾಂ ಧರ್ಮಗಳೆರಡರ ಸಮನ್ವಯದ ರೀತಿಯಲ್ಲಿ ಚಿತ್ರಿಸಿದ್ದಾರೆ. ನಾಟಕದಲ್ಲಿ ಬರುವ ಬಾಬಮಿಯ ಮಾತುಗಳನ್ನು ಗಮನಿಸ ಬಹುದಾಗಿದೆ "ಮುಸಲ್ಮಾನರ ಮಸೀದಿಯ ಅಲ್ಲಾ, ಹಿಂದೂ ದೇಗುಲಗಳ ಈಶ್ವರ ಬೇರೆ ಬೇರೆಯೇನು? ಸರ್ವಶಕ್ತ ಸೃಷ್ಟಿಕರ್ತನನ್ನು ವಿವಿಧ ಜನ, ವಿವಿಧ ರೀತಿ ಆರಾಧಿಸಿದರೆ ತಪ್ಪೇನು? ದೇಶ ವಿದೇಶಗಳ ಜನರ ಉಡುಪು ತೊಡುಪು, ಭಾಷೆ, ಬರಹ ತೆರತೆರನಾಗುವಂತೆ ಆರಾಧನೆಯಲ್ಲಿಯೂ ವೈವಿಧ್ಯತೆ ಇದ್ದ ಮಾತ್ರಕ್ಕೆ ಕಾದಾಡುವ ಈ ಮಂದಿಯ ಮೌಢ್ಯತೆ ನನಗೆ ತಲೆ ಬೇಸರವನ್ನುಂಟು ಮಾಡುತ್ತದೆ. ನನಗಂತೂ ಮಸೀದಿಯಲ್ಲಿ ನಮಾಜು ಮಾಡಿದಾಗ ಒಡಮೂಡುವ ಮನಃಶ್ಯಾಂತತೆಯೇ ಈಶ್ವರ ಮಂದಿರದಲ್ಲಿ ಪ್ರಾರ್ಥನೆ ಮಾಡಿದಾಗಲೂ ಉಂಟಾಗುತ್ತದೆ. ತುರುಕ ಅರಸು ಅಧಿಕಾರಿಗಳು ಗುಡಿಗಳನ್ನು ಕೆಡವಿಸುತ್ತಾರಾದರೂ ಏಕೆ? ಮಸೀದಿಗಳಲ್ಲಿ ಸ್ಥಳ ಸಾಲದಿದ್ದರೆ, ಮನೆಯಿಂದ ಮಸೀದಿಗೆ ದೂರವಾದರೆ, ದೇಗುಲಕ್ಕೆ ಆಗಮಿಸಿ ನಮಾಜು ಮಾಡಬಾರದೆ? ಬುದ್ಧಿಗೇಡಿ ಮತಾಂಧ ಮುಸಲ್ಮಾನರು ದೇವಮಂದರಿಗಳನ್ನು ಉರುಳಿಸುವುದರಲ್ಲೇ ಹರ್ಷ ಹೊಂದುವುದಾದರೆ, ಹಿಂದೂಗಳಾದರೂ ಸಂಕಟ ಪಡಬೇಕೇಕೆ? ಮಸೀದಿಗಳಿಗೆ ದಯಿಮಾಡಿಸಿ ಪ್ರಾರ್ಥನೆ ಸಲ್ಲಿಸಬಾರದೆ! ಹಿಂದೂ ಮುಸಲ್ಮಾನರಿಬ್ಬರಿಗೂ ಕಲಹ ಬೇಡವೆಂದು ಮಸೀದಿ ಮಂದಿರಗಳನ್ನೆಲ್ಲ ಕೆಡವಿಸಿ ಈರ್ವರಿಗೂ ಒಂದಡೆಗೆ ಸರಿಹೋಗುವಂತಹ ಹೊಸ ಪ್ರಾರ್ಥನಾ ಮಂದಿರಗಳನ್ನು ನಿರ್ಮಿಸಬಾರದೆ!" ಎಂದು (ಅದೇ; ಪು. ೫೨೪) ಧರ್ಮ ಸಮನ್ವಯದ ಬಗೆಗಿನ ನಾಟಕಕಾರರ ಆಶಯವೂ ಈ ಮಾತುಗಳ ಮೂಲಕ ವ್ಯಕ್ತವಾಗಿದೆ.

ಇಲ್ಲಿ ನಾಟಕಕಾರರು ಅತಿಬುದ್ಧಿವಂತಿಕೆಯಿಂದ ಪಾತ್ರಗಳ ಮೂಲಕ ಸಮಾನತೆ, ಧರ್ಮನಿಷ್ಠೆ ಗಳನ್ನು ಗಟ್ಟಿಗೊಳಿಸಿದ್ದಾರೆ. ಬಾಬಮಿ ಮೂಲಕ ಧರ್ಮಸಮನ್ವಯತೆಯ ಕಲ್ಪನೆಯನ್ನು ತರುತ್ತಾರೆ. ಧರ್ಮಾತೀತ ಸಮಾಜ ನಿರ್ಮಾಣವಾಗಬೇಕೆಂಬ ಆಶಯವನ್ನು ಒಂದು ಪಾತ್ರದ ಮೂಲಕ ಅಭಿವ್ಯಕ್ತಿಸುತ್ತಾರೆ. ಸಂಘರ್ಷಕ್ಕೆ ಇಳಿದ ಎರಡು ಧರ್ಮಗಳನ್ನು ಸಂಯೋಜಿಸುವ ಕಾರ್ಯ ಇಲ್ಲಿ ಮೂಡಿಬರುತ್ತದೆ. ದೆಹಲಿ ಸುಲ್ತಾನನ ಆಸ್ಥಾನದಲ್ಲಿ ಗುರುವಿನ ಪಾತ್ರದ ಮೂಲಕ ಕುಮ್ಮಟದ ಘನತೆಯನ್ನು ವಿವರಿಸುತ್ತಾರೆ. ನಾಟಕವು ಹೀಗೆ ಚರಿತ್ರೆಯ ಕುರುಹುಗಳನ್ನು ಕಟ್ಟಿಕೊಡುತ್ತದೆ.

"ಪ್ರತಾಪರುದ್ರ, ಸಾಮಂತರು ಕನಲಿ ಕಿಡಿಯಾದರು. ದಳವಾಯಿ ತನ್ನರಮನೆಗೆ ಬೆಂಕಿಯಿಕ್ಕಿ ಓಡಿ ರಾಮನನ್ನು ಕೂಡಿಕೊಂಡನೆಂಬುದು ತಿಳಿದ ಮೇಲೆ ಪ್ರತಾಪರುದ್ರ ಪ್ರಳಯ ರುದ್ರನಾಗಿ, ಲಕ್ಷಾಂತರ ಬಲ್ಬಂಟರನ್ನು ಯಪ್ಪಟಿರಾಜನ ನಾಯಕತ್ವದಲ್ಲಿ ರಾಮನ ಮೇಲೆ ಕಳುಹಿಸಿದನು. ಕದನ ಕಲ್ಲೋಲ ಕುಮಾರರಾಮ ಯಪ್ಪಟಿರಾಜನನ್ನು ದಿಂಡುಗೆಡಿಸಿ, ಅವನೇರಿದ ಬೊಲ್ಲನನ್ನು ತಾನೇರಿ, ಯಪ್ಪಟಿಯನ್ನು ಸೆರೆಯಿಟ್ಟನು. ಕಣ್ಣೀರ ಕಡಲಲ್ಲಿ ಮುಳುಗಿದ ಪ್ರತಾಪರುದ್ರ ರಾಮನಾಥನಿಗೆ ಕಪ್ಪವನ್ನೊಪ್ಪಿಸಿದನು. ದೆಹಲಿಯ ಮಹಾಸಾಮಂತ ಕುಮ್ಮಟದ ಆನೆಯೆದುರು ಕುನ್ನಿಯಾದನು" (ಅದೇ; ಪು. ೫೨೦) ಈ ಸನ್ನಿವೇಶ ಚಿತ್ರಣದಲ್ಲಿ ಕನ್ನಡ ನಾಡಿನ ವೈಭವ, ಹಿರಿಮೆ ಹಾಗು ಕನ್ನಡಿಗರ ಪರಾಕ್ರಮಗಳು ಬಿಂಬಿತವಾಗಿವೆ. ಹೀಗೆ ಒಂದನೆ ಅಂಕದಲ್ಲಿ ದೆಹಲಿಯ ಮಹಿಳೆಯರ ಮೂಲಕ ಕನ್ನಡ ನಾಡಿನ ಚರಿತ್ರೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಕುಮ್ಮಟ ರಾಜ್ಯದ ಪುರುಷ ಪಾತ್ರಗಳು ದೆಹಲಿಯಲ್ಲಿ ಪ್ರವೇಶ ಪಡೆಯುತ್ತವೆ. ಸುಲ್ತಾನರು ಗಮನಿಸದೆ ಇರುವಂಥ ಅಂಶಗಳನ್ನು ನಾಟಕದ ಈ ಭಾಗ ಕಟ್ಟಿಕೊಡುತ್ತದೆ.

ಎರಡನೆ ಅಂಕದಲ್ಲಿ ಕುಮ್ಮಟದುರ್ಗವನ್ನು ಒಂದು ಸ್ವತಂತ್ರ ರಾಜ್ಯದಂತೆ ನಾಟಕಕಾರರು ಚಿತ್ರಿಸಿದ್ದಾರೆ. ನಾಟಕದ ಭಾಗವಾಗಿ ಕಂಪಿಲನ ಪಾತ್ರವನ್ನು ಪಡುವಣ ದಿಕ್ಕಿನಂತೆಯು, ರಾಮನ ಪಾತ್ರವನ್ನು ಮೂಡಣ ದಿಕ್ಕಿನಂತೆಯು ಚಿತ್ರಿಸಿಲಾಗಿದೆ. ನಾಟಕದ ಪ್ರಕಾರ ಕುಮ್ಮಟದ ಮಂತ್ರಿಮಂಡಲ, ಅರಮನೆಯ ಪರಿವಾರದವರ ಬಗ್ಗೆ ಮಾಹಿತಿ ದೊರೆಯುತ್ತದೆ. ಇಲ್ಲಿ ಮುಖ್ಯವಾಗಿ ಕುಮ್ಮಟದ ಅರಸರು ಜನಸಾಮಾನ್ಯರ ಬಗ್ಗೆ ಜವಾಬ್ದಾರಿ ಇಟ್ಟುಕೊಂಡವರು ಎಂಬ ಊಹೆಗೆ ಎಡೆಯಿದೆ. ಕುಮ್ಮಟ ರಾಜ್ಯದ ಅವಸಾನ, ಕಾಲ, ವಿಜಯನಗರ ಆರಂಭ ಕಾಲದ ದಂಡನಾಯಕನಾದ ಬೈಚಪ್ಪನ ಪರಿಚಯವು ಈ ಅಂಕದಲ್ಲಿದೆ. ಇಲ್ಲಿ ಐದು ಹಿಂದೂಧರ್ಮದ ಪಾತ್ರಗಳಿದ್ದರೆ, ಎರಡು ಇಸ್ಲಾಂ ಧರ್ಮದ ಪಾತ್ರಗಳಿವೆ. ಮೊದಲನೆ ಅಂಶದಲ್ಲಿ ಮಹಿಳಾ ಪಾತ್ರಗಳಿಗೆ ಪ್ರಾಧಾನ್ಯವಿದ್ದರೆ, ಎರಡನೆ ಅಂಕದಲ್ಲಿ ಪುರುಷ ಪಾತ್ರಗಳಿಗೆ ಪ್ರಾಧಾನ್ಯವಿದೆ. ಕುಮಾರರಾಮನು ಪರಧರ್ಮಕ್ಕೆ ಗೌರವ ಕೊಟ್ಟವನಾಗಿ ಚಿತ್ರಿತವಾಗಿರುವುದು ಈ ಅಂಕದ ಪ್ರಮುಖ ಅಂಶವಾಗಿದೆ. ಸಾಹಸ ಪ್ರವೃತ್ತಿಗೆ ಮಹತ್ವ ಕೊಟ್ಟಿರು ವಂತಹದ್ದನ್ನು ಇಲ್ಲಿ ಕಾಣಬಹುದಾಗಿದೆ. ಕುಮಾರರಾಮನು ಬಹಾವುದ್ದೀನನಿಗೆ ಹೇಳುವ ಸ್ನೇಹಪರ ವಿಚಾರ ಹೀಗಿದೆ "ನಿಲ್ಲು ಸರದಾರ! ಅಸಮಬಲ ತೂಘಲಕ್ ಸುಲ್ತಾನನೆದುರು ಸೆಡ್ಡು ಹೊಡೆದ ಬಹದ್ದೂರ! ನೀನೆಲ್ಲಿಯವನೇನಾದರೂ, ನೀನೆಂತವನಾದರೂ ಸುಲ್ತಾನನೆದುರು ಸೆಣಸೆಲೆಣಿಸಿದ ಸತ್ವಶಾಲಿಯಾಗಿರುವುದರಿಂದ ನಮಗೆ ಸಖನೇ ಅದೇ ಸಿಂಗದ ಸಿಟ್ಟನುವಣೆಗೆ ತುತ್ತಾಗುವುದನ್ನು ತಿಳಿದಿದ್ದರೂ ಆನೆಗೆ ಆನೆ ನೆರವಾಗುವಂತೆ ಸಮಗ್ರ ಭಾರತದಲ್ಲಿ ಸುಲ್ತಾನನ್ನು ಧಿಕ್ಕರಿಸಿ ಧೀರರಂತೆ ವರ್ತಿಸಿದರು. ನಮ್ಮನ್ನು ಬಿಟ್ಟರೆ ನೀನೆ ಆದುದರಿಂದ ನೀ ನಮ್ಮ ಗೆಳೆಯನೇ ಸರಿ. ನಿನಗೆ ಅನಾಥತ್ವವನ್ನು ಆರೋಪಿಸದೆ ಗೆಳೆತನದ ಗೌರವವನ್ನು ಸಲ್ಲಿಸುತ್ತೇವೆ" (ಅದೇ; ಪು. ೫೫೨) ಎಂದು

ನಾಟಕದಲ್ಲಿ ಕುಮಾರರಾಮನು ಬಹಾವುದ್ದೀನ್‌ಗೆ ಹೇಳುವ ಮಾತುಗಳಲ್ಲಿ ಬಹಾವುದ್ದೀನ್‌ನ ಅಸಹಾಯಕತೆ ಮತ್ತು ಕುಮಾರರಾಮನ ಪ್ರಮಾಣಿಕತೆ ಎದ್ದುಕಾಣುತ್ತದೆ. ಇಲ್ಲಿ ಕುಮಾರನ ನಂಬಿಕೆ, ವಿಶ್ವಾಸ, ನ್ಯಾಯ, ಪರಮತ ಸಹಿಷ್ಣುತೆ ಇವುಗಳಿಗೆ ಬದ್ಧನಾಗಿದ್ದಾನೆ. ಎದುರಾಳಿಯನ್ನು ಪ್ರೀತಿಯಿಂದ ಗೆಲ್ಲುವ ತತ್ವಪರನಾಗಿದ್ದಾನೆ.

ಕುಮಾರರಾಮನು ಕನ್ನಡ, ಹಿಂದೂ ಸಂಸ್ಕೃತಿಯನ್ನು ಪ್ರತ್ಯೇಕವಾಗಿ ಭಾವಿಸಿಲ್ಲ. ಇಲ್ಲಿ ಬಹುಸಂಸ್ಕೃತಿಯ ನೆಲೆಯಲ್ಲಿ ಮಾತನಾಡುತ್ತಾನೆ. ನಾಟಕ ಭಾಗದಲ್ಲಿ ಈ ರೀತಿ ಬರುತ್ತದೆ. "ಶುದ್ಧ ವಿದೇಶೀ ಹೆಣ್ಣನ್ನು ಭುಂಜಿಸುವುದು ಲೇಸು! ಕಸಿ ಮಾಡಿದುದು ಹೊಸಬಗೆಯಾದರೂ, ಅತ್ತ ಬಾರದೆ ಇತ್ತ ಇಲ್ಲದೆ ಹೋದ ವಿಶ್ವಾಮಿತ್ರ ಸೃಷ್ಟಿಯಾಗುವುದು, ಶುದ್ಧ ಹಿಂದೂ ರಕ್ತದಲ್ಲೊಂದು ಪೂಜ್ಯತೆಯಿದ್ದರೆ, ಶುದ್ಧ ಮುಸಲ್ಮಾನ್ ರಕ್ತದಲ್ಲೂ ಒಂದು ರೀತಿಯ ಭವ್ಯತೆಯಿದ್ದಿತು. ಈ ಕಲಬೆರಕೆಯಾದ ರಕ್ತದೊಡನೆ ನನ್ನ ನೆತ್ತರೂ ಸೇರಿದರೆ ಇಮ್ಮಡಿ ಕುಲಹೀನತೆಯಾಗುವುದು. ಮಹಾನಂದೆ ತೂಗಲಖ್‌ನನ್ನು ಕೂಡಿದಾಗಲೇ ಜಾತಿ ಭ್ರಷ್ಟಳಾಗಿರಲು ಸುದಿತಿಗೆಂತಹ ಹಿಂದೂತ್ವ? ಕೊಚ್ಚೆ ನೀರಿನಲ್ಲಿ ಮುಳುಗಿದ ಆಳು ಕೊಳಕಾಗಿರಲು ಅವನ ಉಡುಪು ಇನ್ನೂ ಬಿಳದಿರುವುದೆ! ಕೋಟೆಯ ಗೋಡೆಯಿಂದ ಕಂದಕದಲ್ಲಿ ಹಾರಿದವನ ಮೂಳೆಯೇ ಮುರಿದಿರಲು ಮೈ ಮುಂಚಿನಂತೆಯೇ ಇರುವುದೇ! ಒಲ್ಲದವನಿಗೆ ಒಲವುದೊರುವುದರಿಂದ ಆಗುವುದೇನು! ಒಂದು ಬಾರಿಯೆಂದೆ 'ಒಲ್ಲೆ'ನೆಂಬುದು ಅನ್ನದಿರುವ ನೂರು ಬಾರಿಗಾಗಿ ನಿಂತಿದೆ. ನೂರೊಂದು ಸೊನ್ನೆಗಳು ಅವುಗಳ ಹಿಂದೆ 'ಒಂದು' ಎಂಬ ಅಂಕೆಯಾದರೂ ನಿಲ್ಲದಿದ್ದಲ್ಲಿ ವ್ಯರ್ಥವಾಗುವಂತೆ, ನೀನು ನೂರಾರು ಬಾರಿ ಬೇಡಿದರೂ ನನ್ನ ಅಸಮ್ಮತಿಯನ್ನು ಸೂಚಿಸಿದ ಮೇಲೆ ನಾನು ಹಿಂದೆ ಅಂಕೆಯಾಗಿ ನಿಲ್ಲುವುದಿಲ್ಲವೆಂದು ನಿರ್ಧರಿಸಿ ನಿನ್ನ ಮಾತನ್ನೆಲ್ಲ ಶೂನ್ಯಲೋಕಕ್ಕೆ ಸೇರಿಸಿದಂತಾಯ್ತು" (ಶ್ರೀಕಂಠ ಕೂಡಿಗೆ; ೨೦೦೬; ಪು. ೫೪೪) ಎಂದು ಕುಮಾರರಾಮನು ಹೇಳುತ್ತಾನೆ. ಹೀಗೆ ಇಡೀ ನಾಟಕದಲ್ಲಿ ಕುಮಾರರಾಮನಿಗೆ ಧರ್ಮ ಮುಖ್ಯವಲ್ಲ ಅಲ್ಲಿರುವ ಮೌಲ್ಯಗಳು ಮುಖ್ಯವಾಗುತ್ತವೆ.

ಈ ನಾಟಕದಲ್ಲಿ ಕಾಲ, ದೇಶಗಳ ಉಲ್ಲೇಖಗಳಿವೆ. ೧೩ನೇ ಶತಮಾನದ ದೇವಾಲಯಗಳ ನಾಶ, ಮತಾಂತರ ಪ್ರಕ್ರಿಯೆ ಮುಂತಾದ ಅಂಶಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಮುಸಲ್ಮಾನರ ಅಕ್ರಮಣ ರಾಜಕೀಯ ದಾಳಿಯಾಗಿ ಉಳಿಯದೆ ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣವಾಯಿತು. ಇಲ್ಲಿ ವಿಜಯನಗರ ಪೂರ್ವ ಸಾಮ್ರಾಜ್ಯ ಕುಮ್ಮಟ. ಕಂಪಿಲದೇವ ಅದರ ಅರಸು. ಹರಿಯಾಲೆ ಮತ್ತು ರತ್ನಾಜಿ ಅವನ ರಾಣಿಯರು. ಕುಮಾರರಾಮ ಹರಿಯಾಲೆ ಹೊಟ್ಟೆಯಲ್ಲಿ ಜನಿಸಿರುತ್ತಾನೆ. ವಾರಂಗಲ್ಲಿನ ಪ್ರತಾಪರುದ್ರನನ್ನು ಸೋಲಿಸಿ 'ಬೊಲ್ಲ' ಎನ್ನುವ ಕುದುರೆ ಗೆದ್ದು ತಂದವನು. 'ಪರದಾರ ಸೋದರ' ಬಿರುದಾಂಕಿತನಾಗಿರುತ್ತಾನೆ. ಮಹಮ್ಮದ್ ತೂಘಲಕ್‌ನ ಹಿಂದೂ ಹೆಂಡತಿ ಮಹಾನಂದೆಯ ಮಗಳು

ಬಾಬಮಿಯನ್ನು ಮದುವೆ ಮಾಡಿಕೊಡಲು ದೆಹಲಿ ಸುಲ್ತಾನ ಆಕ್ಷೇಪಪಟ್ಟರೂ ತಿರಸ್ಕರಿಸಿ ವೈರತ್ವವನ್ನು ಕಟ್ಟಿಕೊಂಡನು. ಈ ಅಂಶಗಳು ನಾಟಕದ ಒಂದು ಮತ್ತು ಎರಡನೆಯ ಅಂಕಗಳಲ್ಲಿ ಮೂಡಿಬರುತ್ತವೆ.

ಮಕ್ಕಳಿಲ್ಲದ ಕಿರಿಯ ಹೆಂಡತಿ ರತ್ನಾಜಿ ವಯಸ್ಸಿಗೆ ಬಂದ ಕುಮಾರರಾಮನಲ್ಲಿ ಅನುರಕ್ತಳಾಗಿ ಅವನನ್ನು ರತಿಕ್ರೀಡೆಗೆ ಬಲಾತ್ಕರಿಸುವುದು, ಅವನು ನಿರಾಕರಿಸಿದಾಗ ಕಂಪಿಲರಾಯನಿಗೆ ರಾಮನು ಅತ್ಯಾಚಾರ ಮಾಡಿದನೆಂದು ಸುಳ್ಳು ಹೇಳಿ ಅವನ ತಲೆ ತೆಗಿಸುವ ಯತ್ನಮಾಡುವುದು, ಸೇನಾನಾಯಕ ಬೈಚಕುಮಾರರಾಮನ ಕೊಲೆಯಾಯಿತೆಂದು ಹುಸಿನಾಟಕವಾಡುವುದು, ಕಂಪಿಲನ ಶೋಕ, ರತ್ನಾಜಿಯ ಹರ್ಷ, ಇತ್ಯಾದಿಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ (ಶ್ರೀಕಂಠ ಕೂಡಿಗೆ; ೧೯೯೪; ಪು.೪೫). ಹೀಗೆ ಶ್ರೀಕಂಠ ಕೂಡಿಗೆಯವರು ಅಭಿಪ್ರಾಯಪಡುತ್ತಾರೆ. ಇಲ್ಲಿ ಕುಮ್ಮಟ ರಾಜ್ಯದ ಅಂತಃ ಕಲಹವನ್ನು ಬಿಂಬಿಸಲಾಗಿದೆ. ಆ ಕಾಲದ ಮಹಿಳೆ ಸಮಾಜದ ನಿರ್ಬಂಧಗಳನ್ನು ಹೇಗೆ ಎದುರಿಸ ಬೇಕಾಗಿತ್ತು ಮತ್ತು ಇನ್ನೂ ಅನೇಕ ಸಂಗತಿಗೆ ತಿರುವು ಕೊಡಲು ಇಲ್ಲಿ ಸಾಧ್ಯವಾಗಿದೆ ಎಂದು ಹೇಳಬಹುದು.

ಕುಮಾರರಾಮನಿಲ್ಲದ ಕುಮ್ಮಟ ಸೇನೆಯನ್ನು ಗೆಲ್ಲುವುದು ಸುಲಭವೆಂದು ಸುಲ್ತಾನನ ಸೇನೆ ದಂಡೆತ್ತಿ ಬರುತ್ತದೆ. ತಲೆಮರೆಸಿಕೊಂಡಿದ್ದ ಕುಮಾರರಾಮ ಶತ್ರುವಿನ ಎದುರಾಗಿ ಹೋರಾಡಿ ಜಯ ತಂದುಕೊಡುತ್ತಾನೆ. ತಾನು ಮಾಡಿದ ತಪ್ಪು ಅರಿವಾಗಿ ರತ್ನಾಜಿ ನೇಣುಹಾಕಿಕೊಳ್ಳುವ ದುರಂತವನ್ನು ನಾಲ್ಕನೆಯ ಅಂಕದಲ್ಲಿ ನಿರೂಪಿಸಲಾಗಿದೆ (ಅದೇ) ಎಂದು ಶ್ರೀಕಂಠ ಕೂಡಿಗೆಯವರು ಹೇಳುತ್ತಾರೆ. ನಾಲ್ಕು ಸಾಲುಗಳಲ್ಲಿ ನಲವತ್ತು ವರ್ಷದ ಚರಿತ್ರೆಯ ಅಂಶಗಳನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ. ಇಲ್ಲಿ ರಾಮನ ಎದುರಾಳಿಗಳ ಹುಸಿ ಆತ್ಮವಿಶ್ವಾಸವಿದೆ. ಕುಮ್ಮಟ ಯುವರಾಜನ ವಿಜಯೋತ್ಸವ ಸನ್ನಿವೇಶವನ್ನು ಬಿತ್ತರಿಸಲಾಗಿದೆ. ಕಾಮುಕ ಮಹಿಳೆಯ ಆತ್ಮಹತ್ಯೆ ಪ್ರಕರಣವನ್ನು ಬಿಂಬಿಸಲಾಗಿದೆ.

ಶ್ರೀಕಂಠ ಕೂಡಿಗೆಯವರು ಮುಂದುವರಿಕೆ ಭಾಗವಾಗಿ ಚರ್ಚೆಯನ್ನು ಐದನೇ ಅಂಕವು ಕುಮಾರರಾಮ ಮೋಸದಿಂದ ಸಾವನ್ನಪ್ಪುವ ಬಗೆಯನ್ನು ವಿವರಿಸುತ್ತದೆ. ಕಂಪಿಲನ ತೆಲುಗುರಾಣಿಯ ಮಗ ಯಲ್ಲರಸ ರಾಜನಾಗುವ ಸ್ವಾರ್ಥಕ್ಕಾಗಿ ಮಧ್ಯರಾತ್ರಿಯಲ್ಲಿ ಶತ್ರುಗಳಿಗೆ ಕೋಟೆಯ ಹೆಬ್ಬಾಗಿಲು ತೆಗೆಸುವ ಹೀನ ಕೃತ್ಯ ಮಾಡುತ್ತಾನೆ.[೧] ಪರಿಣಾಮ ಸುಲ್ತಾನರ ಸೇನಾನಿ ಮಾತಂಗಿ ಮತ್ತು ಕುಮಾರ ರಾಮನ ನಡುವೆ ಕಾಳಗ ನಡೆಯುತ್ತದೆ. ಮಾತಂಗಿ ಸೆರೆ ಸಿಕ್ಕುತ್ತಾಳೆ. ಯುದ್ಧದಲ್ಲಿ ಸ್ತ್ರೀಯನ್ನು ಕೊಲ್ಲುವುದು ಕ್ಷತ್ರಿಯ ಧರ್ಮಕ್ಕೆ ವಿರೋಧವೆಂದು ಕುಮಾರರಾಮ ಅವಳನ್ನು ಬಿಟ್ಟುಬಿಡುತ್ತಾನೆ. ಮುಂದೆ ಆಕೆ ಮೋಸದಿಂದ ಬಾಣಬಿಟ್ಟು ಅವನ ಸಾವಿಗೆ ಕಾರಣಳಾಗುತ್ತಾಳೆ. ಜೀವಂತವಾಗಿ

---

೧. ಈ ಪಾತ್ರದ ಹೆಸರು ಕುಮ್ಮಟದುರ್ಗದ ಚರಿತ್ರೆಗೆ ಸಂಬಂಧಪಟ್ಟ ಬೇರೆ ಬೇರೆ ಕೃತಿಗಳಲ್ಲಿ ಬೇರೆ ಬೇರೆಯಾಗಿ ಉಲ್ಲೇಖವಾಗಿದೆ.

ಕುಮಾರರಾಮನನ್ನು ಸಂದಿಸಬೇಕೆಂದಿದ್ದ ಸುಲ್ತಾನನ ಮಗಳು ಬಾಬಮಿ ಅವನ ತುಂಡಾದ ಶಿರವನ್ನು ನೋಡಿ ಹತಾಶಳಾಗುತ್ತಾಳೆ. ಸ್ವತಃ ಕತ್ತಿಯಿಂದ ಇರಿದುಕೊಂಡು ಮರಣದಲ್ಲಿ ಒಂದಾಗುವ ಬಯಕೆ ವ್ಯಕ್ತಪಡಿಸುವಲ್ಲಿಗೆ ನಾಟಕ ಮುಕ್ತಾಯವಾಗುತ್ತದೆ (ಅದೇ; ಪು. ೪೫) ಹೀಗೆ ಅಭಿಪ್ರಾಯ ಪಡುತ್ತಾರೆ.

ಈ ನಾಟಕಕ್ಕೆ ನಂಜುಂಡ ಕವಿಯ ರಾಮನಾಥ ಚರಿತೆಯ ಆಕರವಾಗಿರುವಂತೆ ಕಂಡುಬರುತ್ತದೆ. ಇತಿಹಾಸದ ಸಣ್ಣ ಎಳೆಯನ್ನು ಇರಿಸಿಕೊಂಡು ನಂಜುಂಡ ಕವಿಯ ರಾಮನಾಥ ಚರಿತೆಯನ್ನು ಪ್ರಧಾನ ಆಕರವಾಗಿಸಿಕೊಂಡು ಮೌಖಿಕ ಸಂಪ್ರದಾಯದ ಐತಿಹ್ಯಗಳನ್ನು ಬಳಸಿಕೊಂಡು ಅಷ್ಟಿಷ್ಟು ಕಲ್ಪನೆಗಳನ್ನು ಸೇರಿಸಿಕೊಂಡು ಪ್ರಸ್ತುತ ನಾಟಕವನ್ನು ರಚಿಸಿದಂತಿದೆ.

೩.೩. ರತ್ನಾಜಿ

'ವೀರಣ್ಣ ರಾಜೂರ'ರವರು ಐತಿಹಾಸಿಕ ಹಿನ್ನೆಲೆಯುಳ್ಳ 'ರತ್ನಾಜಿ' ಎಂಬ ರೇಡಿಯೋ ನಾಟಕವನ್ನು ರಚಿಸಿದ್ದಾರೆ. ಕುಮಾರರಾಮನನ್ನು ಕುರಿತ ಇತರ ನಾಟಕಗಳಲ್ಲಿ ಪುರುಷ ಪಾತ್ರಗಳಿಗೆ ಪ್ರಾಧಾನ್ಯತೆ ಇದ್ದರೆ, ವೀರಣ್ಣ ರಾಜೂರರವರು ಮಹಿಳಾ ಪಾತ್ರಕ್ಕೆ ಮನ್ನಣೆಯನ್ನು ಸಲ್ಲಿಸಿ ಈ ನಾಟಕವನ್ನು ರಚಿಸಿದ್ದಾರೆ. ಕುಮಾರರಾಮ ಅಥವಾ ಕುಮ್ಮಟದುರ್ಗದ ಇತಿಹಾಸವನ್ನು ಕುರಿತ ಇನ್ನುಳಿದ ನಾಟಕಗಳಿಗೆ ಹೋಲಿಸಿದರೆ ಈ ಕೃತಿಯು ತುಸು ಭಿನ್ನವಾಗಿ ನಿಲ್ಲುತ್ತದೆ. ಇಲ್ಲಿ ಅಂಕ ದೃಶ್ಯಕ್ಕೆ ಬದಲಾಗಿ ಅಲೆ ಎಂದು ಹೆಸರಿಸಿ ನಾಟಕಕ್ಕೆ ಮೆರಗನ್ನು ತಂದಿದ್ದಾರೆ. ಚಿಕ್ಕ ನಾಟಕವಾದ್ದರಿಂದ ಇಲ್ಲಿ ಬಹಳಷ್ಟು ಪಾತ್ರಗಳನ್ನು ಚಿತ್ರಿಸಲಾಗಿಲ್ಲ. ರತ್ನಾಜಿಗೆ ಉತ್ತೇಜನ ಕೊಡುವಂತಹ ಪಾತ್ರ ಚಿತ್ರಣವನ್ನು ತರಲಾಗಿದೆ. ನಾಟಕದಲ್ಲಿ ರತ್ನಾಜಿಯ ಪಾತ್ರದ ಮೂಲಕ ಇಡೀ ಆ ಕಾಲದ ಚರಿತ್ರಾಂಶಗಳನ್ನು ಆಧರಿಸಿ ಕಥಾಹಂದರ ಬೆಳೆಯುತ್ತಾ ಹೋಗುತ್ತದೆ. ಕಂಪಿಲರಾಯ ಕುಮ್ಮಟದುರ್ಗದ ದೊರೆ, ವಿಜಯನಗರ ಸಾಮ್ರಾಜ್ಯ ಪೂರ್ವದಲ್ಲಿ ಕಂಪಿಲನು ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿಯಲು ಸಾಧ್ಯವಿದೆ. ಕರ್ನಾಟಕದ ರತ್ನಸಿಂಹಾಸನವನ್ನು ದಕ್ಷತೆಯಿಂದ ಕಾಪಾಡಿದವರು ಕುಮಾರರಾಮ ಅವನ ನೆಚ್ಚಿನ ಕುವರ. ಏಕಾಂಗಿ ವೀರ, ರೂಪ, ವಿದ್ಯೆ, ಗುಣ ಪರಾಕ್ರಮಗಳನ್ನು ವೈಭವೀಕರಿಸಲಾಗಿದೆ. ರತ್ನಾಜಿ ಕಥಾನಾಯಕಿಯಾದರೂ ಇದರ ಜೊತೆ ಜೊತೆಗೆ ನಾಟಕ ಹೊಸ ಸ್ವರೂಪ ಪಡೆದುಕೊಂಡಿದೆ. ರತ್ನಾಜಿಯ ಪಾತ್ರ ಚಿತ್ರಣಕ್ಕೆ ಚ್ಯುತಿಯಾಗದಂತೆ ಕುಮಾರರಾಮನಿಗೆ ಗೌರವ ತರುವಂತಹ ಸನ್ನಿವೇಶವನ್ನು ಮಾರ್ಮಿಕವಾಗಿ ನಾಟಕದಲ್ಲಿ ಚಿತ್ರಿಸಲಾಗಿದೆ. ಮೊದಲೆರಡು ಅಲೆಗಳಲ್ಲಿ ಸ್ತ್ರೀ ಪಾತ್ರಗಳ ಚಿತ್ರಣವಿದೆ. ನಾಟಕಕಾರರು ಸಂಗಾಯಿ ಪಾತ್ರದ ಮೂಲಕ 'ಅಮ್ಮಾ ಹಿರಿಯ ರಾಯರ ಕಿರಿಯ ರಾಣಿಯವರ' ಎಂಬ ಸಂಭೋದನೆಯಲ್ಲಿ ರತ್ನಾಜಿ ಕಂಪಿಲನಿಗೆ ಎರಡನೆ ಹೆಂಡತಿ ಎಂಬುದು ತಿಳಿದುಬರುತ್ತದೆ. ಚರಿತ್ರೆಯ ವಿವಿಧ ಆಯಾಮಗಳು ಗೋಚರಿಸುತ್ತವೆ. ಒಟ್ಟಾರೆ ನಾಟಕದ ಹಿನ್ನೆಲೆಯು ಈ ರೀತಿ ನಿರೂಪಿತವಾಗಿದೆ.

ವಸಂತ ಮಾಸದ ಪ್ರಶಾಂತ ಪ್ರಾತಃಕಾಲ ಕೋಗಿಲೆಯ ಹರ್ಷ ತುಂಬಿದ ಕುಕಿಲ, ಪುಷ್ಪಲತೆ, ತರು, ಮರ, ತಳಿರು, ಪಶುಪಕ್ಷಿ ಜನಮನ ಎಲ್ಲೆಲ್ಲೂ ಆನಂದದ ಅಮರಗಾನ, ಸಂಭ್ರಮದ ಸುಹಾಸ, ಸೊಗಸಿನ ಸುಗ್ಗಿ, ವಿಜಯೋತ್ಸವ, ವಸಂತೋತ್ಸವ, ಶೂಲದ ಹಬ್ಬ. ಕುಮ್ಮಟದ ಜನತೆಯಲ್ಲಿ ಮುಮ್ಮಡಿ ಉತ್ಸಾಹ, ಮಾರ್ಮಡಿ ಉನ್ಮಾದ, ಉತ್ಸವದ ಧ್ಯೋತಕವಾಗಿ ಅರಸಕುವರರ ಮೆರವಣಿಗೆ, ವಿವಿಧ ವಾದ್ಯ ಮೇಳಗಳ ಸಮ್ಮಿಲನ. ಕರಿ ತುರಗ ಕಾಲ್ದಳಗಳ ಸಾಲು. ಕಲಾವಿದರ ಕುಣಿತ, ಮಣಿತ ಜನಸಮೂಹದ ಕೇಕೆ, ನೆಗೆತ ಮೇರೆ ಮೀರಿದ ಸಂಭ್ರಮ./

ಉತ್ಸವ ಮೆರವಣಿಗೆ ರಾಜ್ಯದ ಪ್ರಮುಖ ಬೀದಿಗಳಲ್ಲಿ ನಡೆದು ಕಂಪಿಲರಾಯನ ಕಿರಿರಾಣಿ ರತ್ನಾಜಿಯ ಅರಮನೆಯನ್ನು ಸಮೀಪಿಸುತ್ತದೆ. ಉಪ್ಪರಿಗೆಯ ಮೇಲೆ ನಿಂತ ಅವಳ ಸಖಿ ಸಂಗಾಯಿ ಅದನ್ನು ಕಂಡು ಉಬ್ಬಿ ತನ್ನ ನೆಚ್ಚಿನ ರಾಣಿಯನ್ನು ಕರೆದು ತೋರಿಸುತ್ತಾಳೆ (ವೀರಣ್ಣ ರಾಜೂರ; ೧೯೮೦; ಪು.೫). ಹೀಗೆ ನಾಟಕದ ಪ್ರಾರಂಭಕ್ಕೆ ಮುಂಚಿತವಾಗಿ ಕುಮ್ಮಟದುರ್ಗದ ಸಮಗ್ರ ಚಿತ್ರಣವನ್ನು ಕಲ್ಪಿಸಲಾಗಿದೆ. ಇಲ್ಲಿರುವ ಅಂಶಗಳು ನಾಟಕ ಬೆಳವಣಿಗೆಗೆ ತಳಹದಿಯಾಗಿವೆ. ಈ ಅಂಶಗಳನ್ನು ಪ್ರಧಾನವಾಗಿ ನಾಟಕದ ಭಾಗವಾಗಿ ತರಲಾಗಿಲ್ಲ. ಈ ನಾಟಕದಲ್ಲಿ ಸರಳ ರೀತಿಯ ಸಂಭಾಷಣಾ ಶೈಲಿಯನ್ನು ಬಳಸಲಾಗಿದೆ. ಪ್ರತಿಯೊಂದು 'ಅಲೆ'ಯು ತನ್ನದೇ ಆದ ಸ್ಥಳ ಚರಿತ್ರೆಯನ್ನು ಬಿತ್ತರಿಸುತ್ತವೆ. ಇಲ್ಲಿ ನಾಟಕದ ಮೊದಲ ಭಾಗದಲ್ಲಿ ಬರುವಂತಹ ಸಂಭಾಷಣೆಯು ಮಹಾರಾಣಿ ದಾಸಿಯರ ಮೂಲಕ ಕುಮ್ಮಟದುರ್ಗದ ಸಾಮಂತ ರಾಜಕುಮಾರರ ಚರಿತ್ರೆಯನ್ನು ಬಿಂಬಿಸುತ್ತದೆ. ಸಂಗಾಯಿ ರತ್ನಾಜಿಗೆ ಹೇಳುವಂತಹ ಮಾತು "ಕೇಳಿ ರಾಣಿಯವರೇ, ಅಲ್ಲಿ ನೋಡಿ ಮುಂದೆ ಹೊರಟಿರುವವರು ರಾಯದುರ್ಗದ ರಾಮದೇವರು, ಅವರ ಹಿಂದಿನವನು ಉದಯಗಿರಿಯ ಸಂಗಮದೇವರು. ಅವರ ಪಕ್ಕದಲ್ಲಿರುವವರು ಪೆನುಗೊಂಡೆಯ ಪಾಪರಾಜರು, ಮಧ್ಯದಲ್ಲಿರುವವರು ಅದವಾನಿಯ ಭಾವಸಂಗಮರು" (ಅದೇ; ಪು. ೬) ಎಂಬಲ್ಲಿ ನೇರೆ ರಾಜ್ಯಗಳ ಬಗೆಗೆ ತುಣುಕು ನೋಟವನ್ನು ಬೀರಲಾಗಿದೆ. ರತ್ನಾಜಿ ಕಂಪಿಲರಾಯನ ಕಿರಿಯರಾಣಿ. ಅಪ್ರತಿಮ ಸೌಂದರ್ಯದ ಪುತ್ಥಳಿ. ಮನ್ಮಥನ ಅಂಗೈಯ ಅರಗಿಳಿ. ರೂಪ, ಯೌವ್ವನ, ಸೊಬಗು ಸುಕುಮಾರತನಗಳನ್ನು ಕಂಡು ಚಿತ್ತದ ಚಪಲತೆಗೊಳಗಾಗಿ ಕಂಪಿಲ ಮುದಿವಯದಲ್ಲಿ ಹದಿವಯದ ಅವಳನ್ನು ಉಪಾಯದಿಂದ ಮದುವೆಯಾಗುತ್ತಾನೆ. ಸಕಲ ಸುಖಸೌಭಾಗ್ಯಗಳನ್ನು ಒದಗಿಸಿ ರಾಜವೈಭವದ ರತ್ನ ಮಂಚದ ಮೇಲೆ ಒರಗಿಸುತ್ತಾನೆ. ಅವಳ ಸುಖ ಸಂತೋಷಕ್ಕಾಗಿ ಏನೆಲ್ಲಾವನ್ನು ಮಾಡುತ್ತಾನೆ. ಆದರೆ ಯೌವ್ವನದ ಸ್ತ್ರೀಗೆ ಬೇಕಾದ ದೈಹಿಕ ಸುಖವನ್ನು ಒದಗಿಸಿ ತೃಪ್ತಿಪಡಿಸುವುದರಲ್ಲಿ ವಿಫಲನಾಗುತ್ತಾನೆ. ವಯದ ಉನ್ಮಾದಕ್ಕನುಗುಣವಾಗಿ ರತ್ನಾಜಿಯ ಅಂತರಂಗದಲ್ಲಿ ಮದನಜ್ವಾಲೆ ಸುಪ್ತವಾಗಿ ಸುಡತೊಡಗುತ್ತದೆ. ಅದನ್ನು ಶಮನಗೊಳಿಸಲೆಂದು ಓರಗೆಯ ಪುರುಷನ ಬಯಸಿ ಒಳಗೊಳಗೆ ಅವಳ ಮನ ತಳಮಳಿಸುತ್ತದೆ. ಕುದಿದು ಕೊರಗುತ್ತದೆ. ರತಿ ಹುಚ್ಚೆದ್ದು ಕುಣಿಯತೊಡಗುತ್ತದೆ. ಮದನ ಕೋಲಾಹಲ

ನಡೆಸುತ್ತಾನೆ. ಅದೆಲ್ಲವನ್ನು ಅರಸನೆದುರು ಪ್ರಕಟಿಸದೆ ಒಳಗೇ ಅದುಮಿಟ್ಟುಕೊಂಡು ರತ್ನಾಜಿ ಜ್ವಾಲಾಮುಖಿಯಂತಿದ್ದಾಳೆ (ಅದೇ; ಪು. ೧-೨) ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ರತ್ನಾಜಿಯ ಮನೋವಿಕಾರಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಲೈಂಗಿಕ ಕೊರತೆಯನ್ನು ತುಂಬಿಸಿದ ಕಂಪಿಲನು ರತ್ನಾಜಿಯ ಆತ್ಮಶಕ್ತಿಗೆ ಪೆಟ್ಟುಕೊಟ್ಟಂತೆ ಈ ನಾಟಕದಲ್ಲಿ ಬಿಂಬಿತವಾಗಿದೆ. ಅಂತರಂಗದಲ್ಲಿ ತಳಮಳವನ್ನು ರತ್ನಾಜಿ ಅನುಭವಿಸುತ್ತಾಳೆ. ಇಲ್ಲಿ ಪ್ರಾರಂಭದಲ್ಲಿ ಪ್ರೇಮಯುದ್ಧ ಪ್ರಾರಂಭವಾದ ನಾಟಕ ಕೊನೆಗೆ ರಾಜ್ಯ ರಕ್ಷಣೆಗೆ ಮಾಡುವ ಯುದ್ಧದಲ್ಲಿ ಕೊನೆಗೊಳಿಸಲಾಗಿದೆ. ಹೀಗೆ ವೀರಣ್ಣ ರಾಜೂರರವರು ರೇಡಿಯೋ ನಾಟಕಕ್ಕೆ ಹೊಂದಿಕೊಳ್ಳುವ ಹಾಗೆ ರಚಿಸಿದ ಐತಿಹಾಸಿಕ ನಾಟಕ ಇದಾಗಿದೆ. ರತ್ನಾಜಿ ಶೀರ್ಷಿಕೆಯಾಗಿ ಕಂಡುಬಂದರೂ ಪ್ರಧಾನವಾಗಿ ಎದ್ದು ಕಾಣುವುದು ರಾಮನ ಪಾತ್ರವಾಗಿದೆ. ನಾಟಕದ ಶೀರ್ಷಿಕೆಯ ಪ್ರಕಾರ ರತ್ನಾಜಿಯೇ ಇಲ್ಲಿ ಕೇಂದ್ರಪಾತ್ರವೆಂದು ಭಾಸವಾದರು. ಒಟ್ಟಾರೆ ನಾಟಕದ ಆಶಯವನ್ನು ಗಮನಿಸಿದರೆ, ಕುಮಾರರಾಮನ ಶೌಚ, ತ್ಯಾಗ, ಗುಣಗಳೇ ಇಲ್ಲಿ ಎದ್ದು ಕಾಣುತ್ತವೆ.

೩.೪. ಪರದಾರಾ ಸೋದರ ಮತ್ತು ಕಡುಗಲಿ ಕುಮಾರರಾಮ

ಎಸ್. ಉಮಾಪತಿಯವರು ಕುಮಾರರಾಮನ ಚರಿತ್ರೆಯನ್ನು ವಸ್ತುವಾಗಿರಿಸಿಕೊಂಡು ಎರಡು ನಾಟಕಗಳನ್ನು ರಚಿಸಿದ್ದಾರೆ. ೧. 'ಪರದಾರ ಸೋದರ ಕುಮಾರರಾಮ' ಮತ್ತು ೨. 'ಕಡುಗಲಿ ಕುಮಾರರಾಮ'. ಮೊದಲನೆಯ ನಾಟಕವು ಕುಮಾರರಾಮನ ಶೌಚಗುಣವನ್ನು ಎತ್ತಿತೋರಿಸಿದರೆ, ಎರಡನೆಯದು ಅವನ ಶೌರ್ಯಗುಣವನ್ನು ಬಿಂಬಿಸುತ್ತದೆ. ನಾಟಕಗಳ ಆಶಯ ಕುರಿತು ಅಥವಾ ನಾಟಕದ ಆಶಯವೇನೆಂಬುದನ್ನು ನಾಟಕಕಾರರ ಮಾತುಗಳಲ್ಲಿ ಗಮನಿಸುವುದು ಸೂಕ್ತ. "ಇಂದಿನಿಂದ ಜೀವನವನ್ನು ಸ್ವಲ್ಪ ವಿವರವಾಗಿ ವಿಮರ್ಶಿಸಿ ನೋಡಿದರೆ ಹಿಂದಿನಿಂದ ಬಂದ ಹಲವಾರು ಸಂಪ್ರದಾಯಗಳು ಹಾಗೂ ಮಾನವನ ಮೂಲಭೂತ ಗುಣಗಳು ನಶಿಸಿ ಹೋಗುತ್ತಾ ಬಂದಿರುವುದು ಕಾಣದಿರದು. ಸಾರ್ವಜನಿಕ ಕ್ಷೇತ್ರದ ಸರ್ವರಂಗಗಳಲ್ಲಿಯೂ ಸರ್ವವಿಧವಾದ ಅನಾರೋಗ್ಯವುಂಟಾಗಿ ಅದರ ಫಲವಾಗಿ ಮನುಷ್ಯನಲ್ಲಿ ಹಿಂದಿನಿಂದ ಬಂದ ಅನೇಕ ಉತ್ತಮ ಗುಣಗಳು ಕಣ್ಮರೆಯಾಗುತ್ತಿರುವುದು ಇಂದು ಕಂಡುಬರುತ್ತದೆ. ಸಕಾಲದಲ್ಲಿ ಲೋಪದೋಷಗಳನ್ನು ಕಿತ್ತೊಗೆದು, ಸಮಾಜದ ಸಸಿಯಾದ ವ್ಯಕ್ತಿಯ ಹುಲುಸಾದ ಹಾಗೂ ಸರ್ವತೋಮುಖವಾದ ಬೆಳವಣಿಗೆಗೆ ಸರಿಯಾದ ಸಸಿನೇ ಅವಶ್ಯಕ. ಇಲ್ಲದಿದ್ದರೆ ಬೆಳೆಗಿಂತ ಕಳೆಯೇ ಹೆಚ್ಚುವ ಸಂಭವವುಂಟು (ವೀರಣ್ಣ ರಾಜೂರು; ೧೯೭೫; ಪು. ೭) ಎಂದು ಲೇಖಕರು ಸಮಗ್ರ ಸಮಾಜ ರೂಪಿಸುವ ಬಗೆಯನ್ನು ತಿಳಿಸಿದ್ದಾರೆ. ಮಾನವನು ಆರೋಗ್ಯಕರ ಗುಣಗಳನ್ನು ಅಳವಡಿಸಿಕೊಳ್ಳಬೇಕು. ನಾವು ಸಮಾಜವನ್ನು ರೂಪಿಸಿದಂತೆ ಅದಕ್ಕೆ ಪ್ರತಿಯಾಗಿ ಅದೇ ಸಮಾಜ ನಮ್ಮನ್ನು ಕಾಪಾಡುತ್ತದೆ ಎಂಬುದು ಲೇಖಕರ ಆಶಯವಾಗಿದೆ. ಅದನ್ನು ಕಾರ್ಯಗತಗೊಳಿಸುವ ಉದ್ದೇಶವಾಗಿದೆ ಎಂಬುದಕ್ಕೆ ಈ ಎರಡು ನಾಟಕಗಳೇ ಸಾಕ್ಷಿಯಾಗಿವೆ.

"ಕೌಟುಂಬಿಕ ಜೀವನದಲ್ಲಿ ಹಾಗೂ ಸಾರ್ವಜನಿಕ ರಂಗಗಳಲ್ಲಿ ಇಂದು ಅಶ್ಲೀಲ ಶೀಲಕ್ಕಿಂತ ಪ್ರಬಲವಾಗಿ ಹಬ್ಬುತ್ತಿರುವುದು ಗಮನಾರ್ಹವಾದ ಅಂಶ. ಅದಕ್ಕೆ ಕಾರಣ ಯಾವುದೇ ಇರಲಿ, ಯಾರೆ ಇರಲಿ ಸರಕಾರ ಮತ್ತು ಸಮಾಜ ಅಶ್ಲೀಲವನ್ನು ಹೋಗಲಾಡಿಸಿ ಶೀಲವನ್ನು ಸ್ಥಾಪಿಸುವ ಪ್ರಯತ್ನದ ಹಾದಿಯಲ್ಲಿ ನಡೆಯಬೇಕು. ಇಲ್ಲದಿದ್ದರೆ ಎರಡಕ್ಕೂ ನಷ್ಟ" (ಅದೇ) ಎಂದು ಲೇಖಕರು ಸಮಾಜದ ಉಪವಿಭಾಗವಾದ ಕುಟುಂಬದ ಬಗ್ಗೆ ಲೇಖಕರ ಆಶಯವಾಗಿದೆ. ಇಂದು ಕುಟುಂಬದಲ್ಲಿ ಕಂಡುಬರುವ ಅಂತಃಕಲಹಗಳನ್ನು ಹೋಗಲಾಡಿಸುವ ಕುರಿತಂತಿದೆ. ಸಮಾಜದಲ್ಲಿನ ಅಶಾಂತಿ, ಭ್ರಷ್ಟಾಚಾರ, ಅನ್ಯಾಯದ ಪರಮಾವಧಿ. ಹೀಗೆ ಹತ್ತು ಹಲವಾರು ಪ್ರಶ್ನೆಗಳನ್ನು ಎತ್ತುತ್ತಾರೆ. / ಇಂದು ಕಾನೂನು ಏನನ್ನು ಹೇಳುತ್ತದೆಯೋ ಅದಕ್ಕೆ ವಿರುದ್ಧವಾಗಿ ಬಹುಪಾಲು ಜನಸಮೂಹ ನಡೆದುಕೊಳ್ಳುವಂತಹ ಪರಿಯನ್ನು ಲೇಖಕರು ಮನಗಂಡಂತಿದೆ. ಇದು ಅಕ್ಷರಶಃ ಸತ್ಯವಾಗಿದೆ. ಇಲ್ಲಿ ನಾಟಕದಲ್ಲಿಯೂ ಅನೇಕ ಪಾತ್ರಗಳು ನ್ಯಾಯದ ಗಡಿಯನ್ನು ದಾಟಿ ಅನ್ಯಾಯದ ಪರ ವಕಾಲತ್ತು ವಹಿಸುತ್ತವೆ. ರತ್ನಾಜಿ ಯಾರನ್ನು ಗಂಡನನ್ನಾಗಿ ಸ್ವೀಕರಿಸಬೇಕು? ಇಲ್ಲಿ ನಿರಾಕರಿಸುತ್ತಾಳೆ. ತೋರಿಕೆಯಂತೆ ದೈಹಿಕವಾಗಿ ಒಪ್ಪಿಕೊಂಡರು ಮಾನಸಿಕವಾಗಿ ಅನ್ಯಾಯದ ಪರವಾಗಿ ನಿಂತಿದ್ದಾಳೆ. ಇಲ್ಲಿ ರಾಮನ ಪಾತ್ರವನ್ನು ಲೇಖಕರು ನ್ಯಾಯದ ಪರವಾಗಿ ಚಿತ್ರಿಸಿದ್ದಾರೆ. ಇದಕ್ಕೆ ಮುಂದುವರಿಕೆಯಾಗಿ ನಾಟಕಕಾರರ ಅಭಿಪ್ರಾಯದಲ್ಲಿ "ವೈಜ್ಞಾನಿಕವಾಗಿ ಹಾಗೂ ಆರ್ಥಿಕವಾಗಿ ಬಹುಮುಂದುವರಿದ ದೇಶಗಳೆಂದು ಪರಿಗಣಿಸಲ್ಪಟ್ಟಿರುವ ದೇಶಗಳ ಸಮಾಜದ ರೀತಿ ನೀತಿಗಳೇ ಬೇರೆ; ನಿಯಮಾವಳಿಗಳೇ ಬೇರೆ. ಕಾನೂನುಗಳೇ ಬೇರೆ. ಅದೇ ರೀತಿ ನೀತಿ ನಿಯಮ ಕಾನೂನು ಗಳನ್ನು ನಾವು ಸಹ ನಮ್ಮ ಸಮಾಜಕ್ಕೆ ಅಂಧರಾಗಿ ಅನ್ವಯಿಸಿಕೊಂಡರೆ ಪ್ರಮಾದವಾದೀತು. ಇದನ್ನು ನಮ್ಮ ಆರ್ಥಿಕ, ಧಾರ್ಮಿಕ ಹಾಗೂ ಸಾಮಾಜಿಕ ತಜ್ಞರು ಪರಿಶೀಲಿಸಬೇಕು, ಪರಿಶೀಲಿಸಿ ನಮ್ಮ ಸಮಾಜಕ್ಕೆ ಅನ್ವಯವಾಗುವಂತಹ ಅಂಶಗಳನ್ನು ಸ್ವೀಕರಿಸಿ ನಮ್ಮ ಸಂಸ್ಕೃತಿಗೆ ತಕ್ಕ ನಿಯಮ ಗಳನ್ನು ರೂಪಿಸಿ ಅವುಗಳನ್ನು ಅನುಸರಣೆಗೆ ತರುವಂತೆ ಜನತೆಯನ್ನು ಪ್ರೇರೇಪಿಸಬೇಕು, ಅಂದಾಗ ಮಾತ್ರ ಜನಜಾಗೃತವಾದೀತು. ಸಮಾಜ ಸುಧಾರಿಸೀತು; ಕಾನೂನಿನಿಂದ ಏನನ್ನೂ ಸಾಧಿಸಲಾಗುವುದಿಲ್ಲ. ಜನತೆಯ ಮನವನ್ನೊಲಿಸುವ ಪ್ರಯತ್ನ ನಡೆಯಬೇಕು. ಅದಕ್ಕೆ ಸಹಾಯಕವಾಗುವ ಸಾಹಿತ್ಯ, ಕಲೆ, ಸಂಗೀತ ಮತ್ತು ಚಲನಚಿತ್ರಗಳನ್ನು ತಯಾರಿಸಿ ಜನರನ್ನು ಪರೋಕ್ಷವಾಗಿ ಈ ಧ್ಯೇಯದತ್ತ ಒಯ್ಯಬೇಕು".

ಈ ಮೇಲಿನ ಧ್ಯೇಯವನ್ನು ಹೊಂದಿ 'ಅಳಿಲಮಳಲ' ಸೇವೆ ಎಂಬಂತೆ ಕರ್ನಾಟಕದಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ ಸುಪ್ರಸಿದ್ಧನಾದ 'ಪರದಾರ ಸೋದರ'ನೆಂದು ಮನ್ನಣೆಯನ್ನು ಪಡೆದು ಕೀರ್ತಿವೆತ್ತಿ ಕಂಪಿಲರಾಯನ ಪುತ್ರನಾದ ಕುಮಾರರಾಮನ ಜೀವನದ ಸನ್ನಿವೇಶವನ್ನು ಉಪಯೋಗಿಸಿಕೊಂಡು ಈ ನಾಟಕವನ್ನು ರೂಪಿಸಲಾಗಿದೆ. ಕುಮಾರರಾಮನ ಆದರ್ಶ ಜೀವನದಿಂದ

ಪ್ರೇರಿತವಾದ ಈ ನಾಟಕ (ಅದೇ; ಪು. ೮) ಈ ರೀತಿಯ ಲೇಖಕರ ಅಭಿಪ್ರಾಯದಲ್ಲಿ ಉತ್ತಮ ಸಮಾಜಕ್ಕೆ ಬೇಕಾಗುವಂತಹ ರೀತಿ ನೀತಿಗಳಿಗೆ ಅನ್ವಯಿಸಿಕೊಡುವನಂತೆ ಕುಮಾರರಾಮನಾಥನನ್ನು ಚಿತ್ರಿಸಲಾಗಿದೆ. ರತ್ನಾಜಿಯ ಪಾತ್ರವು ಇವುಗಳಿಗೆ ವಿರುದ್ಧವಾದ ರೀತಿಯ ನಡತೆಯನ್ನು ಬಿಂಬಿಸಲಾಗಿದೆ. ಇನ್ನೂ ಉಳಿದ ಪಾತ್ರಗಳು ಈ ಎರಡು ಪಾತ್ರಗಳಿಗೆ ಪುಷ್ಠಿಕೊಡುವಂತಹ ಪಾತ್ರಗಳಾಗಿ ಸಮೀಕರಿಸಲಾಗಿದೆ. 'ಪರದಾರ ಸಹೋದರ ಕುಮಾರರಾಮ' ಮತ್ತು 'ಕಡುಗಲಿ ಕುಮಾರರಾಮ' ಒಂದು ನಾಟಕ ಏಳು ದೃಶ್ಯ ಇನ್ನೊಂದು ನಾಟಕ ಒಂಬತ್ತು ದೃಶ್ಯಗಳಿಂದ ಸಾಹಿತ್ಯರೂಪ ಪಡೆದಿದ್ದರೂ ಇವು ಕಟ್ಟಿಕೊಡುವ ಚರಿತ್ರೆ ಅಗಾಧವಾದದ್ದು. ನಾಟಕಗಳು ಕೊಡುವ ಒಂದೊಂದು ಸನ್ನಿವೇಶಗಳು ವಿಭಿನ್ನ ರೀತಿಯ ಚರಿತ್ರೆಯ ಒಳಸುಳಿವುಗಳನ್ನು ಕಟ್ಟಿಕೊಡುತ್ತವೆ. ಎರಡು ನಾಟಕಗಳ ಕಥಾವಸ್ತು ಒಂದೇ ಯಾದರೂ ಅವು ಒಂದಕ್ಕೊಂದು ನಾ ಹೆಚ್ಚು ನೀ ಕಡಿಮೆ ಎನ್ನುವಂತೆ ಮಾತನಾಡಿಕೊಂಡಂತೆ ಬಾಷ್ಯವಾಗುತ್ತದೆ. ಎರಡು ಐತಿಹಾಸಿಕ ನಾಟಕಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಇಲ್ಲಿ ತಮ್ಮದೇ ಆದ ತತ್ತ್ವಗಳ ಪರಿಪಾಲನೆಯ ದೃಷ್ಟಿಯಲ್ಲಿ ಈ ನಾಟಕಗಳು ಮೂಡಿಬಂದಿವೆ. ಪಾತ್ರ ಸೃಷ್ಟಿಯಲ್ಲಿ ನಾಟಕಕಾರ ತಾನು ಹೇಳುವ ಚರಿತ್ರೆಗೆ ಹೊಂದಿಕೊಳ್ಳುವ ರೀತಿಯಲ್ಲಿ ಸೃಷ್ಟಿಸಿದ್ದಾರೆ. ಪರದಾರ ಸೋದರ ಕುಮಾರರಾಮ ನಾಟಕದಲ್ಲಿ ಹಿಂದೂ ಪಾತ್ರಗಳಿಗೆ ಮನ್ನಣೆ ದೊರಕಿಸಲಾಗಿದೆ ಮತ್ತೊಂದು ಕಡುಗಲಿ ಕುಮಾರರಾಮ ಒಂದು ಇಸ್ಲಾಂ ಧರ್ಮದ ಪಾತ್ರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಇಡೀ ಎರಡು ನಾಟಕಗಳನ್ನು ಗಮನಿಸಿದರೆ ಕುಮ್ಮಟದುರ್ಗದ ಸಮಗ್ರ ಚರಿತ್ರೆಯನ್ನು ಕೊಡಲಾಗಿಲ್ಲದಿದ್ದರೂ ಚರಿತ್ರೆಯ ಎಳೆಗಳನ್ನು ಇಲ್ಲಿ ಬಿಚ್ಚಿಡುವ ಪ್ರಯತ್ನ ಮಾಡಲಾಗಿದೆ. ಒಟ್ಟಾರೆ ಯಾಗಿ ಉಮಾಪತಿಯವರ ಈ ಎರಡು ಐತಿಹಾಸಿಕ ನಾಟಕ ಕೃತಿಗಳು ಐತಿಹಾಸಿಕ ಸಾಲಿಗೆ ಪ್ರಮುಖ ಕೊಡುಗೆಗಳೆಂದು ಹೇಳಬಹುದು.

೩.೫. ಕುಮಾರರಾಮ

ಚದುರಂಗರು ಕಥೆ, ಕಾದಂಬರಿಗಳ ಜೊತೆಗೆ ನಾಟಕ ಪ್ರಕಾರವನ್ನು ಗಂಭೀರವಾಗಿ ಪರಿಗಣಿಸಿರುವರೆಂಬುದು ಪ್ರಸ್ತುತ ಕುಮಾರರಾಮ ಕೃತಿಯಿಂದ ಸ್ಪಷ್ಟವಾಗುತ್ತದೆ. ಸಾಹಿತ್ಯಿಕ ಪಠ್ಯವಾಗಿಯೂ ರಂಗಕೃತಿಯಾಗಿಯೂ ಚದುರಂಗರ 'ಕುಮಾರರಾಮ' ಗಮನ ಸೆಳೆಯುತ್ತದೆ. ಇದು ಈ ನಾಟಕದ ದೃಶ್ಯ ಸಂಯೋಜನೆಯಲ್ಲಿ ಹಾಗೂ ದೃಶ್ಯದ ಒಳಗೇ ಕಂಡುಬರುವ ತಂತ್ರಗಾರಿಕೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಕುಮಾರರಾಮ ಒಂದು ದುರಂತ ನಾಟಕ. ಕಂಪಿಲರಾಯನ ಮಗ ರಾಮ ಶೂರ, ಸಾಹಸಿ ಮತ್ತು ಸುಂದರಾಂಗ. ಅವನ ಚಿಕ್ಕಮ್ಮ ರಾಮನ ರೂಪವನ್ನು ಕಂಡು ಮೋಹಿಸುತ್ತಾಳೆ. ರಾಮ ಅವಳ ಮೋಹವನ್ನು ತಿರಸ್ಕರಿಸುತ್ತಾನೆ. ಈ ತಿರಸ್ಕಾರದಿಂದ ಅವಳ ಮೋಹ ದ್ವೇಷವಾರ್ತಿತವಾಗುತ್ತದೆ. ಕಡೆಗೆ ಈ ದ್ವೇಷವೇ ಕುಮಾರರಾಮನ ಪ್ರಾಣವನ್ನು ಬಲಿ ತೆಗೆದುಕೊಳ್ಳುತ್ತದೆ. ಇದು ಸ್ಥೂಲವಾಗಿ ಈ ನಾಟಕದ ಕಥಾನಕ.

ಈ ನಾಟಕದಲ್ಲಿ ಮೂರು ಅಂಶಗಳು ಪ್ರಧಾನವಾಗಿ ಎದ್ದುಕಾಣುತ್ತವೆ. ಮೊದಲನೆಯದು ಕುಮಾರರಾಮ ಪ್ರತಿಪಾದಿಸುವ ಜೀವನಮಟ್ಟ, ಎರಡನೆಯದು ರತ್ನಾಜಿ ವ್ಯಕ್ತಪಡಿಸುವ ಇಂದ್ರಿಯ ಬಯಕೆ ಮತ್ತು ಮೂರನೆಯದು ಪರಕೀಯರ ಆಕ್ರಮಣದಿಂದ ಉಂಟಾಗುವ ಕ್ಷೋಭೆ. ಈ ಮೂರು ಅಂಶಗಳನ್ನು ನಾಟಕದಲ್ಲಿ ಏಕತ್ರಯವಾಗಿ ದುಡಿಸಿಕೊಳ್ಳುವಲ್ಲಿ ನಾಟಕಕಾರರು ಯಶಸ್ವಿಯಾಗಿದ್ದಾರೆ. ನಾಟಕ ಪ್ರಾರಂಭವಾಗುವುದೇ ದೆಹಲಿಯ ಸುಲ್ತಾನ ತುಘಲಖನು ಕಂಪಿಲರಾಯನ ಮುಂದೆ ತಂದೊಡ್ಡುವ ರಾಜಕೀಯ ಒತ್ತಡದಿಂದ ಸುಲ್ತಾನನ ವೈರಿಯಾದ ಬಹಾವುದ್ದೀನ್‌ನಿಗೆ ಕಂಪಿಲರಾಯ ಆಶ್ರಯಕೊಟ್ಟಿದ್ದಾನೆ. ಕಂಪಿಲರಾಯನ ಈ ಉದ್ಧಟನವನ್ನು ಮಣಿಸಲೆಂದು ತುಘಲಖ ಪತ್ರವೊಂದನ್ನು ಕಳಿಸಿದ್ದಾನೆ. ಅದರಲ್ಲಿ ದುಷ್ಟ ಬಹಾವುದ್ದೀನನನ್ನು ಕಳುಹಿಸಿಕೊಡುವುದಲ್ಲದೆ ನೀವು ನಮ್ಮ ಚಕ್ರವರ್ತಿ ಹೃದಯಕ್ಕೆ ಹೆದರದೆ ಎಸಗಿರುವ ಮಹಾಪರಾಧಕ್ಕಾಗಿ ನಾವು ಪಲ್ಲಕ್ಕಿಯಲ್ಲಿ ಇಟ್ಟು ಕಳಿಸಿರುವ ನಮ್ಮ ಪಾದುಕೆಗಳಿಗೆ ಭಯ ಭಕ್ತಿಗಳಿಂದ ನಾಲ್ಕು ಬಳ್ಳ ಹೊನ್ನಿನ ಕಾಣಿಕೆಯನ್ನಿಟ್ಟು ಶಿರಬಾಗಿ ಪ್ರಣಾಮ ಮಾಡಿ, ನಮ್ಮ ಡಿಲ್ಲಿಯ ಆಡಳಿತಾಧಿಕಾರಕ್ಕೆ ಇನ್ನು ಮುಂದೆ ಮಣಿದು ನಡೆಯುವ ಸದ ಸದ್ವಿವೇಕವನ್ನು ತಂದುಕೊಳ್ಳುವಿರೆಂದು ದೃಢವಾಗಿ ನಂಬಿದ್ದೇವೆ ಎಂದಿದೆ. ಇದು ಕಂಪಿಲರಾಯನ ಸಭಾ ಸದಸ್ಯರೆಲ್ಲರ ಕೋಪವನ್ನು ಕೆರಳಿಸುವಂತಿದೆ. ಅವರೆಲ್ಲರೂ ಅತ್ಯಂತ ಮೌನವಾಗಿ ಪಾದುಕೆಯ ಕಡೆ ಹೊರಡುತ್ತಾರೆ. ಎಲ್ಲರೂ ಅವನು ಪಾದುಕೆಗೆ ನಮಸ್ಕರಿಸಲು ಹೋಗುತ್ತಿದ್ದಾನೆಂದು ಭಾವಿಸುತ್ತಾರೆ. ಅವರಿಗೆ ರಾಮನ ಬಗ್ಗೆಯು ಕೋಪ ಉಕ್ಕುತ್ತದೆ. ಆದರೆ ಕಡೆಯಲ್ಲಿ ರಾಮ ಆ ಪಾದುಕೆಗಳನ್ನು ಮುಟ್ಟುವ ಮೂಲಕ ತನ್ನ ಪ್ರತಿಭಟನೆಯನ್ನು ಎಲ್ಲರ ನಿರೀಕ್ಷೆಗೂ ಮೀರಿ ವ್ಯಕ್ತಪಡಿಸುತ್ತಾನೆ. ನಾಟಕದ ಪ್ರಾರಂಭವೇ ತೀವ್ರ ನಾಟಕೀಯ ಸನ್ನಿವೇಶದಿಂದ ಕೂಡಿದೆ. ಇದನ್ನು ನಾಟಕೀಯ ಸನ್ನಿವೇಶ ಎನ್ನುವುದಕ್ಕಿಂತ ಸಿನಿಮೀಯ ಸನ್ನಿವೇಶ ಎನ್ನುವುದು ಹೆಚ್ಚು ಸೂಕ್ತವಾದೀತು. ಈ ನಾಟಕದಲ್ಲಿ ಈ ರೀತಿಯ ಸಿನಿಮೀಯ ದೃಶ್ಯಗಳಿಗೇ ಒತ್ತುಕೊಟ್ಟಂಥ ಘಟನೆಗಳಲ್ಲಿ ಅನೇಕ ವಿಧ ಇವೆ. ಚದುರಂಗರು ಈ ನಾಟಕ ಬರೆಯುವ ಸಮಯಕ್ಕೆ ಚಲನಚಿತ್ರದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಅನಂತರ ಅವರು ಚಲನಚಿತ್ರ ನಿರ್ದೇಶಿಸಿದ್ದಾರೆ.

ಇಲ್ಲಿ ಕುಮಾರರಾಮ ಘಟನಾನಿಷ್ಠ ನಾಟಕ ಎಂದು ಹಿಂದೆ ಹೇಳಲಾಗಿದೆ. ಇಡೀ ನಾಟಕದ ಬೆಳವಣಿಗೆಯಲ್ಲಿ ಘಟನೆಗಳೇ ಮಹತ್ತರ ತಿರುವುಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತವೆ. ತುಘಲಕನ ಪತ್ರದಿಂದ ಉದ್ಭವವಾಗುವ ಯುದ್ಧ, ಯುದ್ಧದಲ್ಲಿ ವ್ಯಕ್ತವಾಗುವ ಕುಮಾರರಾಮನ ಶೌರ್ಯ, ರಾಮನ ಸೌಂದರ್ಯಕ್ಕೆ ಮೋಹಿತಳಾಗುವ ರತ್ನಾಜಿ, ರಾಮ ಬಯಸಿ ಆಡುವ ಬುತ್ತಿಯ ಚಂಡಿನಾಟ, ರತ್ನಾಜಿಯ ಕಾಮೋತ್ಕಟತೆ ಮತ್ತು ರಾಮನಿಂದ ತಿರಸ್ಕಾರಗೊಂಡ ನಂತರದ ಪ್ರತಿಕಾರ, ಕಂಪಿಲರಾಯನ ಅಂಧ ವ್ಯಾಮೋಹ, ಮಂತ್ರಿ ಬೈಚಪ್ಪನ ಚಾಣಾಕ್ಷತನ ಕುಮಾರರಾಮನ ದುರಂತ ಮರಣ ಹೀಗೆ ಘಟನೆಗಳ ಸರಣಿಯೇ ಈ ನಾಟಕವನ್ನು ಮುನ್ನಡೆಸುತ್ತದೆ. ಈ ಘಟನೆಗಳನ್ನು ನಾಟಕೀಯವಾಗಿ ಮಂಡಿಸುವಲ್ಲಿ ಚದುರಂಗರು ಕೆಲವು ಕಡೆಯಲ್ಲಿ ಬಹುದೊಡ್ಡ ಯಶಸ್ಸನ್ನು ಪಡೆದಿದ್ದಾರೆ. ಉದಾಹರಣೆಗೆ

ಕುಮಾರರಾಮ ರತ್ನಾಜಿಯ ಅರಮನೆಗೆ ಪ್ರವೇಶಿಸುವ ದೃಶ್ಯ ಎಂಟನ್ನೇ ನೋಡಬಹುದಾಗಿದೆ. ಈ ದೃಶ್ಯದಲ್ಲಿ ನಾಟಕಕಾರರು ಬಳಸಿಕೊಂಡಿರುವ ಮುಖಚರ್ಯದ ಕಲ್ಪನೆ ನಾಟಕದ ಚೌಕಟ್ಟಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ. ಅರಮನೆಯ ಹಜಾರ, ಶೃಂಗಾರೋದ್ಯಾನ, ಶಯನಗಾರ ಇವುಗಳ ವಿವರಗಳನ್ನು ಸಂಗಾಯಿಯು ವಿವರಣೆಯ ಮೂಲಕ ಪ್ರೇಕ್ಷಕರ ಮುಂದೆ ಹಿಡಿದಿಡುವಲ್ಲಿ ಹೆಚ್ಚು ಪರಿಣಾಮಕತೆ ಕಂಡುಬರುತ್ತದೆ. ನಾಟಕದ ಕಡೆಯಲ್ಲಿ ರತ್ನಾಜಿಯ ದುರಂತ ಮನಸ್ಥಿತಿಯನ್ನು ಚಿತ್ರಿಸುವ ಮೂಲಕವು ಇದೇ ರೀತಿಯ ಪರಿಣಾಮಕತೆಯನ್ನು ತರಲಾಗಿದೆ.

ಈ ನಾಟಕದಲ್ಲಿ ರತ್ನಾಜಿಯದೂ ಕೂಡ ರಾಮನಷ್ಟೆ ಪ್ರಮುಖವಾದ ಪಾತ್ರವಾಗಿದೆ. ಹಾಗೆ ನೋಡಿದರೆ ನಾಟಕದಲ್ಲಿ ಬೆಳೆಯುವ ಅತ್ಯಂತ ಸಶಕ್ತ ಪಾತ್ರ ಅದೊಂದೇ. ಮೊದಲು ಶೃಂಗಾರ ಮೋಹಿಯಾದ ಅಭಿಸಾರಿಕೆಯಂತೆ ಅನಂತರ ದುರಂತಗಳಿಗೆ ಕಾರಣಗಳಾದಳೆಂಬ ಮನೋಕ್ಲೇಶದಿಂದ ತೊಳಲಾಡುವ ಒಂಟಿ ಜೀವಿಯಾಗಿ ಆ ಪಾತ್ರವನ್ನು ಚದುರಂಗರು ಅತ್ಯಂತ ಮಾನವೀಯವಾಗಿ ಕಲ್ಪಿಸಿಕೊಂಡಿದ್ದಾರೆ. ತನ್ನ ಒಡತಿಗೆ ಸದಾ ನಿಷ್ಠಳಾಗಿರುವ ಸುಂಗಾಯಿ ಕಡೆಯಲ್ಲಿ ಕುಮಾರರಾಮನ ರುಂಡವನ್ನು ತಂದು ರತ್ನಾಜಿಯ ಮುಂದೆ ಹಾಜರುಪಡಿಸುತ್ತಾಳೆ. ಇದು ರತ್ನಾಜಿಗೆ ಅದು ತನ್ನ ಗೆಲುವಾಗಿ ಕಾಣುವುದಿಲ್ಲ. ಬದಲಿಗೆ ಕುಮ್ಮಟದುರ್ಗದ ಪತನ ಮತ್ತು ಮುಸ್ಲಿಂ ಯೋಧರ ವಿಜಯವಾಗಿ ಪರ್ಯಾವಸಾನವಾಗುತ್ತದೆ.

ಕುಮಾರರಾಮ ನಾಟಕವು ಮುಖ್ಯವಾಗಿ ಗಮನ ಸೆಳೆಯುವುದು ಘಟನೆಗಳನ್ನು ಮುಖಾಮುಖಿ ಯಾಗಿಸುತ್ತದೆ. ಈ ನಾಟಕ ಬರೆಯುವಲ್ಲಿ ಎರಡು ಪ್ರಧಾನ ಅಂಶಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದಂತೆ ಕಾಣುತ್ತದೆ. ಒಂದು ಘಟನೆಗಳನ್ನು ನಾಟಕೀಕರಣಗೊಳಿಸುವಲ್ಲಿ, ಎರಡು ಪಾತ್ರಗಳ ಪೋಷಣೆಯಲ್ಲಿ, ಬಹುಶಃ ಅದಕ್ಕೆಂದೇ ಘಟನಾ ಪ್ರಧಾನವಾದ ಈ ವಸ್ತುವನ್ನು ಅವರು ಆರಿಸಿ ಕೊಂಡಿದ್ದಾರೆ. ಅಲ್ಲದೇ ಈ ವಸ್ತುವನ್ನು ನಾಟಕಕ್ಕೆ ಆರಿಸಿಕೊಳ್ಳುವುದಕ್ಕೆ ಅವರಿಗಿದ್ದ ಇನ್ನೊಂದು ಪ್ರಧಾನ ಕಾರಣವೆಂದರೆ, ಅವರ ಪೂರ್ವಿಕ ಕವಿ ನಂಜುಂಡರು 'ರಾಮನಾಥ ಚರಿತೆ' ಎಂಬ ಕಾವ್ಯವನ್ನು ಬರೆದಿದ್ದಾರೆಂಬುದು ಇರಬಹುದು. ಇಲ್ಲಿ ವಸ್ತುವಿನ ನೆಲೆಯಿಂದ ಹೇಳುವಾಗ ನಾಟಕ ಕಾರರು ಯಾವುದೇ ರೀತಿಯ ಹೊಸ ಹೊಳವುಗಳನ್ನು ತರಲು ಹೋಗಿಲ್ಲ. ಈ ನಾಟಕದಲ್ಲಿ ಅಷ್ಟರ ಮಟ್ಟಿಗೆ ಅವರು ಇತಿಹಾಸಕ್ಕೆ ಮತ್ತು ನಂಜುಂಡ ಕವಿಯ ಕಾವ್ಯಕ್ಕೆ ನಿಷ್ಠರಾಗಿದ್ದಾರೆ. ಅವರ ಆಸಕ್ತಿ ಪ್ರಧಾನವಾಗಿ ಹರಿದಿರುವುದು ಹಿಂದೆ ಹೇಳಿದ ಹಾಗೆ ಘಟನೆಗಳ ದೃಶ್ಯ ಸಂಯೋಜನೆ ಮತ್ತು ಪಾತ್ರಗಳ ಕಲಾತ್ಮಕ ಪೋಷಣೆ ಈ ಎರಡು ಕ್ರಿಯೆಗಳಲ್ಲಿ ಅವರು ಹೆಚ್ಚಿನ ಯಶಸ್ಸನ್ನು ಪಡೆದಿದ್ದಾರೆ. ಬಹುಶಃ ನಾಟಕದ ಬಂಧದ ಕಡೆಗೆ ಹೆಚ್ಚು ಒತ್ತು ಬಿದ್ದಿರುವುದರಿಂದ ವಸ್ತುವಿನಲ್ಲಿ ಹೊಸದೇನನ್ನು ಹೇಳಲು ಸಾಧ್ಯವಾಗದೇ ಹೋಗಿರಬಹುದು. ಎಂತಿದ್ದರೂ ಕನ್ನಡದ ಐತಿಹಾಸಿಕ ನಾಟಕಗಳ ಸಾಲಿನಲ್ಲಿ ಈ ನಾಟಕ ಎದ್ದು ಕಾಣುವಂತಹ ಸ್ಥಾನದಲ್ಲಿದೆ.

೩.೬. ಗಂಡುಗಲಿ ಕುಮಾರರಾಮ

ವಾದಿರಾಜ ಕನಕಗಿರಿಯವರ 'ಗಂಡುಗಲಿ ಕುಮಾರರಾಮ' ಎಂಬ ಐತಿಹಾಸಿಕ ನಾಟಕ. ಇಲ್ಲಿ ಆನೆಗೊಂದಿ ಆಸ್ಥಾನವೆಂದು ನಾಟಕ ಪ್ರಾರಂಭವಾಗುತ್ತದೆ. ಒಟ್ಟು ೧೯ ಪಾತ್ರಗಳು ನಾಟಕದಲ್ಲಿ ತರುತ್ತಾರೆ ವಾದಿರಾಜರು. ಐತಿಹಾಸಿಕವಲ್ಲದಂತಹ ಕೆಲವು ಕಲ್ಪಿತ ಪಾತ್ರಗಳನ್ನು ಆಧುನೀಕರಿಸಿ ಹೆಸರಿಸುತ್ತಾರೆ. ಅಂತಹ ಪಾತ್ರಗಳೆಂದರೆ ಸೋಮನಾಥ, ಗುರುನಾಥ, ಗಿರಿಜಾ ಇಂತಹ ಪಾತ್ರಗಳು ಇನ್ನುಳಿದ ನಾಟಕಗಳಲ್ಲಿ ಕಂಡುಬರುವುದಿಲ್ಲ. ಒಟ್ಟು ಕಥಾವಸ್ತು ಎಲ್ಲಾ ನಾಟಕಗಳಲ್ಲಿ ಒಂದೇ ತೆರನಾಗಿ ಮೇಲುನೋಟಕ್ಕೆ ಕಂಡರೂ ಸಹ ಚರಿತ್ರೆಯನ್ನು ಭಿನ್ನವಾಗಿ ಗ್ರಹಿಸಬಹುದಾಗಿದೆ. ಏಕೆಂದರೆ ಒಂದು ನಾಟಕ ಹೊಸಮಲೆದುರ್ಗ ರಾಜ್ಯಧಾನಿ ಎಂದು ಚಿತ್ರಿಸಿದ್ದಾರೆ. ಚದುರಂಗರು ಕುಮ್ಮಟದುರ್ಗವೇ ಕಂಪಿಲನ ರಾಜ್ಯಧಾನಿ ಎಂದು ಚಿತ್ರಿಸಿರುತ್ತಾರೆ. ವಾದಿರಾಜ ಕನಕಗಿರಿಯವರು ಆನೆಗೊಂದಿ ರಾಜ್ಯಧಾನಿ ಎಂದು ನಾಟಕ ಕೃತಿಯಲ್ಲಿ ಬಿಂಬಿಸುತ್ತಾರೆ.

ವಾದಿರಾಜ ಕನಕಗಿರಿಯವರ ನಾಟಕವು ಉಳಿದವರಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಯಾವ ನಾಟಕಕಾರರು ಜಂಗಲ್, ಸೀನು, ರಸ್ತೆ ಸೀನು ಎಂಬಂತಹ ಪರಿಕಲ್ಪನೆಯನ್ನು ನಾಟಕದುದ್ದಕ್ಕೂ ಕಂಡುಬರುವುದಿಲ್ಲ. ಇದು ಸಮಗ್ರವಾಗಿ ೨೨ ದೃಶ್ಯಗಳನ್ನೊಳಗೊಂಡ ಕೃತಿಯಾಗಿರುತ್ತದೆ. ೧೨೦ ಪುಟಗಳಲ್ಲಿ ಬರೆದಿರುತ್ತಾರೆ. ನಾಟಕದ ಕೊನೆಯ ಭಾಗದಲ್ಲಿ 'ನೇಮಿಖಾನ್' ಹೇಳುತ್ತಾನೆ "ಇಂಥ ವೀರ ಪುತ್ರನನ್ನು ಪಡೆದ ನಿಮ್ಮ ನಾಡೇ ಧನ್ಯ. ಆ ವೀರನಿಗೆ ನಾನು ವಂದನೆ ಅರ್ಪಿಸುತ್ತೇನೆ. ಅಲ್ಲಾಹ್ ಈ ಶೂರನಿಗೆ ಶಾಂತಿ ಕೊಡಲಿ ಅಲ್ಲಾಹನ ರಾಜ್ಯದಲ್ಲಿ "ಅಲ್ಲಾ ಹೋ ಅಕ್ಬರ್".

ಒಟ್ಟಾರೆಯಾಗಿ ಕುಮಾರರಾಮನನ್ನು ವಸ್ತುವಾಗಿಸಿಕೊಂಡು ಹಲವು ಐತಿಹಾಸಿಕ ನಾಟಕಗಳು ರಚನೆಯಾಗಿವೆ. ಕೆಲವು ಪ್ರಕಟಗೊಂಡಿವೆ. ಇನ್ನೂ ಕೆಲವು ಅಪ್ರಕಟಿತ ಕೃತಿಗಳಾಗಿಯೇ ಉಳಿದುಕೊಂಡಿವೆ. ಪ್ರಸ್ತುತ ಅಧ್ಯಾಯದಲ್ಲಿ ಪ್ರಕಟಗೊಂಡ ಐದು ಕೃತಿಗಳನಷ್ಟೆ ಚರ್ಚಿಸಲಾಗಿದೆ. ಈ ಎಲ್ಲಾ ನಾಟಕ ಕೃತಿಗಳಿಗೆ ನಂಜುಂಡನ 'ರಾಮನಾಥ ಚರಿತೆ' ಮೂಲ ಪ್ರೇರಣೆ ನೀಡಿರುವುದು ಕಂಡುಬರುತ್ತದೆ. ಕಥಾವಸ್ತುವಿನಲ್ಲಿ ಯಾವ ನಾಟಕಕಾರರಲ್ಲಿಯು ಭಿನ್ನತೆ ಕಂಡುಬರುವುದಿಲ್ಲ. ಈ ನಾಟಕಗಳ ಮೂಲಕ ಚರಿತ್ರೆಯ ಎಳೆಗಳನ್ನು ಇಟ್ಟುಕೊಂಡು ಕುಮಾರರಾಮನನ್ನು ಓರ್ವ ಆದರ್ಶ ಐತಿಹಾಸಿಕ ಪುರುಷನಾಗಿ ಚಿತ್ರಿಸುವುದೇ ಬಹುಪಾಲು ನಾಟಕಾರರ ಮುಖ್ಯ ಉದ್ದೇಶವಾಗಿದೆ. ಇಲ್ಲಿ ಇವುಗಳು ಕುಮಾರರಾಮನನ್ನು ನಾಟಕದ ಕೇಂದ್ರ ಬಿಂದುವಾಗಿಸಿಕೊಂಡಿವೆ. ಈತನ ಮೂಲಕ ಕುಮ್ಮಟ ಸಾಮ್ರಾಜ್ಯದ ಸಮಗ್ರ ಚರಿತ್ರೆಯನ್ನು ಕಟ್ಟುವಲ್ಲಿ ಯಶಸ್ವಿಯಾಗಿವೆ. ಕುಮ್ಮಟದುರ್ಗ ಪರಿಸರದ ಲೇಖಕರು ರಚಿಸಿರುವ ಯಾವುದೇ ನಾಟಕ ಕೃತಿಗಳು ಲಭ್ಯವಾಗದೆ ಇರುವುದು ಗಮನಾರ್ಹ ಅಂಶವಾಗಿದೆ.

ಅಧ್ಯಾಯ-೪

ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಕುಮಾರರಾಮ

೪.೧. ಪ್ರವೇಶ

ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾವ್ಯ, ಭಾವಗೀತೆ, ಕಾದಂಬರಿ, ನಾಟಕ, ಸಣ್ಣಕತೆ, ಲಲಿತಪ್ರಬಂಧ ಹಾಗೂ ವಿಮರ್ಶೆ ಮುಖ್ಯವಾದವು. ಹತ್ತೊಂಬತ್ತನೇ ಶತಮಾನದ ಕೊನೆಯ ಅವಧಿಯಲ್ಲಿ ಆಧುನಿಕ ಸಾಹಿತ್ಯದ ಪ್ರಕಾರಗಳು ಉದಯಿಸಿದವು. ಅವುಗಳಲ್ಲಿ ಕಾದಂಬರಿ ಪ್ರಕಾರವು ಒಂದು. ಈ ಪ್ರಕಾರ ಉಗಮದ ಹಿನ್ನೆಲೆಯು ಮುಖ್ಯವಾಗಿ ಮನರಂಜನೆಯ ಉದ್ದೇಶವನ್ನು ಹೊಂದಿತ್ತು. ನೌಕರಿ ಚೌಕರಿಯಲ್ಲಿ ನಿರತವಾದ ಮಧ್ಯಮವರ್ಗದ ಓದುಗರಿಗಾಗಿ ಸೃಷ್ಟಿಯಾಗಿತ್ತು. ಹಾಗಾಗಿಯೇ ಕಾದಂಬರಿ ಕಥಾನಕಗಳು ಮನರಂಜನೆಯ ಅತ್ಯುತ್ತಮ ಮಾಧ್ಯಮವೆಂಬುದು ಮನವರಿಕೆಯಾಯಿತು. ಈ ಹಿನ್ನೆಲೆಯಲ್ಲಿ ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಕೆಲವು ಕಾದಂಬರಿಗಳು ಉದಯಿಸಿದವು. ಕಾದಂಬರಿ ಪ್ರಕಾರವು ಮೊದಲು ಕಾಣಿಸಿಕೊಂಡಿದ್ದು ಅನುವಾದಗಳ ಮುಖಾಂತರ; ನಂತರ ಕ್ರಮೇಣ ಸ್ವತಂತ್ರ ರಚನೆಗಳು ಕಾಣಿಸಿಕೊಂಡವು. ಒಂದು ಕಡೆ ಇಂಗ್ಲೀಷಿನಿಂದ ಅನುವಾದಗೊಂಡರೆ ಮತ್ತೊಂದು ಕಡೆ ರಮ್ಯ ಘಟನೆಗಳು, ಸ್ವಕಲ್ಪಿತ ಕಥಾನಕಗಳು ಐತಿಹಾಸಿಕ ಹಿನ್ನೆಲೆಯ ಘಟನೆಗಳಿರುವ ಕಾದಂಬರಿಗಳು ಕಾಣಿಸಿಕೊಡವು. ಬಿ. ವೆಂಕಟಾಚಾರ್ಯರು, ಗಳಗನಾಥರು, ಬಂಗಾಳಿಯಿಂದ, ಮರಾಠಿಯಿಂದ ಕಾದಂಬರಿಗಳನ್ನು ಅನುವಾದ ಮಾಡಿದರು. ಕನ್ನಡದಲ್ಲಿ ಕಾದಂಬರಿ ಪ್ರಚಾರಕ್ಕೆ ಬಂದದ್ದು ೧೮೯೫ರಲ್ಲಿ. ಸಾಮಾಜಿಕ ಕಾದಂಬರಿಗಳ ರಚನೆಗಿಂತ ಪೂರ್ವದಲ್ಲಿಯೇ ನಮ್ಮಲ್ಲಿ ಐತಿಹಾಸಿಕ ಕಾದಂಬರಿಗಳು ರಚನೆಯ ಪ್ರಯತ್ನ ನಡೆದಿತ್ತು. ಕೆಂಪುನಾರಾಯಣನ ಮುದ್ರಾಮಂಜೂಷವೇ ಇದಕ್ಕೆ ಸೂಕ್ತ ಉದಾಹರಣೆ ಎನಿಸುತ್ತದೆ. ಲಕ್ಷ್ಮಣರಾವ್ ಗದಗಕರ ಅವರು ತಮ್ಮ 'ಸೂರ್ಯಕಾಂತ' ಎಂಬ ಕೃತಿಗೆ 'ಕನ್ನಡ ಹೊಸ ಕಾದಂಬರಿ' ಎಂಬ ಪರ್ಯಾಯ ಹೆಸರನ್ನು ಕೊಟ್ಟುಕೊಂಡಿದ್ದಾರೆ. ಕಾಲದ ಅಗತ್ಯಕ್ಕೆ ತಕ್ಕಂತೆ ರೂಪುಗೊಂಡ ಕಾದಂಬರಿ ಪ್ರಕಾರ ಅತ್ಯಂತ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಪ್ರಮುಖವಾಗಿ ಬೆಳೆದು ಬಂದಿರುವ ಈ ಪ್ರಕಾರಕ್ಕೆ ಅದರದ್ದೇ ಆದ ಇತಿಹಾಸವಿದೆ.

ಇಂಗ್ಲೀಷಿನ 'ನಾವೆಲ್' ಎಂಬ ಪದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ 'ಕಾದಂಬರಿ ಎಂದು ಕರೆಯಲಾಗಿದೆ. ಕನ್ನಡದಲ್ಲಿ ಕಲ್ಪಿತ ಕತೆಗೆ 'ಕಾದಂಬರಿ' ಎಂದು ಪ್ರಪ್ರಥಮ ಬಾರಿಗೆ ಕರೆದವರೆಂದರೆ ಲಕ್ಷ್ಮಣ ಭೀಮರಾವ್ ಗದಗಕರ. ಅವರು ಕ್ರಿ.ಶ. ೧೮೯೨ರಲ್ಲಿ ರಚಿಸಿದ 'ಸೂರ್ಯಕಾಂತ' ಕೃತಿಗೆ

'ಕನ್ನಡ ಹೊಸ ಕಾದಂಬರಿ' ಎಂದು ಕರೆದುಕೊಂಡಿದ್ದಾರೆ. ಭಾರತೀಯ ಚಾರಿತ್ರಿಕ ಕಾದಂಬರಿಕಾರರು ಭಾರತೀಯರ ರಾಷ್ಟ್ರಭಾವನೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯವನ್ನು ಮಾಡಿದರು. ಬಂಕೀಮಚಂದ್ರ ಚಟ್ಟೋಪಾಧ್ಯಾಯರು, ಹರಿನಾರಾಯಣ ಅಟ್ಟೆ, ಬಿ. ವೆಂಕಟಾಚಾರ್ಯರು, ಕೆರೂರು ವಾಸುದೇವಾಚಾರ್ಯರು, ಗಳಗನಾಥರು ಇವರು ಭಾರತದ ಗತವೈಭವವನ್ನು ಚಿತ್ರಿಸಲು ಕಾದಂಬರಿಗಳನ್ನು ಉದ್ದೇಶಪೂರ್ವಕವಾಗಿಯೇ ಉಪಯೋಗಿಸಿದರು. ಇವರು ಸ್ಥಳೀಯ ಘಟನಾವಳಿಗಳನ್ನು ಕಾದಂಬರಿಯಾಗಿಸಿದರು.

ಇವರ ಕಾದಂಬರಿಗಳಲ್ಲಿ ಪಾತ್ರಗಳ ಸಂಭಾಷಣೆ, ಶೈಲಿ, ಜೀವನದ ಬಗೆಗೆ ನಿಶ್ಚಿತ ದೃಷ್ಟಿ ಹಾಗೂ ಬದುಕಿನ ಸಮಸ್ಯೆಗಳು ಇತ್ಯಾದಿ ಸಂಗತಿಗಳು ನಿರೂಪಿತವಾಗಿವೆ. ಹಾಗಾಗಿ ಚರಿತ್ರೆಯ ಅಂಶ ಗಳನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮ ಕಾದಂಬರಿಯಾಗಿದೆ. ಹೀಗೆ ರಚಿತವಾದ ಕಾದಂಬರಿಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳ ಕೃತಿಗಳು ಮುಖ್ಯವಾಗಿವೆ. ಓದುಗರ ಮನಮುಟ್ಟುವಂತೆ ನಿರೂಪಿಸಬಹು ದೆಂಬುದನ್ನು ಕಾದಂಬರಿ ಪ್ರಕಾರವು ತೋರಿಸಿಕೊಟ್ಟಿತು. ಒಂದು ಕಡೆ ಇಂಗ್ಲೀಷಿನಿಂದ ಮತ್ತೊಂದು ಕಡೆ ರಮ್ಯಲೋಕದ ಸ್ವಕಲ್ಪಿತ ಕಥೆಗಳು ಹಾಗೆಯೇ ಐತಿಹಾಸಿಕ ಹಿನ್ನೆಲೆಯಲ್ಲಿ ವರ್ತಮಾನದ ಘಟನೆಗಳನ್ನು ಚಿತ್ರಿಸುವ ಕಾದಂಬರಿಗಳು ಕಾಣಿಸಿಕೊಂಡವು.

ಹೀಗೆ ಐತಿಹಾಸಿಕ ಘಟನೆಗಳನ್ನು ಕಾದಂಬರಿ ವಸ್ತುವನ್ನಾಗಿ ಚಿತ್ರಿಸಿರುವುದನ್ನು ಗುರುತಿಸಬಹುದು. ಗಳಗನಾಥರ 'ಮಾಧವ ಕರುಣಾ ವಿಲಾಸ'ವು ವಿಜಯನಗರ ಗತಇತಿಹಾಸವನ್ನು ಒಳಗೊಂಡಿದ್ದು, ಆ ಕ್ಷೇತ್ರದ ತೇಜಸ್ಸನ್ನು, ದೇಶಾಭಿಮಾನವನ್ನು ವ್ಯಕ್ತಪಡಿಸುವ ಸ್ವತಂತ್ರ ಕೃತಿಯಾಗಿದೆ. ತ.ರಾ.ಸು ಅವರ 'ದುರ್ಗಾಸ್ತಮಾನ', ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಚೆನ್ನಬಸವ ನಾಯಕ', 'ಚಿಕ್ಕವೀರ ರಾಜೇಂದ್ರ' ಮುಂತಾದ ಕೃತಿಗಳು ಅಯಾ ಪ್ರದೇಶದ ರಾಜವಂಶಗಳ ಉನ್ನತಿ-ಅವನತಿಗಳ ಕಥೆಗಳನ್ನು ನಿರೂಪಿಸುತ್ತವೆ. ಆ ಮೂಲಕ ಕನ್ನಡ ನಾಡಿನ ಚರಿತ್ರೆಯನ್ನು ಕಟ್ಟಿಕೊಡುತ್ತವೆ.

ಈ ಹಿನ್ನೆಲೆಯೊಂದಿಗೆ ಮಧ್ಯಕಾಲೀನ ಕರ್ನಾಟಕದ ಐತಿಹಾಸಿಕ ವ್ಯಕ್ತಿಯಾದ ಕುಮಾರರಾಮನ ಕುರಿತು ರಚಿತವಾದ ಕೆಲವು ಕಾದಂಬರಿಗಳನ್ನು ನಾವು ಅವಲೋಕಿಸಬಹುದಾಗಿದೆ. ಕೊರಟಿ ಶ್ರೀನಿವಾಸರಾವ್ ಅವರು ಬರೆದ 'ಕನ್ನಡಿಗರ ಕಾಳರಾತ್ರಿ' ಮತ್ತು 'ಕುಮಾರರಾಮ' ಹಾಗು ರುದ್ರಮೂರ್ತಿ ಶಾಸ್ತ್ರಿಗಳು ಬರೆದ 'ಕುಮಾರರಾಮ' ಎಂಬ ಮೂರು ಕಾದಂಬರಿಗಳು ಇಲ್ಲಿ ಗಮನಾರ್ಹವೆನಿಸುತ್ತವೆ. ವಿಜಯನಗರ ಇತಿಹಾಸ ಮಾಲೆಯ ಅಡಿಯಲ್ಲಿ ಪ್ರಕಟವಾದ 'ಕನ್ನಡಿಗರ ಕಾಳರಾತ್ರಿ' ಮತ್ತು 'ಕುಮಾರರಾಮ' ಎಂಬೆರಡು ಕೃತಿಗಳನ್ನು ಐತಿಹಾಸಿಕ ಕಥೆಗಳೆಂದು ಕರೆಯಲಾಗದಿದ್ದರೂ ಸ್ವರೂಪದ ದೃಷ್ಟಿಯಿಂದ ಅವು ಕಾದಂಬರಿಗಳೆಂದು ಪರಿಗಣಿಸಲು ಯೋಗ್ಯವಾಗಿವೆ.

೪.೨. ಕನ್ನಡಿಗರ ಕಾಳರಾತ್ರಿ

ಕೊರಟಿ ಶ್ರೀನಿವಾಸರಾವ್ ಅವರ 'ಕನ್ನಡಿಗರ ಕಾಳರಾತ್ರಿ' ಎಂಬ ಕಾದಂಬರಿಯ ವಿಜಯನಗರ ಪೂರ್ವದ ಕುಮ್ಮಟದುರ್ಗದ ಇತಿಹಾಸವನ್ನು ಒಳಗೊಂಡಿದೆ. ಶತ್ರುರಾಜರ ಆಕ್ರಮಣವು ಕನ್ನಡ ಅರಸರಾದ ಕುಮ್ಮಟದ ನಾಯಕರ ಪಾಲಿಗೆ ಹೇಗೆ ಕಾಳರಾತ್ರಿಯಾಗಿ ಪರಿಣಮಿಸಿತು ಎಂಬುದನ್ನು ಈ ಕೃತಿಯು ಮನೋಜ್ಞವಾಗಿ ಚಿತ್ರಿಸುತ್ತದೆ. ಮುಮ್ಮಡಿ ಸಿಂಗನಾಯಕರು ರಾಜ್ಯವನ್ನು ಕಟ್ಟಲು ಅನುಸರಿಸಿದ ಅಂಶಗಳನ್ನು ವಿವರಿಸುವುದರೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ.

ಭಾಗ ಒಂದರಲ್ಲಿ ಪದೇ ಪದೇ ನಡೆದ ಯುದ್ಧಗಳಿಗೆ ಸಂಬಂಧಿಸಿದ ಹಿನ್ನೆಲೆಯಲ್ಲಿ ಮುಮ್ಮಡಿ ಸಿಂಗನಾಯಕನ ಸಾವು ಸಂಭವಿಸುವ ಅಂಶವು ಬಿಂಬಿತವಾಗಿದೆ. ನಾಯಕನು ಮಲ್ಲದೇವರಸನ ಸಾಮಂತನಾಗಿದ್ದ ಅಂಶವನ್ನು ಗೊತ್ತುಪಡಿಸುತ್ತದೆ. ಯುದ್ಧದಲ್ಲಿ ವೀರಮರಣವನ್ನು ಅಪ್ಪಿದ ಸಿಂಗನಾಯಕ ನಿಗೆ ಮಗನಾದ ಕಂಪಿಲರಾಯ ಅಂತ್ಯಕ್ರಿಯೆ ನೆರವೇರಿಸುತ್ತಾನೆ. ಮಂತ್ರಿ ಬೈಚಪ್ಪನ ಸಮ್ಮುಖದಲ್ಲಿ ಕಂಪಿಲರಾಯನಿಗೆ ಪಟ್ಟಾಭಿಷೇಕವಾಗುತ್ತದೆ.

ಭಾಗ ಎರಡರಲ್ಲಿ ಮುಮ್ಮಡಿ ಸಿಂಗನಾಯಕನ ಸಾವಿಗೆ ಆತನ ಪರಿವಾರದವರು ಶೋಕವನ್ನು ವ್ಯಕ್ತಪಡಿಸುವ ಸನ್ನಿವೇಶವಿದೆ. ಅದೇ ರೀತಿ ಯುದ್ಧ ಸಂಭವಿಸುವ ಪ್ರಸಂಗವು ಚಿತ್ರಿತವಾಗಿದೆ. ಕಂಪಿಲ ರಾಯನ ಮದುವೆಯ ಬಗ್ಗೆ ಅವನ ತಾಯಿಯ ಅಂತಃಕರಣದ ಹಿತನುಡಿಗಳು ಇಲ್ಲಿ ಬಿಂಬಿತವಾಗಿವೆ. ಕಂಪಿಲನು ಮದುವೆಯನ್ನು ನಿರಾಕರಿಸುವ ಪರಿ ಹಾಗೂ ತಾಯಿ ಮದುವೆಯ ಸಾಧಕ ಬಾಧಕಗಳನ್ನು ಸಮರ್ಥಿಸುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಕಂಪಿಲರಾಯನಿಗೆ ಕೌಟುಂಬಿಕತೆಯ ಜೊತೆ ಮದುವೆ ಸನ್ನಿವೇಶ, ಆಕೆಯ ಮಗನಾದ ಕಾಟಣ್ಣನ ಪರಿಚಯವು ಇಲ್ಲಿರುತ್ತದೆ. ಕಾಟನಾಯಕನು ಸ್ವಂತ ಮಗನಾಗಿರದೆ ಅರಣ್ಯದಲ್ಲಿ ದೊರೆತ ಮಗುವಾಗಿರುತ್ತಾನೆ. ಕಾಟಣ್ಣನ ಜನನದ ರೋಮಾಂಚನಕಾರಿ ಸನ್ನಿವೇಶ ಪ್ರಸ್ತುತ ಭಾಗದಲ್ಲಿ ನಿರೂಪಿತವಾಗಿದೆ. ಕುಮಾರರಾಮನ ಬಾಲ್ಯಜೀವನದ ಕ್ಷಣಗಳನ್ನು ಬಿಂಬಿಸಲಾಗಿದೆ.

ಕಾದಂಬರಿಯ ಮೂರನೆಯ ಭಾಗದಲ್ಲಿ ಮುಮ್ಮಡಿ ಸಿಂಗನಾಯಕನ ಮರಣದ ಪರಿಣಾಮವಾಗಿ ಕಂಪಿಲರಾಯ ಮತ್ತು ಕುಮಾರರಾಮ ಅರಮನೆಯನ್ನು ತೊರೆಯಬೇಕೆಂದು ಪುರೋಹಿತರು ಸಲಹೆ ನೀಡುವ ಸನ್ನಿವೇಶವಿದೆ. ಕಂಪಿಲರಾಯನ ಪಟ್ಟಾಭಿಷೇಕ, ಆತನ ತಾಯಿ ಮಂಚಲಾದೇವಿಯು ಸಾಮ್ರಾಜ್ಯದ ಬಗ್ಗೆ ಇರಿಸಿಕೊಂಡಿರುವ ಕಳಕಳಿ, ರಾಜ್ಯಕ್ಕೆ ಆಗಾಗ ಒದಗಿಬರುತ್ತಿದ್ದ ವಿಪತ್ತುಗಳು, ರಾಜಧಾನಿಯ ಸ್ಥಳಾಂತರದ ಪ್ರಸ್ತಾಪ, ಕಂಪಿಲ ರತ್ನಾಜಿಯರ ವಿವಾಹ, ಹೊಸ ಅರಮನೆಯ ನಿರ್ಮಾಣ ಇತ್ಯಾದಿ ಸನ್ನಿವೇಶಗಳ ಚಿತ್ರಣವನ್ನು ಇದೇ ಭಾಗದಲ್ಲಿ ಕೊಡಲಾಗಿದೆ. ಕಾದಂಬರಿ ಮುಂದಿನ ಭಾಗಗಳಲ್ಲಿ ವಿರೋಧಿ ರಾಜರ ಆಕ್ರಮಣದ ಫಲವಾಗಿ ಕನ್ನಡಿಗರನ್ನು ಕಾಳರಾತ್ರಿಯು

ಆವರಿಸಿಕೊಳ್ಳುತ್ತದೆ. ಕೊನೆಯಲ್ಲಿ ಕುಮಾರರಾಮನ ಧೈರ್ಯೋತ್ಸಾಹ, ವಿವೇಕ, ಪರಾಕ್ರಮಗಳಿಂದಾಗಿ ಕನ್ನಡಿಗರನ್ನು ಆವರಿಸಿಕೊಂಡಿದ್ದ ಆ ಕಾಳರಾತ್ರಿಯು ಆರಿತೆಂಬ ಸೂಚನೆಯೊಂದಿಗೆ ಕಾದಂಬರಿಯು ಮುಕ್ತಾಯವಾಗುತ್ತದೆ.

೪.೩. ಕುಮಾರರಾಮು

ಇದೇ ಲೇಖಕರ 'ಕುಮಾರರಾಮ' ಎಂಬ ಇನ್ನೊಂದು ಕಾದಂಬರಿಯು ವಿಜಯನಗರ ಪೂರ್ವದ ಚರಿತ್ರೆಗೆ ಪೂರಕವಾದ ಅಂಶಗಳನ್ನು ಒಳಗೊಂಡಿದೆ. ಹೆಸರೇ ಸೂಚಿಸುವಂತೆ ಇದು ಕಮ್ಮಟದ ನಾಯಕರ ಮನೆತನದ ಕುಮಾರರಾಮನನ್ನು ಕೇಂದ್ರವಾಗಿರಿಸಿಕೊಂಡು ರಚಿತವಾಗಿದೆ. "ಹುಜೂರ್ ನಾನು ಚಕ್ರವರ್ತಿಯ ಮಗಳಿರಬಹುದು. ಆದರೆ ಷಹಜಾದೆಯನ್ನು ವರಿಸಲು ಆ ರಾಜಪುತ್ರನು ಎಲ್ಲಾ ರೀತಿಯಲ್ಲೂ ಯೋಗ್ಯನಾಗಿದ್ದಾನೆ, ಅವನು ಸಾಮಾನ್ಯ ಪುಂಡು ಪಾಳೆಗಾರನಲ್ಲ. ಹಿಂದೂ ಸಾಮ್ರಾಟರನ್ನು ಬಗ್ಗು ಬಡಿದ ಧೀಮಂತ ದೊರೆ. ದಿಲ್ಲಿ ಬಾದಷಹರನನ್ನು ಲೆಕ್ಕಿಸದೇ ಇರುವ ಸಿಂಹದ ಮರಿ ಅವನು. ಆ ಧೀರನಿಗೆ ಪುರುಷಸಿಂಹನಿಗೆ ಮಾಲೆ ಹಾಕುವ ಅರ್ಹತೆ ನನಗೆ ಇದೆಯೇ? ಅವನನ್ನು ಪತಿಯಾಗಿ ಪಡೆಯುವ ಪುಣ್ಯ ನನಗೆ ಈ ಜನ್ಮದಲ್ಲಿ ಇದೆಯೇ (ಕೊರಟಿ ಶ್ರೀನಿವಾಸರಾವ್; ೨೦೦೬; ಪು. ೧೪) ಎಂಬ ಮಾತುಗಳಲ್ಲಿ ಬಾಬಮಿಯು ಕುಮಾರರಾಮನನ್ನು ಮದುವೆಯಾಗಲು ಇಚ್ಚಿಸುವ ಸನ್ನಿವೇಶದ ಚಿತ್ರಣವಿದೆ. ಬಾಬಮಿಯು ಬಾದಷಹನ ಮಗಳಾದರೂ ಕುಮಾರರಾಮನಿಗೆ ಮನಸೋತು ಅವನನ್ನು ವಿವಾಹವಾಗಲು ಇಚ್ಛಿಸುತ್ತಾಳೆ. ಆಗ ತಂದೆಯಾದ ತೊಘಲಕನು ಮಗಳಿಗೆ ಬುದ್ಧಿ ಹೇಳುತ್ತಾನೆ. ಅವನೊಬ್ಬ ಪುಂಡ ಅಂತಹ ವ್ಯಕ್ತಿಗೆ ನೀನು ಮನಸೋಲುವುದೇ ಎಂದು ಕೇಳುತ್ತಾನೆ. ಆಗ ಬಾಬಮಿ ಅವನ ಸಾಮರ್ಥ್ಯವನ್ನು ಹೇಳುತ್ತಾಳೆ. ಅವನ ಪೌರುಷವನ್ನು, ದಿಲ್ಲಿಯ ದೊರೆಗಳನ್ನು ಲೆಕ್ಕಿಸದೆ ಇರುವಂತ ಸಿಂದಹ ಮರಿ ಅಂತವನನ್ನು ನಾನು ಪತಿಯಾಗಿ ಪಡೆಯಲು ಯೋಗ್ಯಳೇ ಎಂದು ನುಡಿಯುತ್ತಾಳೆ.

ಇಲ್ಲಿ ಕಾದಂಬರಿ ಭಾಗವಾಗಿ ಬರುವ ಬಾಬಮಿ ಮತ್ತು ಬಾದಷಹರ ನಡುವಿನ ಮಾತಿನ ಶೈಲಿ ಈ ರೀತಿಯಲ್ಲಿದ್ದೆ "ನಾನು ದುಡುಕಿದ್ದರೆ ಅದಕ್ಕೆ ಶಿಕ್ಷೆಯನ್ನು ಅನುಭವಿಸಲು ಸಿದ್ಧಳಾಗಿದ್ದೇನೆ ದಾದಾಜಿ. ನಾನು ಆ ರಾಜಪುತ್ರನನ್ನು ಪ್ರೇಮಿಸಿ ತಪ್ಪು ಮಾಡಿರಬಹುದು. ಆದರೆ ನನಗೆ ಆ ರಾಮನಾಥನ ಗುಣಗಾನವನ್ನು ನಿಮ್ಮ ಬಾಯಿಂದ ಕೇಳಿದಂಗಾಯಿತು. ಅವನಿಗೆ ಈ ಹೃದಯವು ಮಾರುಹೋಗಿದೆ. ಅವನನ್ನು ಒಮ್ಮೆಯೂ ನೋಡದಿದ್ದರೂ, ಅವನನ್ನೇ ಹೃದಯೇಶ್ವರನೆಂದು ಸ್ವೀಕರಿಸಿದೆ" (ಅದೇ; ಪು. ೧೬). ಈ ಮಾತುಗಳಿಂದ ಬಾಬಮಿಯು ಕುಮಾರರಾಮನ ಮೇಲೆ ಇರಿಸಿದ್ದ ಪ್ರೀತಿಯ ಘನತೆಯು ವ್ಯಕ್ತವಾಗುತ್ತದೆ. ಮಹಾಭಾರತದಲ್ಲಿ ದ್ರೌಪದಿಗೆ ಐವರು ಗಂಡಂದಿರಾದರೆ ಕುಮಾರರಾಮನಿಗೆ ಐವರು ಮಡದಿಯರಿದ್ದರು ಎಂಬ ಉಲ್ಲೇಖವಿದೆ. ಇತಿಹಾಸದಲ್ಲಿರುವಂತೆ

ಕಾದಂಬರಿಯಲ್ಲಿಯೂ ಉತ್ತರದ ದೆಹಲಿಯ ಮುಸಲ್ಮಾನ ದೊರೆಗಳಿಗೂ ಸ್ಥಳೀಯ ಹಿಂದೂ ದೊರೆಗಳಿಗೂ ನಡುವೆ ಯುದ್ಧ ಸಂಭವಿಸುತ್ತದೆ. ಆದರೆ ಕಾದಂಬರಿಯು ಅದನ್ನು ಧಾರ್ಮಿಕ ಸಂಘರ್ಷವೆಂದು ನಿರೂಪಿಸಿಲ್ಲ. ಬದಲಾಗಿ ಕಾದಂಬರಿಯಲ್ಲಿ ಬರುವ ತುಘಲಕನ ಸಾಕುಮಗಳು ಬಾಬಮಿಯ ಸನ್ನಿವೇಶವು ಧರ್ಮಸಮನ್ವಯದ ಕುರುಹಾಗಿ ಗಮನ ಸೆಳೆಯುತ್ತದೆ. ಕಾದಂಬರಿಯಲ್ಲಿ ಮತಧರ್ಮಗಳೊಳಗಿನ ನೇರ ಸಂಘರ್ಷಗಳಿಲ್ಲದಿದ್ದರೂ ಮಾತಂಗಿ ತುಘಲಕ್ ನಡುವೆ ನಡೆಯುವ ಸಂಭಾಷಣೆಯ ಸನ್ನಿವೇಶವು ಮತಧರ್ಮಗಳ ಕುರಿತಾದ ಚರ್ಚೆಯ ಸ್ವರೂಪವನ್ನು ಪಡೆದುಕೊಂಡಿದೆ. ಮಾತಂಗಿಯು ತನಗೆ ಎಲ್ಲಾ ಮತಧರ್ಮಗಳ ಬಗೆಗೂ ಸಮಾನ ಗೌರವವಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ. ಆಗ ತುಘಲಕ್‌ನು "ಅಲ್ಲಾನಲ್ಲಿ ನಿನಗೆ ಇಷ್ಟೊಂದು ಭಕ್ತಿ ಇದ್ದರೆ, ನೀನೇಕೆ ನಮ್ಮ ಧರ್ಮಕ್ಕೆ ಸೇರಬಾರದು" (ಅದೇ; ಪು. ೩೧) ಎಂದು ಹೇಳುತ್ತಾನೆ. ಅದಕ್ಕೆ ಮಾತಂಗಿಯು ಈ ರೀತಿ ಪ್ರತಿಕ್ರಿಯಿಸುತ್ತಾಳೆ. ಆಗ ತುಘಲಕನ ಸೇನಾ ನಾಯಕಿಯಾದ ಮಾತಂಗಿಯ ಪಾತ್ರವು ಕಾದಂಬರಿಯಲ್ಲಿ ವಿಶಿಷ್ಟವಾಗಿ ಚಿತ್ರಿಸಲಾಗಿದೆ. "ಸೇರಬಹುದಾಗಿತ್ತು. ಆದರೆ ಹಿಂದೂ ಧರ್ಮವನ್ನು ತಿರಸ್ಕರಿಸಿ, ಇಸ್ಲಂ ದೀಕ್ಷೆ ಸ್ವೀಕರಿಸುವಷ್ಟು ನನಗೆ ಇನ್ನೂ ಧರ್ಮ ಶ್ರದ್ಧೆ ಬೆಳೆದಿಲ್ಲ ಹುಜೂರ್" ಎಂದು ಅರ್ಥಗರ್ಭಿತವಾಗಿ ನಕ್ಕಳು (ಅದೇ). ಆಗ ತುಘಲಕನು "ಹಾಗಾದರೆ ನೀನು ಸ್ವಇಚ್ಛೆಯಿಂದ ಇಸ್ಲಾಂ ಧರ್ಮಕ್ಕೆ ಸೇರುವವರಿಗೆ ನಾನು ನಿನ್ನನ್ನು ಹಿಂದೂವಾಗಿಯೇ ಗೌರವಿಸಬೇಕೆ? (ಅದೇ) ಎಂಬ ಮಾತನ್ನು ಕೇಳುತ್ತಾನೆ. ಅದಕ್ಕೆ ಮಾತಂಗಿಯು "ಹಾಗೆಂದು ತಾವು ನಮ್ಮ ತಂದೆಗೆ ಸಾಯುವ ಘಳಿಗೆಯಲ್ಲಿ ವಚನ ಕೊಟ್ಟಿರುವುದನ್ನು ಮರೆಯಬಾರದು" (ಅದೇ) ಎಂದು ಉತ್ತರಿಸುತ್ತಾಳೆ. ಹದಿನೈದು ವರ್ಷಗಳ ಹಿಂದಿನ ಮಾತು ನಾಟನಾಯಕನ ಮೇಲೆ ತುಘಲಕ್‌ನು ಯುದ್ಧಕ್ಕೆ ಬಂದಾಗ ಆ ವೀರನು ಜೀವನ ಹಂಗು ತೊರೆದು ಸ್ವಾತಂತ್ರ್ಯಕ್ಕಾಗಿ ಹೋರಾಡಿ ರಣರಂಗದಲ್ಲಿ ಮಡಿದಿದ್ದನು. ವೀರ ಪಕ್ಷಪಾತಿಯಾಗಿದ್ದ ತುಘಲಕನು ಕಾಟನಾಯಕನ ಬಲಿದಾನ ಸ್ವಾತಂತ್ರ್ಯಾಭಿಮಾನವನ್ನು ಕಂಡು ಮಾರು ಹೋಗಿದ್ದನು. ಆ ವೀರನ ಅಂತಿಮ ಇಚ್ಛೆ ಏನಿದ್ದರೂ, ಅದನ್ನು ನೇರವೇರಿಸಲು ತಾನಾಗಿ ಮುಂದೆ ಬಂದಿದ್ದನು. ಕಾಟನಾಯಕನು ತನ್ನ ಮಗಳು ಐದು ವರ್ಷದ ತಾಯಿ ಇಲ್ಲದ ತಬ್ಬಲಿ ಮಾತಂಗಿಯನ್ನು ನಿಬಂಧದಲ್ಲಿ ಯಾವುದಾದರೂ ಒಂದನ್ನು 'ತುಘಲಕ್' ಬಳಸಿ ತೂಘಲಖನ ಉಡಿಗೆ ಹಾಕಿ ಮಾತನಾಡಿದ ಸನ್ನಿವೇಶವು ಇಲ್ಲಿ ನೆನಪಾಗುತ್ತದೆ. ಹಿಂದೂ ಆಗಿ ಹುಟ್ಟಿ ಮುಸಲ್ಮಾನ ಳಾಗಿ ಬೆಳೆದ ಹೆಣ್ಣು ಮಗಳೊಬ್ಬಳ 'ಧರ್ಮಸಂಕಟ'ದ ಪರಿಸ್ಥಿತಿಯನ್ನು ಇಲ್ಲಿ ಮಾತಂಗಿ ಪಾತ್ರವು ತೆರೆದು ತೋರಿಸುತ್ತದೆ.

ಕಾದಂಬರಿಯ ಕೊನೆಯ ಭಾಗದಲ್ಲಿ ಕೊರವಂಜಿಯ ಪಾತ್ರ ಚಿತ್ರಣವಿದೆ. ಹೀಗೆ ರತ್ನಾಜಿ, ಸಂಗವ್ವ ಇಬ್ಬರೂ ಕೊರವಂಜಿಯ ಕುರಿತಾದ ಮಾತುಗಳು "ಕೊರವಂಜಿಯನ್ನು ಸಂಗವ್ವನ ಬಾಯಿಂದ

ಕೇಳಿದ ಮೇಲೆ ರತ್ನಾಜಿಗೆ ಸಹಜವಾಗಿಯೇ ಅವಳ ವಿಷಯದಲ್ಲಿ ಗೌರವವುಂಟಾಯಿತು. ಅವಳು ಕೊರವಂಜಿಯೆಂದು ತನ್ನ ರಾಮನಾಥನನ್ನು ಹೇಗಾದರೂ ಮಾಡಿ ಒಲಿಸಿಕೊಳ್ಳಬೇಕೆಂದು ಯೋಚಿಸಿ ಅವಳನ್ನು ಅಂತಃಪುರಕ್ಕೆ ಕರೆಸಿಕೊಂಡಳು (ಅದೇ; ಪು. ೪೩) ಎಂದು ಚಿತ್ರಿಸಲಾಗಿದೆ. ಕಾದಂಬರಿಯು ಹಂತ ಹಂತವಾಗಿ ಚರಿತ್ರೆಯ ಎಳೆಗಳನ್ನು ಪರಿಚಯಿಸುತ್ತಾ ಬೆಳೆದು ನಿಂತಿದೆ. ಕಾದಂಬರಿಯು ಹತ್ತೊಂಬತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿರುತ್ತದೆ. ಕುಮಾರರಾಮನು ಯುದ್ಧದಲ್ಲಿ ಮೋಸದಿಂದ ಸಾಯುವ ಸನ್ನಿವೇಶ, ಮಾತಂಗಿಯ ಮರಣ, ಬಾಬಮಿಯ ಮನಸ್ಸಿನ ಅಸ್ಥಿರತೆ ಇತ್ಯಾದಿಗಳು ಕೊನೆಯ ಭಾಗದಲ್ಲಿ ಮನ ಮುಟ್ಟುವಂತೆ ನಿರೂಪಿತವಾಗಿವೆ.

೪.೪. ಕುಮಾರರಾಮ

ರುದ್ರಮೂರ್ತಿ ಶಾಸ್ತ್ರಿಯವರು 'ಕುಮಾರರಾಮ' ಎಂಬ ಐತಿಹಾಸಿಕ ವಸ್ತುವನ್ನುಳ್ಳ ಕಾದಂಬರಿಯನ್ನು ಬರೆದಿದ್ದಾರೆ. ಕುಮಾರರಾಮನ ಬಗ್ಗೆ ಇರುವ ಜನಪದ ಹಾಗೂ ಶಿಷ್ಟಸಾಹಿತ್ಯದ ನೆರವಿನಿಂದ ಈ ಕೃತಿಯನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ಮೂಲದಲ್ಲಿದ್ದ ಕೆಲವು ಪಾತ್ರಗಳನ್ನು ವಿಸ್ತರಿಸಿಕೊಂಡು ಕೆಲವು ಹೊಸ ಪಾತ್ರಗಳನ್ನು ಸೃಷ್ಟಿಸಿಕೊಂಡು ರುದ್ರಮೂರ್ತಿ ಶಾಸ್ತ್ರಿಯವರು ರಚಿಸಿದ್ದಾರೆ. ನೇರ ನಿರೂಪಣೆಯ ವಿಧಾನವನ್ನು ಅನುಸರಿಸಲಾಗಿದೆ. ಕಾದಂಬರಿಯ ಬಹುತೇಕ ಪಾತ್ರಗಳು ಹಿಂದೂ ಧರ್ಮದ ಪ್ರತಿಪಾದಕ ಪಾತ್ರಗಳಾಗಿವೆ. ಮಾತಂಗಿ ಮತ್ತು ಖಾನನ ಮಾತುಗಳಲ್ಲಿ 'ಹಿಂದೂವ', 'ಹಿಂದೂವರ' ಎಂಬ ಮಾತುಗಳು ಪ್ರಸ್ತಾಪವಾಗುತ್ತದೆ. 'ಹಿಂದುವ ರಾಮ ಹೊಕ್ಕಲಿಕ್ಕಿದ ನಮ್ಮ ಬಲವ' ಎಂದು ಮಾತಂಗಿ ಹೇಳುತ್ತಾಳೆ. ರಾಮನನ್ನು 'ಹಿಂದುವ' ಎಂದು ಗುರುತಿಸಲಾಗಿದೆ. 'ಹಿಂದುವರಮ್ಮನು ದೇಶದೊಳಗು ಬಂದು ಕೊಂದರು' ಎಂಬ ಖಾನ ಮಾತುಗಳಲ್ಲೂ ಇದರ ಪ್ರಸ್ತಾಪವಿದೆ. ಕಾದಂಬರಿ ಮೂಲ ಕಾವ್ಯದ ಪೌರಾಣಿಕ ರೀತಿಯನ್ನು ಬಿಟ್ಟುಕೊಟ್ಟಿದೆ. ಆಧುನಿಕ ಪ್ರಕಾರದ ಕಾದಂಬರಿಗೆ ಸಹಜವಾಗಿ ಹೊಂದಿಕೊಳ್ಳುವಂತೆ ಚಿತ್ರಿತವಾಗಿದೆ. ಚಾರಿತ್ರಿಕ ಸತ್ಯಗಳನ್ನು ಕಟ್ಟಿಕೊಡುವ ಗಟ್ಟಿತನದ ಕಲೆಗಾರಿಕೆಯು ಇಲ್ಲಿ ಕಂಡುಬರುತ್ತದೆ.

ಕಾದಂಬರಿ ಒಡಲೊಳಗೆ ಕುಮಾರರಾಮನನ್ನು ಉದ್ದೇಶಿಸಿ ಗುರುಗಳು ಹೀಗೆ ಹೇಳುತ್ತಾರೆ. "ಮುಸ್ಲಿಮರು ಹಿಂದೂ ನಾಡುಗಳನ್ನು ಕಬಳಿಸುತ್ತಾ ಗುಡಿ, ಗೋಪುರಗಳನ್ನು ನಾಶಮಾಡುತ್ತಾರೆ. ಹಿಂದೂ ದೇವತೆ ಮೂರ್ತಿಗಳನ್ನು ಕಾಲಲ್ಲಿ ತುಳಿಯುವ ಹಾಸುಗಳನ್ನಾಗಿ ಮಾಡಿ ಮನೆಯನ್ನು ಎಬ್ಬಿಸುತ್ತಾರೆ. ಹಿಂದೂ ಜನರನ್ನೆಲ್ಲ ಬಲತ್ಕಾರವಾಗಿ ಮತಾಂತರಿಸುತ್ತಾರೆ" (ರುದ್ರಮೂರ್ತಿ ಶಾಸ್ತ್ರಿ; ೨೦೦೬; ಪು. ೧೫೦) ಎಂಬ ಮಾತನ್ನು ಗಮನಿಸಿದರೆ, ಮತಧರ್ಮಗಳ ದೃಷ್ಟಿಯಿಂದ ಕೃತಿಯನ್ನು ರಚಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕಾಟಣ್ಣನ ಪಾತ್ರವು ಕನ್ನಡಿಗರ ಬಗ್ಗೆ ಮಾತನಾಡುತ್ತದೆ. "ವಿದೇಶದ ಶತ್ರುವಿಗೆ ತಲೆಬಾಗಿ ಕನ್ನಡಿಗರನ್ನು ಅಪಮಾನಗೊಳಿಸಿದ ಅವನಿಗೆ ಬುದ್ಧಿ ಕಲಿಸಿ, ಕನ್ನಡಿಗರ ಗೌರವವನ್ನು ಉಳಿಸುವ

ಕರ್ತವ್ಯ ನಮ್ಮದು" (ಅದೇ; ಪು. ೧೬೬). ಇದು ಕಾದಂಬರಿಯ ಕನ್ನಡ ಪರ ದೃಷ್ಟಿಕೋನಕ್ಕೆ ಉದಾಹರಣೆಯಾಗಿದೆ. ಇವಿಷ್ಟು ಕಾದಂಬರಿಯ ಪೂರ್ವಾರ್ಧದಲ್ಲಿ ಮೂಡಿಬಂದ ಅಂಶಗಳಾಗಿವೆ.

ಕಾದಂಬರಿಯ ಉತ್ತರಾರ್ಧದಲ್ಲಿ ಕುಮಾರರಾಮನು ತಲುಪುವ ನೆಲೆಯನ್ನು ನಿರೂಪಿಸಲಾಗಿದೆ. ಕಾದಂಬರಿಯು ಕುಮಾರರಾಮನ ಕಥೆಯನ್ನು ನೆಪಮಾತ್ರಕ್ಕೆ ವಸ್ತುವಾಗಿರಿಸಿಕೊಂಡು, ಆ ಮೂಲಕ ಪ್ರಭುತ್ವ ಮತ್ತು ಮನುಷ್ಯನೊಳಗಿನ ಸಂಬಂಧವನ್ನು ತೆರೆದಿಡಲು ಪ್ರಯತ್ನಿಸುತ್ತದೆ. ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳು ಮುಖ್ಯವಾಗಿರುತ್ತವೆ. ಕುಮಾರರಾಮನಿಗಷ್ಟೇ ಅಲ್ಲದೇ ರತ್ನಾಜಿ, ಹರಿಯಾಲಾದೇವಿ, ಚನ್ನರಾಮ, ಕಾಟಣ್ಣ, ಲಿಂಗಣ್ಣ, ರಾಮಣ್ಣ, ಹಂಪಣ್ಣ, ನಾಗಣ್ಣ, ರೂಪಿದೇವಯ್ಯ, ಗೋಪಾಲಯ್ಯ, ಚಿನ್ನಮ್ಮ, ದೇವಿರೆಡ್ಡಿ, ನೇಮಿಖಾನ, ತುಘಲಕ್, ಪ್ರತಾಪರುದ್ರ, ಯಪ್ಪಟ್ಟಿರಾಜ, ರಾಮಲೆ, ಬೈಚಪ್ಪ, ಇನ್ನಿತರ ಪಾತ್ರಗಳಿಗೂ ಕಾದಂಬರಿಯಲ್ಲಿ ಪ್ರಮುಖವಾದ ಸ್ಥಾನವಿದೆ. ರಾಜ ಪ್ರಭುತ್ವದ ಪರಿಣಾಮದಿಂದಾಗಿ ಉಂಟಾಗುವ ಮಾನಸಿಕ ಅಸಮತೋಲನದ ಸ್ಥಿತಿಯನ್ನು ಇಲ್ಲಿನ ಪಾತ್ರಗಳು ಪ್ರತಿನಿಧಿಸುತ್ತವೆ. ಕನ್ನಡನಾಡಿನ ರಾಜಕೀಯ ಇತಿಹಾಸದಲ್ಲಿ ಇದ್ದಿರಬಹುದಾದ ಮಾನವೀಯ ಅಂಶಗಳನ್ನು ಎತ್ತಿಹಿಡಿಯುವ ಕೃತಿಯಾಗಿ ಈ ಕಾದಂಬರಿಯು ಗಮನ ಸೆಳೆಯುತ್ತದೆ.

ಹರಿಯಾಲದೇವಿಯು ಕಂಪಿಲನ ಮೊದಲ ರಾಣಿಯಾದರೂ 'ರಾಣಿಯ ನೆಮ್ಮದಿ' ಸಿಗದ ಮಹಿಳೆಯಾಗಿ ಒಂಟಿತನ, ಅಸಹಾಯಕತೆಯ ಪ್ರತಿರೂಪವಾಗಿ ಚಿತ್ರಿತಳಾಗಿದ್ದಾಳೆ. ದಾಸಿಯಾಗಿದ್ದು, ಶೋಷಿತೆಯಾದ ಚಿನ್ನವ್ವ ಇನ್ನೊಂದು ಕಡೆಗಿದ್ದಾಳೆ. ಕುಮಾರರಾಮನನ್ನು ಮಗನೆಂದು ಪರಿಭಾವಿಸದೆ ಉನ್ಮಾದಕ್ಕೆ ಸಿಕ್ಕು ರತ್ನಾಜಿ ಅವನನ್ನು ವರಿಸಲು ಮನಸ್ಸು ಕೊಟ್ಟ ಸನ್ನಿವೇಶವಿದೆ. ಕಂಪಿಲನ ಸಾಹಸ, ಇಳಿವಯಸ್ಸಿನ ಅನುಭವಗಳನ್ನು ಕಾದಂಬರಿಯಲ್ಲಿ ಬಿಂಬಿಸಲಾಗಿದೆ.

ಕಾದಂಬರಿಯಲ್ಲಿ ಹರಿಯಾಲದೇವಿ ಮಾತನಾಡುವುದು ಹೆಚ್ಚಾಗಿ ಮನಸ್ಸಿನೊಂದಿಗೆ. ಚಿನ್ನವ್ವ, ರತ್ನಾಜಿ, ಮಾತಂಗಿ ಈ ಎಲ್ಲಾ ಪಾತ್ರಗಳು ಗಾಯಗೊಂಡ ಮನಸ್ಸಿನಂತೆ ಮಾತನಾಡುತ್ತವೆ. ಕಾದಂಬರಿಯಲ್ಲಿ ಚನ್ನರಾಮನ ಪಾತ್ರ ಹೊಸ ಸೃಷ್ಟಿಯಾದ್ದರಿಂದ ಕುತೂಹಲದ ಸಂಗತಿಯಂತೆ ಕಾಣುತ್ತದೆ. ಕುಮಾರರಾಮ ಮತ್ತು ಈತನ ಬೇಟೆಯ ಪ್ರಸಂಗ ಮನೋಜ್ಞವಾಗಿ ಮೂಡಿಬಂದಿದೆ. ಚನ್ನರಾಮನೇ ಕುಮಾರರಾಮನ ಬದಲಿಗೆ ಬಲಿಯಾಗುವ ಘಟನೆ ಕಾದಂಬರಿಗೆ ಮಹತ್ವವನ್ನು ತಂದುಕೊಡುತ್ತದೆ. ಒಟ್ಟಾರೆಯಾಗಿ ರುದ್ರಮೂರ್ತಿ ಶಾಸ್ತ್ರಿಯವರು ಸರಳ, ನೇರ ನಿರೂಪಣೆ ಮೂಲಕ 'ಕುಮಾರರಾಮ' ಕಾದಂಬರಿಯನ್ನು ಸೃಷ್ಟಿಸಿದ್ದಾರೆ. ಕಥೆಯು ಮನಸ್ಸಿನಲ್ಲಿ ಮೂಡುವಂತೆ ಕಟ್ಟಿಕೊಟ್ಟಿದ್ದಾರೆ. ಗಂಭೀರವಾದ ಜನಪ್ರಿಯ ಶೈಲಿಯಲ್ಲಿ ಕೃತಿಯು ಮೂಡಿಬಂದಿದೆ.

ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಗಳ ರಚನೆಯ ಹಿಂದೆ ಪ್ರಮುಖವಾದ ಉದ್ದೇಶಗಳಿರುತ್ತವೆ. ಇದು ಕುಮಾರರಾಮನಿಗೆ ಸಂಬಂಧಿಸಿದ ಪ್ರಸ್ತುತ ಕಾದಂಬರಿಗಳ ರಚನೆಗೂ ಈ ಮಾತು ಅನ್ವಯ

ವಾಗುತ್ತದೆ. ಓದುಗರಲ್ಲಿ ದೇಶಾಭಿಮಾನ, ಹಾಗೂ ಧರ್ಮಾಭಿಮಾನಗಳನ್ನು ಮೂಡಿಸುವುದರ ಜೊತೆಗೆ ಇತಿಹಾಸ ಪ್ರಜ್ಞೆಯನ್ನು ಜಾಗ್ರತಗೊಳಿಸುವ ಉದ್ದೇಶವು ಈ ಕೃತಿಗಳಿಗೆ ಇದ್ದಂತಿದೆ. ಇತಿಹಾಸ ಪುರುಷರ ಜೀವನವನ್ನು, ಐತಿಹಾಸಿಕ ಘಟನೆಗಳನ್ನು ಕೆಲವೊಂದು ಕಲ್ಪನೆ, ರಂಜಕತೆಗಳೊಂದಿಗೆ ರೋಚಕವಾಗಿ ನಿರೂಪಿಸಿದರೆ ಅದು ಓದುಗರ ಮನಸ್ಸನ್ನು ಪರಿಣಾಮಕಾರಿಯಾಗಿ ತಟ್ಟಬಲ್ಲದೆಂಬ ನಿರೀಕ್ಷೆ ಐತಿಹಾಸಿಕ ಕಾದಂಬರಿಗಳಿಗೆ ಇದ್ದಂತಿದೆ. ಐತಿಹಾಸಿಕ ಲೇಖನಗಳು ಅಥವಾ ಸಂಶೋಧನಾತ್ಮಕ ಬರಹಗಳಿಂದ ಸಾಧ್ಯವಾಗದ ಕೆಲಸ ಇಂತಹ ಕಥೆ, ಕಾದಂಬರಿಗಳಿಂದ ಸಾಧ್ಯವಾಗುತ್ತದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಇವನ್ನೆಲ್ಲ ಐತಿಹಾಸಿಕ ಕಥೆ, ಕಾದಂಬರಿಗಳ ಇತ್ಯಾತ್ಮಕ ಅಂಶಗಳೆಂದು ಗುರುತಿಸಬಹುದಾದರೂ ಇಂತಹ ಕೃತಿಗಳ ಐತಿಹಾಸಿಕತೆ ಮಾತ್ರ ಪ್ರಶ್ನಾರ್ಹವಾಗಿಯೇ ಉಳಿದುಬಿಡುತ್ತವೆ.

ಅಧ್ಯಾಯ-೫

ಇತರ ಸಾಹಿತ್ಯ ಕೃತಿಗಳಲ್ಲಿ ಕುಮಾರರಾಮ

೫೧ ಕಾವ್ಯ-ಯಕ್ಷಗಾನ ಪ್ರಸಂಗ

೫೨ ಗದ್ಯ ಬರಹಗಳು

೫.೧. ಕಾವ್ಯ ಯಕ್ಷಗಾನ ಪ್ರಸಂಗ

ಕುಮಾರರಾಮನ ಕುರಿತಾಗಿ ಆಧುನಿಕ ಕಾವ್ಯಗಳು ಅಷ್ಟಾಗಿ ರಚನೆಯಾದಂತಿಲ್ಲ. ಆಧುನಿಕ ಪೂರ್ವ ಕಾಲಘಟ್ಟದ ವಿವಿಧ ಸಾಂಗತ್ಯ ಕೃತಿಗಳು ಮತ್ತು ಜನಪದ ಕಾವ್ಯಗಳನ್ನು ಬಿಟ್ಟರೆ ನಮಗೆ ಇಲ್ಲಿ ಪ್ರಸ್ತುತವೆನಿಸುವುದು 'ಕಡುಗಲಿ ಕುಮಾರರಾಮ' ಎಂಬ ಯಕ್ಷಗಾನ ಪ್ರಸಂಗ. ಮಧುಕುಮಾರ ಬೋಳೂರು ಅವರು ರಚಿಸಿರುವ ಈ ಯಕ್ಷಗಾನ ಪ್ರಸಂಗವನ್ನಾಧರಿಸಿ ಸುರತ್ಕಲ್ಲಿನ ಶ್ರೀ ಮಹಮ್ಮಾಯಿ ಕೃಪಾಪೋಷಿತ ಯಕ್ಷಗಾನ ಮೇಳದವರು ವರ್ಷಾನುಗಟ್ಟಲೆ ಯಕ್ಷಗಾನ ಪ್ರದರ್ಶನ (ಆಟ)ವನ್ನು ನೀಡುತ್ತಾ ಬಂದಿದ್ದಾರೆ. ಹಾಗಾಗಿ ಕರಾವಳಿ ಜಿಲ್ಲೆಗಳಲ್ಲಿ ಕುಮಾರರಾಮನ ಪಂಥ-ಕಥೆಯನ್ನು ಜನಪ್ರಿಯಗೊಳಿಸಿದ ಕೀರ್ತಿ ಯಕ್ಷಗಾನ ಪ್ರಕಾರಕ್ಕೆ ಸಲ್ಲುತ್ತದೆ.

ಯಕ್ಷಗಾನದ ಭಾಷೆ ನಡುಗನ್ನಡಕ್ಕೆ ಹತ್ತರವಿದ್ದರೂ ಅದು ಪೂರ್ತಿಯಾಗಿ ಆಧುನಿಕವಾದ ರಚನೆ ಎಂಬುದರಲ್ಲಿ ಎರಡು ಮಾತಿಲ್ಲ.[೧] ಬಹುಪಾಲು ಯಕ್ಷಗಾನ ಪ್ರಸಂಗಗಳು ಮಧ್ಯಕಾಲೀನ ಕಾವ್ಯಗಳನ್ನಾಧರಿಸಿ ರಚನೆಯಾಗಿರುವುದರಿಂದಲೂ, ರಾಗ, ತಾಳ, ಲಯ, ಛಂದಸ್ಸುಗಳಿಗೆ ಅನುಗುಣವಾಗಿ ರಚನೆಯಾಗಿರುವುದರಿಂದಲೂ ಅವುಗಳ ಭಾಷೆ ಸಹಜವಾಗಿಯೇ ನುಡುಗನ್ನಡದತ್ತ ವಾಲಿದೆ ಎನ್ನಬಹುದು. ಪ್ರಸ್ತುತ 'ಕಡುಗಲಿ ಕುಮಾರರಾಮ' ಎಂಬ ಯಕ್ಷಗಾನ ಪ್ರಸಂಗ ಕೂಡ ಇದಕ್ಕೆ ಹೊರತಾಗಿಲ್ಲ.

ಕುಮಾರರಾಮನ ಕುರಿತಾದ ಹೆಚ್ಚಿನ ಎಲ್ಲಾ ಆಧುನಿಕ ಸಾಹಿತ್ಯ ಕೃತಿಗಳಿಗೂ ಮಧ್ಯಕಾಲೀನ ಸಾಂಗತ್ಯ ಕೃತಿಗಳೇ, ಅದರಲ್ಲೂ ಮುಖ್ಯವಾಗಿ ನಂಜುಂಡನ 'ರಾಮನಾಥ ಚರಿತೆ' ಅಥವಾ 'ಕುಮಾರ ರಾಮನ ಸಾಂಗತ್ಯ' ಆಕರವಾಗಿರುವಂತೆ ಈ ಯಕ್ಷಗಾನ ಕಾವ್ಯಕ್ಕೂ ಅದುವೇ ಮೂಲಾಧಾರವಾಗಿದೆ. ಯಕ್ಷಗಾನದ ಚೌಕಟ್ಟಿಗೆ ತಕ್ಕಂತೆ ಮೂಲಪಾತ್ರ ಸನ್ನಿವೇಶಗಳಲ್ಲಿ ಅಷ್ಟಿಷ್ಟು ಬದಲಾವಣೆಯಾಗಿರುವುದನ್ನು ಬಿಟ್ಟರೆ ಉಳಿದಂತೆ ಯಥಾವತ್ತಾಗಿ ಮೂಡಿಬಂದಿದೆ.[೨] ಯಕ್ಷಗಾನ ಪ್ರಸಂಗವು ಕುಮಾರರಾಮನನ್ನು

---

೧. ಸಾಮಾನ್ಯವಾಗಿ ಯಕ್ಷಗಾನದ ಹಾಡುಗಳು ನಡುಗನ್ನಡ ಶೈಲಿಯಲ್ಲಿದ್ದರೆ ಪ್ರದರ್ಶನ ಸಂದರ್ಭದಲ್ಲಿ ಪಾತ್ರಗಳ ಸಂಭಾಷಣೆಯೂ ಹೊಸಗನ್ನಡ ಶೈಲಿಯಲ್ಲಿರುತ್ತದೆ.

೨. ಮಧ್ಯಕಾಲೀನ ಸಾಹಿತ್ಯ ಕೃತಿಗಳಲ್ಲಿ, ಅಶ್ವವ್ಯಾಪಾರಿ, ದೇವತೆ, ವಜೀರ ಎಂಬ ಮುಂತಾದ ಪಾತ್ರಗಳು ಕಂಡುಬರುವುದಿಲ್ಲ. ಈ ಯಕ್ಷಗಾನ ಪ್ರಸಂಗದಲ್ಲಿ ಅಗತ್ಯಕ್ಕೆ ತಕ್ಕಂತೆ ಪಾತ್ರ ಚಿತ್ರಣ ಮಾರ್ಪಾಡು ಮಾಡಿಕೊಂಡಿದ್ದಾರೆ.

ಕುರಿತ ಆಧುನಿಕ ಕನ್ನಡದಲ್ಲಿ ಬಂದಿರುವ ಇತರ ಕೃತಿಗಳಿಗಿಂತ ಭಿನ್ನವಾಗಿ ಮೂಡಿಬಂದಿದೆ. ಇವನನ್ನಾಧರಿಸಿ ಹೊಸಗನ್ನಡದಲ್ಲಿ ರಚಿತವಾಗಿರುವ ನಾಟಕ, ಕಾದಂಬರಿ, ಗದ್ಯ ಬರಹಗಳಲ್ಲಿ ಪ್ರಾರಂಭಕ್ಕೆ ಕಂಪಿಲರಾಯ ರಾಜ್ಯ ಬಿಟ್ಟುಕೊಡುವ ಪ್ರಸಂಗ ಬರುವುದಿಲ್ಲ. ಇಲ್ಲಿ ಯಕ್ಷಗಾನ ಕೃತಿಯ ಪ್ರಾರಂಭದಲ್ಲಿಯೇ ಕುಮಾರರಾಮನಿಗೆ ಯುವರಾಜ ಪಟ್ಟವನ್ನು ಕಟ್ಟುವ ಸನ್ನಿವೇಶವಿದೆ. ರಾಜಧಾನಿಯ ಹೆಸರನ್ನು ಯಕ್ಷಗಾನ ಕೃತಿಯಲ್ಲಿ ಕುಮ್ಮಟದುರ್ಗ ಎಂಬುದರ ಬದಲು ಕುಂತಳ ದೇಶ ಎಂದು ಪ್ರಸ್ತಾಪಿಸಲಾಗಿದೆ. 'ಕಡುಗಲಿ ಕುಮಾರರಾಮ' ಯಕ್ಷಗಾನ ಪ್ರಸಂಗದ ಬಗೆಗೆ ಅಮೃತ ಸೋಮೇಶ್ವರರು ಮುನ್ನುಡಿಯಲ್ಲಿ ವ್ಯಕ್ತಪಡಿಸುವ ಅಭಿಪ್ರಾಯ ಈ ರೀತಿ ಇದೆ. "ಅನೇಕ ಐತಿಹ್ಯ ಜನಪದ ಹಾಗೂ ಶಿಷ್ಟ ಕಾವ್ಯಗಳಿಗೆ ಪ್ರೇರಣೆ ಇಟ್ಟಿರುವ ಕಂಪಿಲದುರ್ಗದ ಜನಪದ ವೀರವ್ಯಕ್ತಿ 'ಪರದಾರ ಸೋದರ' ಕುಮಾರರಾಮನ ಕಥಾನಕವೇ ಈ ಕೃತಿಯ ವಸ್ತು. ಅತ್ಯಂತ ಮಾರ್ಮಿಕವೂ ಹೃದಯಸ್ಪರ್ಶಿಯೂ ಆದ ದುರಂತ ವಸ್ತುವಿನ್ಯಾಸದಿಂದ ಕೂಡಿದ ಬಲಿಷ್ಠವಾದ ಇದರ ಕಥಾವಸ್ತುವು ಪ್ರದರ್ಶನ ಕಲೆಗೆ ಹೇಳಿ ಮಾಡಿಸಿದಂತಿದೆ.

ವಸ್ತುವನ್ನು ಬಳಸಿಕೊಂಡು ಕನ್ನಡದಲ್ಲಿ ಕೆಲವು ಐತಿಹಾಸಿಕ ನಾಟಕಗಳು ರಚಿಸಲ್ಪಟ್ಟು ಅಭಿನಯಗೊಂಡಿವೆ. ಸಕಲ ಲಕ್ಷಣವು ವಸ್ತು ಕತೆ, ವರ್ಣಕಕಿಷ್ಟು ವಿರಳವಾದರೂ ದೋಷವಿಲ್ಲ ಎಂಬ ನ್ಯಾಯದಂತೆ ಹಾಡುಗಬ್ಬವಾದ ಯಕ್ಷಗಾನದಲ್ಲಿ ವ್ಯಾಕರಣಾದಿಗಳನ್ನು ತೀರಾ ಕಟ್ಟುನಿಟ್ಟಾಗಿ ಪಾಲಿಸಬೇಕಾಗಿಲ್ಲ. ಹೀಗೆ ಈ ಕೃತಿಯು ತನ್ನದೇ ಆದ ಪ್ರಾದೇಶಿಕ ವೈವಿಧ್ಯತೆಯಿಂದ ಮೈದಳೆದಿದೆ (ಮಧುಕುಮಾರ ಬಿ.; ೧೯೮೮; ಮುನ್ನುಡಿಯಲ್ಲಿ).

ಸಮಗ್ರ ೨೩ ಪಾತ್ರಗಳನ್ನೊಳಗೊಂಡ ಚಿಕ್ಕ ಕೃತಿ ಇದಾಗಿದೆ. ಈ ಕೃತಿ ಕಿರಿದಾದರೂ ಇದು ಕಟ್ಟಿಕೊಡುವ ಚರಿತ್ರೆಯ ಹರವು ಹಿರಿದಾಗಿದೆ. ಕುಮಾರರಾಮನ ಸ್ಫೂರ್ತಿಯೊಂದಿಗೆ ಈ ಪ್ರಸಂಗವು ಮುಕ್ತಾಯಗೊಳ್ಳುತ್ತದೆ. ಹೀಗೆ ಕನ್ನಡದ ಬೇರೆ ಯಾವ ಬರಹಗಳಲ್ಲಿ ಕಾಣದ ವಿಶಿಷ್ಟತೆಯನ್ನು ಇಲ್ಲಿ ಕಾಣಬಹುದಾಗಿದೆ.

ಜಿ. ವರದರಾಜ ರಾವ್ ಅವರು 'ಕುಮಾರರಾಮನ ಸಾಂಗತ್ಯಗಳು' ಎಂಬ ಸಂಶೋಧನಾ ಗ್ರಂಥದ 'ಇತರ ರಚನೆಗಳು' ಎಂಬ ಅಧ್ಯಾಯದಲ್ಲಿ ಯಕ್ಷಗಾನಗಳು ಮತ್ತು ಯಕ್ಷಗಾನ ಮುಖ್ಯಾಂಶಗಳು' ಈ ಉಪಶೀರ್ಷಿಕೆಯಲ್ಲಿ ತತ್ಸಂಬಂಧವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಕುಮಾರರಾಮನ ಕಥೆಯನ್ನು ಕುರಿತು ಕನ್ನಡದಲ್ಲಿ ಯಕ್ಷಗಾನಗಳು ರಚಿತವಾಗಿವೆ. ಇವುಗಳನ್ನು ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅದಿಕರ್ನಾಟಕರು ಈಗಲೂ ಆಡುತ್ತಾರೆಂಬುದಾಗಿ ಹುಲ್ಲೂರು ಶ್ರೀನಿವಾಸ ಜೋಯಿಸರ ಹೇಳಿಕೆಯನ್ನು ಉಲ್ಲೇಖಿಸುತ್ತಾರೆ.

'ಕುಮಾರರಾಮನ ನಾಟಕ'ವು ಎಂಬ ಒಂದು ಯಕ್ಷಗಾನವನ್ನು ಶ್ರೀ ರಾಮಾಶಾಸ್ತ್ರಿ ಎಂಬುವರು ಬರೆದಿರುತ್ತಾರೆ. ಇದು ೧೯೬೨ರಲ್ಲಿ ಎರಡನೇ ಬಾರಿ ಮುದ್ರಿತವಾಗಿದೆ ಎಂದು (ವರದರಾಜ ರಾವ್

ಜಿ.; ೧೯೯೯; ಪು. ೨೩೪) ಎಂದು ಅಭಿಪ್ರಾಯಪಡುತ್ತಾರೆ. ಇಲ್ಲಿ ಬಹುಮಟ್ಟಿಗೆ ಉತ್ತರ ಕರ್ನಾಟಕ ಪ್ರದೇಶದ ಬಯಲಾಟದ ಪ್ರಭೇದವನ್ನು ಕುರಿತು ಪ್ರಸ್ತಾಪಿಸಿದಂತಿದೆ. ಕರಾವಳಿ ಕರ್ನಾಟಕದ ಯಕ್ಷಗಾನ ಪ್ರಕಾರವನ್ನು ಇಲ್ಲಿ ಅಷ್ಟಾಗಿ ಗಮನಿಸಿದಂತಿಲ್ಲ. ಆದರೂ ವರದರಾಜ ರಾವ್ ಅವರು ರಾಮಶಾಸ್ತ್ರಿ ಮತ್ತು ಇತರ ಕೆಲವು ಅಜ್ಞಾತ ಕವಿಗಳಿಂದ ಕುಮಾರರಾಮನ ಕುರಿತು ಕೆಲವು ಯಕ್ಷಗಾನ ಪ್ರಸಂಗಗಳು ರಚನೆಯಾಗಿವೆ ಎಂಬ ಅಂಶವನ್ನು ಪ್ರಸ್ತಾಪಿಸುತ್ತಾರೆ. 'ಕುಮಾರರಾಮನ ಕಥೆ' ಎಂಬ ಮತ್ತೊಂದು ಯಕ್ಷಗಾನ ಕಂಡುಬರುತ್ತದೆ. ಇಲ್ಲಿ ಕೃತಿಕಾರರ ಬಗ್ಗೆ ಮಾಹಿತಿ ಲಭ್ಯವಾಗಿರುವುದಿಲ್ಲ ಎಂದು ದಾಖಲಿಸಿದ್ದಾರೆ. ಯಕ್ಷಗಾನಗಳಲ್ಲಿ ವಿಧಿತವಾಗುವ ಕಥಾ ಭಾಗವನ್ನು ಜಿ. ವರದರಾಜ ಅವರು ಸಂಗ್ರಹಿಸಿ ಕೊಟ್ಟಿದ್ದಾರೆ.

೫.೨. ಗದ್ಯ ಬರಹಗಳು

ಕುಮಾರರಾಮನ ಕುರಿತಾಗಿ ಹೊಸಗನ್ನಡದಲ್ಲಿ ನಾಟಕ, ಕಾದಂಬರಿ ಹಾಗೂ ಯಕ್ಷಗಾನ ಪ್ರಸಂಗಗಳಲ್ಲದೆ ಇತರ ಕೆಲವು ಗದ್ಯ ಕೃತಿಗಳು ಪ್ರಕಟವಾಗಿವೆ. ಅವುಗಳನ್ನು ಕೆಲವರು ಕಾದಂಬರಿಗಳೆಂದು ಮತ್ತು ಕೆಲವರು ಕಥೆಗಳೆಂದು ಗುರುತಿಸಿರುವುದುಂಟು. ಆದರೆ ಸೂಕ್ಷ್ಮವಾಗಿ ನೋಡಿದಾಗ ಅವುಗಳು ಈ ಎರಡು ಪ್ರಕಾರಗಳಿಗೂ ಸೇರದೇ ಪ್ರತ್ಯೇಕವಾಗಿ ನಿಲ್ಲುತ್ತವೆ. ಅತ್ತ ಸೃಜನಾತ್ಮಕ ಕೃತಿಯು ಆಗಿರದೆ, ಇತ್ತ ಐತಿಹಾಸಿಕ ಅಥವಾ ಸಂಶೋಧಾನಾತ್ಮಕ ಬರಹವು ಆಗಿರದೆ ಮಧ್ಯಂತರದಲ್ಲಿ ನಿಲ್ಲುವ ಇಂತಹ ಕೃತಿಗಳನ್ನು ಇಲ್ಲಿ 'ಗದ್ಯ ಬರಹಗಳು' ಎಂಬ ಶೀರ್ಷಿಕೆಯಡಿಯಲ್ಲಿ ಪರಿಗಣಿಸಲಾಗಿದೆ. ಆದರೆ ಈ ಕೃತಿಗಳಲ್ಲಿ ಸೃಜನಶೀಲ ಸಾಹಿತ್ಯ, ಸಂಶೋಧನಾತ್ಮಕ ಬರಹ ಹಾಗೂ ಐತಿಹಾಸಿಕ ಲೇಖನ ಇವೆಲ್ಲವುಗಳ ಗುಣ ಲಕ್ಷಣಗಳು ಅಡಕವಾಗಿವೆ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗಾಗಿಯೇ ಆಧುನಿಕ ಸಾಹಿತ್ಯ ಅಥವಾ ಹೊಸಗನ್ನಡ ಸಾಹಿತ್ಯ ಎಂದು ಇಲ್ಲಿ ಗುರುತಿಸಲಾಗಿದೆ.

ಮೈ.ಹ. ರಾಮಶರ್ಮ ಅವರ 'ರಣಧೀರ ರಾಮನಾಥ' ಎಂಬ ಕೃತಿಯನ್ನು ಬರೆದು ೧೯೬೦ ರಲ್ಲಿ ಪ್ರಕಟಿಸಿದ್ದಾರೆ. ಇಲ್ಲಿ ಕಂಪಿಲರಾಜ್ಯದ ಬಗ್ಗೆ ಅನೇಕ ವಾದಗಳು ಹುಟ್ಟಿಕೊಂಡಿರುತ್ತವೆ. ಇದು ಹೊಯ್ಸಳ ರಾಜ್ಯದಿಂದ ಹುಟ್ಟಿತೆಂದೂ ಮತ್ತು ಕೆಲವರು ಕಾಕತೀಯರಿಗೆ ಸಂಬಂಧಪಟ್ಟದ್ದೆಂದು ಇನ್ನೂ ವಾದಿಸುತ್ತಲೇ ಇರುವರು. ಆದರೆ ಈ ಸಮಸ್ಯೆ ಬೇರೊಂದು ರೀತಿಯಲ್ಲಿ ಪರಿಹಾರವಾಗಿ ಹೊಸದೊಂದು ರಾಜ್ಯದ ಚರಿತ್ರೆಯೇ ಹೊರಬಿದ್ದಿದೆ. ಈ ಕೃತಿಯಲ್ಲಿ ವಿವರಿಸಿರುವ ಕಂಪಿಲ ರಾಜ್ಯದ ಪೂರ್ವಾತ್ರರ ಇಬ್ನಬಟೂಟನೆಂಬ ಅರಬ್ಬಿ ಯಾತ್ರಿಕನು ಕಂಪಿಲರಾಯನು ದೆಹಲಿ ಸುಲ್ತಾನನೊಡನೆ ಯುದ್ಧ ಮಾಡಿ ಸತ್ತನೆಂದು ಹೇಳುತ್ತಾನೆ. ಫರ್ನಾಮೊ ನ್ಯೂನಿಜನೆಂಬ ಪೋರ್ಚುಗೀಸ್ ಪ್ರವಾಸಿಯು ವಿಜಯನಗರ ರಾಜ್ಯ ಸ್ಥಾಪನೆಗೆ ಮೊದಲು ಆನೆಗೊಂದಿಯಲ್ಲಿ ಒಬ್ಬ ರಾಜನಿದ್ದನು. ಅವನು ಮಡಿಯುವುದಕ್ಕೆ ಮೊದಲು ಹನ್ನೆರಡು ವರ್ಷಗಳ ಕಾಲ ದೆಹಲಿಯ ಸುಲ್ತಾನನೊಡನೆ ಯುದ್ಧ ಮಾಡಿದನು. ಕೊನೆಗೆ ಪ್ರಬಲವಾದ ಒಂದು ದಾಳಿ ಬರಲು ಕೈನಮೆಟಿವೆಂಬ ದುರ್ಗವನ್ನು ಸೇರಿ ಅಲ್ಲಿ ಕಾಳಗ ಮಾಡಿ

ಮೃತನಾದನೆಂದೂ ಬರೆದಿರುವನು. ಅವನ ಹೇಳಿಕೆಯಂತೆ ಆನೆಗೊಂದಿ ರಾಜ್ಯದ ಉತ್ತರದ ಮೇರೆ 'ಡುರಿ' ಎಂಬ ನದಿ. ಸುಲ್ತಾನನ ಹೆಸರು ಟೋಗೊ ಮಾಮಡೆ. ಈ ಕೃತಿಯಲ್ಲಿ ಕಂಪಿಲರಾಯನಾರು? ಕೈನಮಟದುರ್ಗ ಎಲ್ಲಿದೆ? ಡುರಿ ನದಿ ಯಾವುದು? ಎಂಬುದರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ರಾಜ, ಕಾಲ ನಿರ್ಣಯದಲ್ಲಿ ಕಂಡುಬರುವ ವಿವರಗಳನ್ನು ರಾಮಶರ್ಮರವರು ಈ ಕೃತಿಯಲ್ಲಿ ವ್ಯಕ್ತ ಪಡಿಸುತ್ತಾರೆ. 'ಅಲ್ಲಿ ಒಬ್ಬ ರಾಮನಾಥನ ಪ್ರಶಸ್ತಿ ಇದೆ. ಯವನರು ವಾರಂಗಲ್ಲನ್ನು ಆಕ್ರಮಿಸಿದ ಬಳಿಕ ವೀರರುದ್ರನ ಬಳಿ ಇದ್ದ ಅಧಿಕಾರಿಗಳಿಬ್ಬರೂ ಅಸಹಾಯಕರಾಗಿ ಓಡಿ ಬಂದು ರಾಮನಾಥನ ಆಶ್ರಯ ಪಡೆಯುವ ವಿವರವನ್ನು ತಿಳಿಸುತ್ತಾರೆ. ಅಲ್ಲದೇ ಆ ಇಬ್ಬರೂ ಸೋದರರೆಂದೂ ವಿಜಯ ನಗರ ಸ್ಥಾಪಕರೆಂದು ಅಭಿಪ್ರಾಯ ಪಡುತ್ತಾರೆ. 'ಚನ್ನಬಸವ ಪುರಾಣ'ದ ಐದನೆಯ ಕಾಂಡದ ಒಂಬತ್ತನೆಯ ಸಂಧಿಯ ಕೊನೆಯ ಪದ್ಯಗಳಲ್ಲಿ ಈ ಕಂಪಿಲ ಮತ್ತು ರಾಮನಾಥನ ಕುರುಹುಗಳ ಬಗ್ಗೆ ವಿವರಗಳಿವೆ. ಕುಮ್ಮಟದ ಬಗೆಗೆ ಇನ್ನೂ ಕೆಲವು ಹೆಚ್ಚಿನ ವಿಷಯಗಳು ಇರುವ ಬಗ್ಗೆ ಈ ಕೃತಿಯು ಉಲ್ಲೇಖಿಸುತ್ತದೆ. ಈ ಕೃತಿಯಲ್ಲಿ ತಗಡೂರಿನ ಗಂಗ ಮತ್ತು ನಂಜುಂಡ ಎಂಬ ಇಬ್ಬರು ಕವಿಗಳು 'ಕುಮಾರ ರಾಮನ ಸಾಂಗತ್ಯ' ಬರೆದಿರುವ ಬಗೆಗೆ ಖಚಿತಪಡಿಸುತ್ತದೆ. ಪ್ರಸ್ತುತ ಕೃತಿಯಿಂದ ಕುಮ್ಮಟದುರ್ಗದ ಚರಿತ್ರೆಯೇ ಹೊರಬೀಳುತ್ತದೆ. ಇಲ್ಲಿ ಸೂಚಿಸಿರುವ ವಿಷಯಗಳು ಚರಿತ್ರಾರ್ಹವಾದ ಅಂಶಗಳಾಗಿರುತ್ತವೆ. ಇದು ಬಾಲಕರಿಗಾಗಿ ರಚಿಸಿರುವಂತಹ ಪುಸ್ತಕವಾಗಿದೆ ಎಂದು ಸ್ವತಃ ಲೇಖಕರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಅದಕ್ಕನುಗುಣವಾಗಿ ಭಾಷೆ, ಶೈಲಿ ಇತ್ಯಾದಿಗಳು ಸರಳ ಸುಂದರವಾಗಿವೆ. ಕೃತಿಯಲ್ಲಿ ಹಲವು ಕಡೆಗಳಲ್ಲಿ ನೀತಿಯನ್ನು ಬೋಧಿಸುವ ಪ್ರಸಂಗವು ಕಂಡುಬರುತ್ತದೆ. ಹೀಗೆ ರಾಮನಾಥನಂತಹ ಮಹಾವೀರನು ದೇಶಭಕ್ತನಾದ ಪರಿ, ಸಾಧು ಸಜ್ಜನರಿಗೆ ಪ್ರಾತಃಸ್ಮರಣೀಯ ವಾದ ಬಗೆ ಇತ್ಯಾದಿಗಳನ್ನು ಈ ಕೃತಿಯು ಮನೋಜ್ಞವಾಗಿ ಚಿತ್ರಿಸುತ್ತದೆ. ಹಲವು ಐತಿಹಾಸಿಕ ಉಲ್ಲೇಖಗಳು ಕೃತಿಯಲ್ಲಿ ಬಂದಿವೆಯಾದರೂ ಇದು ಒಂದು ಇತಿಹಾಸ ಗ್ರಂಥವೆನಿಸಿಕೊಳ್ಳುವುದ ಕ್ಕಿಂತಲೂ ಹೆಚ್ಚಾಗಿ ಒಂದು ಕಥಾ ಸಾಹಿತ್ಯವಾಗಿ ಗಮನಸೆಳೆಯುತ್ತದೆ.

ಜಿ. ವರದರಾಜ ರಾವ್ ಅವರು ಬರೆದಿರುವ 'ಕುಮ್ಮಟ ಕೇಸರಿ' ಒಂದು ಮಹತ್ವದ ಕೃತಿಯಾಗಿದೆ. ಈ ಕೃತಿಯು ೧೯೬೩ರಲ್ಲಿ ಸಂಗ್ರಹವಾದ ಕೃತಿಯಾಗಿರುತ್ತದೆ. ಈ ಕೃತಿಯು ಕುಮಾರ ರಾಮನನ್ನು ಕುರಿತಾದ ಆಧುನಿಕಪೂರ್ವ ಸಾಹಿತ್ಯದ ಸಾರ ಸಂಗ್ರಹದಂತಿದೆ. ನಂಜುಂಡ ಕವಿಯ ಕೃತಿಯು ಇತಿಹಾಸ ಮತ್ತು ಸಾಹಿತ್ಯಗಳೆರಡರ ಸಮ್ಮಿಲನವಾಗಿ ಹೇಗೆ ಗಮನಸೆಳೆಯುತ್ತದೆಯೋ ಹಾಗೆಯೇ ಅದರ ಗದ್ಯರೂಪವಾಗಿ ವರದರಾಜ ರಾವ್ ಅವರ 'ಕುಮ್ಮಟ ಕೇಸರಿ' ಗಮನ ಸೆಳೆಯುತ್ತದೆ. ಹಾಗೆಂದು ಅದರ ಯಥಾವತ್ತಾದ ಗದ್ಯಾನುವಾದವು ಇದು ಅಲ್ಲ. ನಂಜುಂಡ ಕವಿಯು ಚಿತ್ರಿಸಿದ ಕುಮಾರರಾಮನ ಕಥೆಯನ್ನು ಪ್ರಮುಖ ಸನ್ನಿವೇಶಗಳಾವುದನ್ನು ಬಿಡದೆ ಇಲ್ಲಿ ಸಾರರೂಪದಲ್ಲಿ ಸಂಗ್ರಹಿಸಿಕೊಡಲಾಗಿದೆ. ಕೃತಿಯ ಒಳಗಡೆ ಜನ್ಮ ಕಾರಣ, ಕಂಪಿಲನ ರಾಜವೈಭವ, ಕುಮಾರರಾಮನ

ಜನನ ಮತ್ತು ಬಾಲ್ಯ, ವಿವಾಹ ಮತ್ತು ಯುವರಾಜ ಪದವಿ, ಸಾಹಸೋದ್ಯಮ, ಕದನ ಪ್ರಾರಂಭ, ಬಲ್ಲಾಳನ ಆಗ್ರಹ, ವಿಜಯ ಪರಂಪರೆ, ಸುಲ್ತಾನನ ಸ್ನೇಹ ಪತ್ರ, ಬಾದುರನ ಪಲಾಯನ, ನೇಮಿಯ ದಂಡಯಾತ್ರೆ, ಶೂಲದ ಹಬ್ಬ, ರತ್ನಾಜಿ ವ್ಯಾಕುಲ, ಕಂಪಿಲನ ಬೇಟೆ, ಹರಹರದೇವಿಯ ಹಿತವಚನ, ಕಂದುಕ ಕಂಟಕ, ರತ್ನಾಜಿಯ ಸೇಡು, ಬೈಚಪ್ಪನ ಚಾತುರ್ಯ, ನೇಮಿಯ ಪುನರಾಗಮನ, ಮಾತಂಗಿಯ ಮುತ್ತಿಗೆ, ರಣಬಲಿ, ರತ್ನಾಜಿಯು ಕುಮಾರರಾಮನ ಮೇಲೆ ವ್ಯಾಮೋಹಕ್ಕೆ ಒಳಗಾಗುವುದು, ಕಂಪಿಲರಾಮನು ಅವಳ ಆಸೆಯನ್ನು ತಿರಸ್ಕರಿಸಿ 'ಪರದಾರ ಸೋದರ'ನೆನಿಸಿಕೊಳ್ಳುವುದು, ಶತ್ರು ಸೈನಿಕರೊಂದಿಗೆ ಹೋರಾಡುತ್ತಾ ವೀರ ಮರಣವನ್ನು ಅಪ್ಪುವುದು ಇತ್ಯಾದಿ ಸನ್ನಿವೇಶಗಳ ನಿರೂಪಣೆ ಇದೆ.

ಬಿ.ಎಂ. ತಲಗಡೆಯವರು 'ಪರದಾರ ಸೋದರ' ಎಂಬ ಕೃತಿಯನ್ನು ರಚಿಸಿದ್ದಾರೆ. ಕೃತಿಯು ೧೯೬೮ರಲ್ಲಿ ಪ್ರಕಟವಾಗಿದೆ. ಈ ಕೃತಿಯು ನಂಜುಂಡ ಕವಿಯ 'ರಾಮನಾಥ ಚರಿತೆ'ಯ ಸಾರ ಸಂಗ್ರಹವೆಂದು ಸ್ವತಃ ಲೇಖಕರೇ ಹೇಳಿಕೊಂಡಿದ್ದಾರೆ. 'ರಾಮನಾಥ ಚರಿತ'ವು ಕನ್ನಡ ಕಾವ್ಯಕ್ಷೇತ್ರದಲ್ಲಿ ಒಂದು ಅಪೂರ್ವವಾದ ಕೃತಿ. ಕಾವ್ಯ ದೃಷ್ಟಿಯಿಂದಲೂ, ಐತಿಹಾಸಿಕ ದೃಷ್ಟಿಯಿಂದಲೂ ಅದು ವಿಶಿಷ್ಟ ಸ್ಥಾನ ಪಡೆದಿದೆ. ಸುಮಾರು ಆರು ನೂರು ವರ್ಷಗಳ ಇತಿಹಾಸವುಳ್ಳ ಕುಮ್ಮಟದುರ್ಗ, ಹೊಸಮಲೆದುರ್ಗಗಳ ಪರಿಚಯವು ಇದರಲ್ಲಿದೆ. ಆ ದುರ್ಗಗಳಿಗೆ ಒಡೆಯನಾಗಿದ್ದ ಕಂಪಿಲದೇವನ ಪುತ್ರನಾದ ಕುಮಾರರಾಮನು ಈ ಕಾವ್ಯದ ಕಥಾನಾಯಕನಾಗಿದ್ದಾನೆ. ಕನ್ನಡ ನಾಡಿನ ಜನಮನದಲ್ಲಿ ಚಿರಂತನವಾಗಿ ಉಳಿದ ಕುಮಾರರಾಮನು ಶೀಲ ಮತ್ತು ಶೌರ್ಯ ಗುಣಗಳಿಂದ ಬೆಳಗಿದ ಕೆಚ್ಚೆದೆಯ ವೀರನಾಗಿದ್ದಾನೆ. ಕೆಲವು ಕಾಲವಾದರೂ ದೆಹಲಿಯ ಸುಲ್ತಾನರಿಗೆ ಸಿಂಹಸ್ವಪ್ನವಾಗಿ ವಿಜೃಂಭಿಸಿದ ಸನ್ನಿವೇಶ ಮೂಡಿಬಂದಿದೆ. ಗಂಡುಗಲಿ ಹಿಂದೂ ಸಂಸ್ಕೃತಿಯ ಸಂರಕ್ಷಣೆಗಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದ ಪುಣ್ಯಪುರುಷ ಎಂಬುದಾಗಿ ತಮ್ಮ ಕೃತಿಗೆ ಮೂಲ ಆಕರವಾದ ಕಾವ್ಯದ ಹಿರಿಮೆಯ ಬಗೆಗೆ ಲೇಖಕರು ಹೇಳಿಕೊಂಡಿದ್ದಾರೆ. ಕೃತಿಯು ಕುಮಾರರಾಮನ ಶೀಲಸಂಪನ್ನತೆಯನ್ನು ಮೆರೆದು ಜನಾಂಗದ ಮೇಲೆ ಶಾಶ್ವತ ಪ್ರಭಾವವನ್ನು ಬೀರುತ್ತದೆ. ಕುಮಾರರಾಮನು ಇಂದಿಗೂ ಕನ್ನಡ ಜನತೆಯ ಪ್ರೀತಿ ಗೌರವಗಳಿಗೆ ಪಾತ್ರನಾಗಿರುವುದನ್ನು ವಿವರಿಸುತ್ತದೆ. ಅವನ ಶೌಚ ಗುಣವಂತೂ ನಾಡಿನ ತುಂಬೆಲ್ಲಾ ಜನಜನಿತವಾದ ಸಂಗತಿಯನ್ನು ಬಿಂಬಿಸುತ್ತದೆ. ಅವನ ಆದರ್ಶ ಜೀವನವನ್ನು ಕುರಿತು ಬರೆದ ಗ್ರಂಥಗಳ ವಿವರಗಳನ್ನು ಕಥೆಗೆ ಪೂರಕವಾಗಿ ಇಲ್ಲಿ ಕೊಡಲಾಗಿದೆ. ಅವುಗಳಲ್ಲಿ ನಂಜುಂಡನ 'ರಾಮನಾಥ ಚರಿತೆ'ಯೇ ಕಾಲದೃಷ್ಟಿಯಿಂದ ಪ್ರಾಚೀನ ಕೃತಿ. ಕಾವ್ಯ ದೃಷ್ಟಿಯಿಂದ ಪ್ರೌಢವಾದುದು; ಸುಮಾರು ಆರು ಸಾವಿರ ಪದ್ಯಗಳನ್ನೊಳಗೊಂಡ ಕೃತಿಯಾಗಿದೆ. ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ 'ಪರದಾರ ಸೋದರ'ನೆಂಬ ಪ್ರಸ್ತುತ ಕೃತಿಯು ನಜುಂಡನ 'ರಾಮನಾಥ ಚರಿತೆ'ಯ ಕಥಾಸಾರವನ್ನು ಗದ್ಯರೂಪದಲ್ಲಿ ಅಡಕಗೊಳಿಸಿ ಹೇಳುವ ಮೂಲಕ ಓದುಗರ ಗಮನ ಸೆಳೆಯುತ್ತವೆ.

ಕುಮಾರರಾಮನನ್ನು ಕುರಿತು ರಚಿತವಾದ ಆಧುನಿಕ ಗದ್ಯ ಕೃತಿಗಳಲ್ಲಿ ಸಿ.ಆರ್. ಹೊಸಳ್ಳೆಯ್ಯನವರ 'ಅಮರ ಕೀರ್ತಿ'ಯೂ ಒಂದು. ಈ ಕೃತಿಯು ನಾಲ್ಕು ಭಾಗಗಳಲ್ಲಿ ಕುಮಾರ ರಾಮನನ್ನು ಹಿನ್ನೆಲೆಯಾಗಿರಿಸಿಕೊಂಡು ಕಥೆಯನ್ನು ನಿರೂಪಿಸುತ್ತದೆ. ಭಾಗ ಒಂದರಲ್ಲಿ ದಕ್ಷಿಣ ಭಾರತದ ಮಧ್ಯಕಾಲೀನ ರಾಜಕೀಯ ಪರಿಸ್ಥಿತಿ, ಪುವಾಲಿ ಕುಲದ ಅರಸರು, ರಾಮನಾಥನ ಉದಯ ಮತ್ತು ಬಾಲ್ಯ, ಹೊಸ ಕುಮ್ಮಟದುರ್ಗದ ಪ್ರವೇಶಗಳನ್ನೆಲ್ಲಾ ಉಲ್ಲೇಖಿಸಲಾಗಿದೆ. ಭಾಗ ಎರಡರಲ್ಲಿ ಯುವರಾಜನ ವಿಜಯ ಪರಂಪರೆ, ದೆಹಲಿಯ ಸುಲ್ತಾನನ ಪಾಪಾಸು ಮೆಟ್ಟಿದುದು, ಜಗದಪ್ಪರಾಯನ ಪರಾಜಯ, ಕುಮಾರರಾಮನ ವಿವಾಹ, ಬೊಲ್ಲನೆಂಬ ಉತ್ತಮಾಶ್ವವನ್ನು ಗೆದ್ದು ತಂದುದು, ಮಾರನ ಗೌಡನ ಗರ್ವಭಂಗ, ಬಾದುರನ ರಕ್ಷಣೆ - ಈ ರೀತಿಯ ವಿವರಗಳನ್ನು ಕಟ್ಟಿಕೊಡುತ್ತದೆ.

ಭಾಗ ಮೂರರಲ್ಲಿ - ಚಂಡಾಟದ ವಿವರಣೆ, ರತ್ನಾಜಿಯ ದುಷ್ಟ ನಡವಳಿಕೆ, ಕುಮಾರರಾಮನಿಗೆ ಮರಣದಂಡನೆಯ ಆಜ್ಞೆ, ಮಂತ್ರಿಯ ಬುದ್ಧಿವಂತಿಕೆ, ರಾಮನ ಅಗಲಿಕೆ, ಕುಮಾರರಾಮನ ಜೊತೆಗೆ ಇತರ ಪೂರಕ ಪಾತ್ರಗಳ ಚಿತ್ರಣವು ಮನೋಜ್ಞವಾಗಿ ಮೂಡಿಬಂದಿದೆ. ಇಲ್ಲಿ ಕುಮ್ಮಟದುರ್ಗದ ಅವಸಾನ ಮತ್ತು ವಿಜಯನಗರದ ಉದಯಕಾಲದ ವಿವರಣೆ ಕೊಡಲಾಗಿದೆ. ಇಲ್ಲಿ ಮಂತ್ರಿಯ ಬುದ್ಧಿವಂತಿಕೆಯಿಂದ ಕುಮಾರರಾಮನು ಬದುಕಿ ಉಳಿಯುವುದು ಇತ್ಯಾದಿ ಸನ್ನಿವೇಶಗಳು ನಿರೂಪಿತವಾಗಿವೆ.

ಭಾಗ ನಾಲ್ಕರಲ್ಲಿ ನೇಮಿಖಾನನ ಮಹಾದಾಳಿ, ಕುಮಾರರಾಮನ ಅಪ್ರತಿಮಾ ಸಾಹಸ, ಪಟ್ಟಾಭಿಷೇಕ, ರಾಜ್ಯಾಡಳಿತ, ಸುಲ್ತಾನನ ಕಡೆಯ ಪ್ರಯತ್ನ, ಅಸ್ತಮಯ - ಇತ್ಯಾದಿ ಘಟನಾವಳಿಗಳು ಮೂಡಿಬಂದಿವೆ.

ಹುಲ್ಲೂರು ಶ್ರೀನಿವಾಸ ಜೋಯಿಸ ಅವರು 'ಗಂಡುಗಲಿ ಕುಮಾರರಾಮ' ಎಂಬ ಕೃತಿಯನ್ನು ರಚಿಸಿದ್ದಾರೆ. ೧೯೪೧ರಲ್ಲಿ ಪ್ರಕಟವಾಗಿದೆ. ಹದಿನಾಲ್ಕನೇ ಶತಮಾನದ ಆದಿಭಾಗದಲ್ಲಿ ಕೆಲಕಾಲ ಪ್ರಜ್ವಲಿಸಿ ಬಲವಾದ ಅಪಘಾತಕ್ಕೆ ಒಳಗಾದ ಕುಮ್ಮಟ ರಾಜ್ಯದ ಬಗೆಗೆ ಮಾಹಿತಿಯನ್ನು ಒದಗಿಸುತ್ತದೆ. ಮಧ್ಯಕಾಲೀನ ಸಾಂಗತ್ಯ ಕೃತಿಗಳು ಈ ಕೃತಿಗೆ ಆಧಾರವಾದಂತಿದೆ. ಇಲ್ಲಿ ಕುಮಾರರಾಮನ ದೇವರ ಕೃಪೆಯಿಂದ ಜನಿಸಿದನು ಎಂಬ ಉಲ್ಲೇಖವಿದೆ. ಕಂಪಲಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಕಂಪಿಲರಾಯನ ಪ್ರೀತಿಯ ಪುತ್ರನಾಗಿದ್ದನು. ಕಂಪಿಲರಾಯ ತನ್ನ ಮಂತ್ರಿಯ ಸಹಾಯದಿಂದ ಕುಮ್ಮಟದುರ್ಗ ಎಂಬ ರಾಜಧಾನಿಯನ್ನು ನಿರ್ಮಿಸುತ್ತಾನೆ. ಕುಮಾರರಾಮನು ಹಲವಾರು ಶತ್ರು ರಾಜರೊಂದಿಗೆ ಯುದ್ಧ ಮಾಡಿ ಜಯಶಾಲಿಯಾಗುತ್ತಾನೆ ಇತ್ಯಾದಿ ಸನ್ನಿವೇಶಗಳು ಪ್ರಸ್ತುತ ಕೃತಿಯಲ್ಲಿ ನಿರೂಪಿತವಾಗಿವೆ.

ಹೀಗೆ 'ರಣಧೀರ ರಾಮನಾಥ', ಕುಮ್ಮಟದ ಕೇಸರಿ, ಅಮರ ಕೀರ್ತಿ, ಪರದಾರ ಸೋದರ, ಗಂಡುಗಲಿ ಕುಮಾರರಾಮ ಎಂಬ ಇತ್ಯಾದಿ ಗದ್ಯ ಗ್ರಂಥಗಳನ್ನು ಗಮನಿಸಿದರೆ ಇವುಗಳೆಲ್ಲ ಕುಮಾರರಾಮನಿಗಿದ್ದ ವಿವಿಧ ವಿಶೇಷಣ - ಬಿರುದುಗಳು ಶೀರ್ಷಿಕೆಯಾಗಿರುವುದು ಸ್ಪಷ್ಟವಾಗುತ್ತದೆ.

ಈ ಶೀರ್ಷಿಕೆಗಳ ಮೂಲಕವೇ ಇವೆಲ್ಲಾ ಐತಿಹಾಸಿಕ ಅಥವಾ ಸಂಶೋಧನಾತ್ಮಕ ಕೃತಿಗಳಾಗಿರದೆ ಕಥೆಯನ್ನು ನಿರೂಪಿಸುವ ಗದ್ಯ ಕೃತಿಗಳಾಗಿವೆ ಎಂಬ ಅಂಶವು ವೇದ್ಯವಾಗುತ್ತದೆ. ಎಲ್ಲಾ ಕೃತಿಗಳು ತಂತಮ್ಮ ಶೀರ್ಷಿಕೆಗಳಿಗೆ ಅನುಗುಣವಾಗಿ ಕುಮಾರರಾಮನಲ್ಲಿದ್ದ ಒಂದೊಂದು ಗುಣಗಳನ್ನು ಕೇಂದ್ರವಾಗಿರಿಸಿಕೊಂಡು ರಚಿತವಾಗಿವೆ. ಅದರಂತೆ 'ರಣಧೀರ ರಾಮನಾಥ' ಎಂಬ ಕೃತಿಯು ಆತನ ಯುದ್ಧೋತ್ಸಾಹಗಳನ್ನು ಪ್ರಧಾನವಾಗಿರಿಸಿಕೊಂಡಿದೆ. 'ಕುಮ್ಮಟದ ಕೇಸರಿ' ಎಂಬ ಕೃತಿಯು ಆತನ ಸಿಂಹ ಸದೃಶ್ಯ ವ್ಯಕ್ತಿತ್ವವನ್ನು ಕೇಂದ್ರವಾಗಿರಿಸಿಕೊಂಡಿದೆ. 'ಅಮರ ಕೀರ್ತಿ' ಎಂಬ ಕೃತಿಯು ಜನಮಾನಸದಲ್ಲಿ ಶಾಶ್ವತವಾಗಿ ನೆಲೆ ನಿಲ್ಲಬಲ್ಲ ಕುಮಾರರಾಮನ ಕೀರ್ತಿಯನ್ನು ಬಣ್ಣಿಸುತ್ತದೆ. 'ಪರದಾರ ಸೋದರ' ಎಂಬ ಕೃತಿಯು ಚಿಕ್ಕಮ್ಮ ರತ್ನಾಜಿಯ ವ್ಯಾಮೋಹಕ್ಕೆ ಒಳಗಾಗದೆ ಶೌಚಗುಣವನ್ನು ಮೆರೆದ ಕುಮಾರರಾಮನ ಧೀಮಂತ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. 'ಗಂಡುಗಲಿ ಕುಮಾರರಾಮ' ಎಂಬ ಕೃತಿಯು ಮತ್ತು ಅವನ ಧೈರ್ಯಶೌರ್ಯಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ಈ ಎಲ್ಲಾ ಕೃತಿಗಳಲ್ಲೂ ಕಥನ ನಿರೂಪಣೆಯೇ ಮುಖ್ಯವಾಗಿದೆ. ಕುಮಾರರಾಮನ ವಿವಿಧ ವ್ಯಕ್ತಿತ್ವಗಳನ್ನು ವೈಭವೀಕರಿಸುವ, ಓದುಗರ ಮನಮುಟ್ಟುವಂತೆ ಮನೋಜ್ಞವಾಗಿ ಚಿತ್ರಿಸುವ ಉದ್ದೇಶ ಈ ಕೃತಿಗಳಿಗಿರುವುದು ಸ್ಪಷ್ಟವಾಗುತ್ತದೆ. ಇನ್ನೊಂದು ಬಹುಮುಖ್ಯ ಅಂಶವೆಂದರೆ ಎಲ್ಲಾ ಕೃತಿಗಳು ನಂಜುಂಡ ಕವಿಯ ರಾಮನಾಥ ಚರಿತೆಯ ಆಧಾರದಿಂದ ರಚಿತವಾಗಿರುವುದು. ಕೆಲವು ಕೃತಿಗಳಂತೂ 'ರಾಮನಾಥ ಚರಿತೆ'ಯ ಗದ್ಯಾನುವಾದದಂತೆ, ಸಾರಸಂಗ್ರಹದಂತೆ ಕಂಡುಬರುತ್ತವೆ. ಒಟ್ಟಿನಲ್ಲಿ ಕುಮಾರರಾಮನ ಕುರಿತಾದ ಮಧ್ಯಕಾಲೀನ ಸಾಂಗತ್ಯ ಕೃತಿಗಳನ್ನು ಓದಲಾರದವರಿಗೆ ಕುಮಾರರಾಮನ ಕಥೆಯನ್ನು ತೆರೆದುಕೊಳ್ಳುವ ನಿಟ್ಟಿನಲ್ಲಿ ಈ ಗದ್ಯ ಕೃತಿಗಳು ನೆರವಾಗುತ್ತವೆ.

ಅಧ್ಯಾಯ-೬

ಸಮಾಪನ

ಕುಮಾರರಾಮನ ಆದರ್ಶವೂ ಆತನ ಸಾಹಸಗಳು ಕನ್ನಡದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶಾಶ್ವತವಾಗಿ ಉಳಿದುಕೊಂಡಿವೆ. ಕುಮಾರರಾಮನ ಬಗೆಗೆ ಅನೇಕ ಕೃತಿಗಳು ಸೃಷ್ಟಿಯಾಗಿರುತ್ತವೆ. ಇದಕ್ಕೆ ಆತನದಲ್ಲಿದ್ದ ಧರ್ಮ, ಶ್ರದ್ಧೆ ಮತ್ತು ಪರಾಕ್ರಮಗಳೇ ಮುಖ್ಯ ಕಾರಣಗಳಾಗಿವೆ. ಆತನ ಜೀವನದಲ್ಲಿ ಪರಾಕ್ರಮ ಒಂದೇ ಪ್ರಧಾನವಾಗಿದ್ದರೆ, ಸಾರ್ವಕಾಲಿಕ ಜನಮನ್ನಣೆಗೆ ಪಾತ್ರನಾಗುತ್ತಿರಲಿಲ್ಲ. ಇವುಗಳೊಂದಿಗೆ ಸರಿಸಮಾನವಾದ ಮಾನವ ಸಾತ್ವಿಕ ಗುಣಕ್ಕೆ ಪೂರಕವಾದ ಬೇರೊಂದು ಸದ್ಗುಣ ಕೂಡಿದ್ದುದು ಆ ಕಡುಗಲಿಯ ಬದುಕು ಸಾರ್ಥಕವಾಗಬಲ್ಲದು. ಕುಮಾರರಾಮನ ಜೀವನ ಕಲಿತನ ಶುಚಿತ್ವಗಳಿಂದ ಕೂಡಿ ಜನಮನ್ನಣೆಗೆ ಪಾತ್ರವಾಗಿದೆ. ಕುಮ್ಮಟದುರ್ಗದ ಪತನವಾದಂದಿನಿಂದಲೂ ಈ ರಣಧೀರನ ಪರಾಕ್ರಮ, ಬಲಿದಾನಗಳು ನಮ್ಮ ಜನತೆಯ ಆರಾಧ್ಯ ಮೌಲ್ಯಗಳಾಗಿವೆ. ಆದರ್ಶ ಸ್ವಭಾವಗಳು ಅಚ್ಚಳಿಯದೆ ಬೆಳೆದು ಬಂದ ಬಗೆ ತಿಳಿದುಬರುತ್ತದೆ. ಕಾಲಕಾಲಕ್ಕೆ ಈ ಸಮರ ವೀರನ ಸಾಹಸದ ಜೊತೆಗೆ ಆತನ ಶುಚಿತ್ವವನ್ನು ಸಾರಿ ಹೇಳುವ ವೃತ್ತಾಂತಗಳು ಬೆಳೆಯಲಾರಂಭಿಸಿವೆ. ಕರ್ನಾಟಕದಲ್ಲಿ ಅನೇಕ ಸಮುದಾಯಗಳಲ್ಲಿ ಕುಮಾರರಾಮನು ಆರಾಧ್ಯ ದೈವವಾಗಿ ಪರಿಣಮಿಸಿದ್ದಾನೆ. ಪ್ರತಿಯೊಬ್ಬ ಕನ್ನಡಿಗನಿಗೂ ಈತನ ಪರಾಕ್ರಮ, ಪರದಾರಿ ಸೋದರತ್ವಗಳು ಆದರ್ಶಪ್ರಾಯವಾಗಿವೆ. ಅವನ ಜೀವನ ಚರಿತ್ರೆ ಜನರಿಗೆ ಅನುಕರಣೀಯ ಮತ್ತು ಆದರನೀಯ.

ಹೀಗೆ ಕುಮಾರರಾಮನ ಜೀವನ ವೃತ್ತಾಂತವು ಜನರ ಮನಸ್ಸಿನಲ್ಲಿ ಬೇರೂರಿದೆ. ಇದರಿಂದ ಬಗೆ ಬಗೆಯ ಜನಪದ ಸಾಹಿತ್ಯದಲ್ಲಿ ನಂಬಿಕೆ, ಸಂಪ್ರದಾಯ, ಗೀತೆಗಳು, ಕಥನ ಗೀತೆಗಳು, ಜನಪದ ಕಾವ್ಯಗಳು ಹುಟ್ಟಿಕೊಂಡಿವೆ. ಶಿಷ್ಟಸಾಹಿತ್ಯದಲ್ಲೂ ಹಲವು ಕೃತಿಗಳು ಕುಮಾರರಾಮನನ್ನು ಕಥಾನಾಯಕನಾಗಿ ಚಿತ್ರಿಸಿವೆ ಈ ದೃಷ್ಟಿಯಿಂದ ಇಂಥ ಮಹಿಮಾ ಪುರುಷನನ್ನು ಚರಿತ್ರೆಕಾರರು ಮರೆತರೂ ಕನ್ನಡ ಜನತೆ ಮರೆಯದೆ ಈಗಲೂ ಹಲವಾರು ಕೃತಿಗಳು ಹುಟ್ಟಿಕೊಳ್ಳುತ್ತಲೆ ಇವೆ. ಮಧ್ಯಕಾಲೀನ ಸಾಹಿತ್ಯ ದಿಂದ ಹೊಸಗನ್ನಡ ಸಾಹಿತ್ಯದವರೆಗೆ ಬರಹಗಳು ಕಾಣಸಿಗುತ್ತವೆ. ಅದರಲ್ಲಿ ಮುಖ್ಯವಾಗಿ ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮನನ್ನು ಹೇಗೆ ಬಿಂಬಿಸಲಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಇತಿಹಾಸದಲ್ಲಿ ಕುಮಾರರಾಮನ ಮನೆತನದವರನ್ನು ಕುಮ್ಮಟದ ಅರಸರೆಂದು ಗುರುತಿಸಲಾಗಿದೆ. ಮುಮ್ಮಡಿ ಸಿಂಗೆಯ ನಾಯಕನಿಂದ ಈ ಮನೆತನದ ಆರಂಭದ ಹೆಜ್ಜೆಗಳನ್ನು ಗುರುತಿಸಿದ್ದಾರೆ.

ವಂಶಾವಳಿಯಲ್ಲಿ ಈತನಿಗಿಂತಲೂ ಮೊದಲು ಐದು ಜನ ಹೆಸರುಗಳು ಉಲ್ಲೇಖಗೊಂಡಿರುತ್ತವೆ. ಅವರ ಆಡಳಿತದ ವಿಷಯವಾಗಿ ಯಾವುದೇ ವರದಿಗಳು ತಿಳಿದುಬಂದಿರುವುದಿಲ್ಲ. ಈ ದೃಷ್ಟಿಯಿಂದ ಮುಮ್ಮಡಿ ಸಿಂಗೆಯ ನಾಯಕನು ಮೊದಲ ದೊರೆ, ಸಮರ್ಥ ಆಡಳಿತಗಾರ ಎಂದು ತಿಳಿದುಬರುತ್ತದೆ. ಈತನ ಮಗನಾದ ಕಂಪಿಲರಾಯನು ತಂದೆಯ ಕಲಿತನವನ್ನು ಮೈಗೂಡಿಸಿಕೊಂಡ ಬಗೆ, ಹೊಸಮಲೆ ದುರ್ಗದಲ್ಲಿ ರಾಜ್ಯಾಡಳಿತ, ಹಲವು ಬಾರಿ ಹೊಯ್ಸಳರೊಂದಿಗೆ ಹೋರಾಟ ನಡೆಸಿದ ಸಂಗತಿ ಇತ್ಯಾದಿ ವಿವರಗಳು ಇತಿಹಾಸದಿಂದ ತಿಳಿದುಬರುತ್ತವೆ. ಇಂಥ ಪರಿಸರದಲ್ಲಿ ಹುಟ್ಟಿಬಂದ ಕುಮಾರರಾಮನು ಸುತ್ತಲಿನ ರಾಜ್ಯವನ್ನೆಲ್ಲ ಗೆದ್ದು ಜಯಶಾಲಿಯಾದನು. ಮೂರು ಬಾರಿ ದಿಲ್ಲಿ ಸುಲ್ತಾನನನ್ನು ಹಿಮ್ಮೆಟ್ಟಿಸಿ ದಕ್ಷಿಣ ಭಾರತವನ್ನು ಸ್ವತಂತ್ರಗೊಳಿಸಿದನು. ಹೀಗ ಹಲವಾರು ಸಂಗತಿಗಳು ಇತಿಹಾಸದಲ್ಲಿ ಬಿಂಬಿತವಾಗಿವೆ. ಕುಮಾರರಾಮನ ಜೀವನ ವೃತ್ತಾಂತದ ಅಂಶಗಳು ಚಿತ್ರಿತವಾಗಿರುತ್ತವೆ. ಶಾಸನಗಳು ಕುಮ್ಮಟದುರ್ಗದ ಜನತೆ ಈ ವೀರನ ಬಗೆಗೆ ತಾಳಿರುವ ಭಕ್ತಿ ಗೌರವಗಳನ್ನು ಮಾತ್ರ ಉಲ್ಲೇಖಿ ಸುತ್ತವೆ. ರಾಮಘಡ ಶಾಸನದಲ್ಲಿ ಸ್ಪಷ್ಟವಾದ ವಂಶಾವಳಿಯ ವಿವರಗಳು ಕುಮಾರರಾಮನ ಐತಿಹಾಸಿಕತೆಯನ್ನು ಖಚಿತಪಡಿಸುತ್ತವೆ. ಕುಮಾರರಾಮನನ್ನು ಕುರಿತ ಕೃಥಿಯತ್ತುಗಳು ಮುಮ್ಮಡಿ ಸಿಂಗಯನ ಆಳ್ವಿಕೆ, ಕಂಪಿಲರಾಯನ ಆಡಳಿತ, ಕುಮಾರರಾಮನ ಉತ್ತರಾಧಿಕಾರದ ಬಗೆ, ಮನೆತನದ ಸ್ವರೂಪ ರತ್ನಾಜಿಯ ಪ್ರಣಯ ಪ್ರಸಂಗ ಇತ್ಯಾದಿ ಅಂಶಗಳು ಚಿತ್ರಿತಗೊಂಡಿವೆ.

ಜನಪದ ಸಾಹಿತ್ಯದಲ್ಲಿ ಕುಮಾರರಾಮನನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಜನಪದರ ಆಚರಣೆಗಳಾದ ನಂಬಿಕೆ, ಸಂಪ್ರದಾಯ, ಉತ್ಸವ ಇತ್ಯಾದಿ ವಿವರಗಳಲ್ಲಿ ಕುಮಾರರಾಮನ ಉದಾತ್ತ ಜೀವನದ ಮಹತ್ವವನ್ನು ಮನತುಂಬಿ ಹಾಡಿ ಹೊಗಳಿದ್ದಾರೆ. ಕುಮಾರರಾಮನ ಕಥೆ ಎಂದೆಂದಿಗೂ ಜನ ಮರೆಯದಂತೆ ಚಿತ್ರಿಸಲಾಗಿದೆ. ಅದು ಪ್ರತಿಯೊಬ್ಬರ ಮನಸ್ಸಿಗೆ ತಟ್ಟುವಂತೆ ಮಾಡಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಕಥೆಗಳು, ಕಥನ ಗೀತೆಗಳು, ನಾಡು ನುಡಿಗಳು, ಜನಪದ ಗೀತೆಗಳು, ದುಂದುಮಗಳು ಇತ್ಯಾದಿ ಪ್ರಕಾರಗಳಲ್ಲಿ ಕುಮಾರರಾಮನ ವ್ಯಕ್ತಿತ್ವವನ್ನು ಅನಾವರಣಗೊಳಿಸಲಾಗಿದೆ. ಕರ್ನಾಟಕದ ಅನೇಕ ಸಮುದಾಯಗಳು ಕುಮಾರರಾಮನ ನಂಬಿಕೆ, ಆಚರಣೆಗಳನ್ನು ಪಾಲಿಸಿಕೊಂಡು ಬಂದಿವೆ. ಇನ್ನೂ ಹಲವು ಕಡೆಗಳಲ್ಲಿ ಕುಮಾರರಾಮನನ್ನು ದೈವದ ಸಂಕೇತವಾಗಿಸಿಕೊಂಡು ಜನಪದರು ಹಾಡು ಕಟ್ಟುತ್ತಲೇ ಇದ್ದಾರೆ. ಜನಪದ ಸಾಹಿತ್ಯದಲ್ಲೂ ಕುಮಾರರಾಮನ ಆದರ್ಶಗಳು ಹೆಚ್ಚು ಕಾಲ ಜನಮನದಲ್ಲಿ ಉಳಿಯುವಂತೆ ಅಭಿವ್ಯಕ್ತಿಸಲಾಗಿದೆ. ಆತನ ಕುರಿತು ಜನಪದ ಸಾಹಿತ್ಯ ದಲ್ಲಿ ವರ್ಣನೆಯ ಅಂಶ ಹೆಚ್ಚು ಕಂಡುಬರುತ್ತವೆ. ವಸ್ತು ಒಂದೇಯಾದರೂ ಅವರು ಕಟ್ಟಿಕೊಡುವ ಚರಿತ್ರೆಯ ಅಂಶಗಳು ಸ್ವಲ್ಪ ಭಿನ್ನವಾಗಿ ಬಿಂಬಿಸಲಾಗಿರುತ್ತದೆ. ಕರ್ನಾಟಕದ ತುಂಬೆಲ್ಲಾ ಕುಮಾರರಾಮನ ಪಂಥ ಹರಡಿಕೊಂಡಿದೆ.

ಮಧ್ಯಕಾಲೀನ ಸಂದರ್ಭದಲ್ಲಿ ಕುಮಾರರಾಮನ ವ್ಯಕ್ತಿತ್ವ, ಅವನ ಆದರ್ಶ ಜೀವನ ಕುರಿತು ಹಲವು ಕನ್ನಡ ಕಾವ್ಯಗಳು ರಚನೆಯಾಗಿವೆ. ನಂಜುಂಡನ 'ರಾಮನಾಥ ಚರಿತೆ' ಪಾಂಚಾಳ ಗಂಗನ 'ಚನ್ನರಾಮನ ಸಾಂಗತ್ಯ' ಹಾಗೂ ಮಹಾಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ' ಪ್ರಮುಖವಾದವುಗಳು. ಕುಮಾರರಾಮನ ಒಟ್ಟು ಬದುಕನ್ನು ಸಮಗ್ರವಾಗಿ ನಿರೂಪಿಸುವಲ್ಲಿ ಕಾವ್ಯಗಳ ಪಾತ್ರ ಹಿರಿದಾಗಿದೆ. ಮಧ್ಯಕಾಲೀನ ಸಂದರ್ಭದ ಮೂರು ಸಾಂಗತ್ಯ ಕಾವ್ಯಗಳಲ್ಲಿ ನಂಜುಂಡನ 'ರಾಮನಾಥ ಚರಿತೆ' ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಕಾವ್ಯವೆನಿಸಿದೆ. ಪಾಂಚಾಳ ಗಂಗನ 'ಚನ್ನರಾಮನ ಸಾಂಗತ್ಯ' ಹಾಗೂ ಮಹಾಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ' ನಂಜುಂಡನ ಕಾವ್ಯದ ಗಾಢ ಪ್ರಭಾವಕ್ಕೆ ಒಳಗಾಗಿವೆ. ಐತಿಹಾಸಿಕ ದೃಷ್ಟಿಯಿಂದ ಯಾವುದೇ ಮಹತ್ವದ ಸಂಗತಿಗಳನ್ನು ಒಳಗೊಂಡಿರುವುದಿಲ್ಲ. ಈ ಎರಡು ಕೃತಿಗಳು ಒಂದೇ ಸಂಪ್ರದಾಯಕ್ಕೆ ಸೇರಿದವುಗಳಾಗಿವೆ. ಜನಸಾಮಾನ್ಯರ ಅಭಿರುಚಿಗೆ ತಕ್ಕಂತೆ ಸರಳವಾದ ನಿರೂಪಣೆಯನ್ನೊಳಗೊಂಡಿವೆ. ಈ ಮೂರು ಕಾವ್ಯಗಳು ಭಿನ್ನವಾಗಿ ಕಥೆಯ ಸ್ವರೂಪದಲ್ಲಿ ಕಂಡು ಬಂದರೂ ವಸ್ತು ಮಾತ್ರ ಒಂದೇಯಾಗಿದೆ.

ಕುಮಾರರಾಮನ ಕಥೆ ಎಂದೆಂದಿಗೂ ಜನಪ್ರಿಯವೆನ್ನುವುದಕ್ಕೆ ಈತನನ್ನು ಕುರಿತು ಹೊಸಗನ್ನಡ ಸಾಹಿತ್ಯದಲ್ಲಿ ಅನೇಕ ಗ್ರಂಥಗಳು ರಚನೆಯಾಗಿರುವುದೇ ನಿದರ್ಶನ. ನಡುಗನ್ನಡ ಸಾಹಿತ್ಯದಲ್ಲಿ ಮೂರು ಸಾಂಗತ್ಯ ಕಾವ್ಯಗಳ ಮೂಲಕ ತುಂಬಾ ರಸವತ್ತಾಗಿಯೇ ಚಿತ್ರಿತವಾಗಿರುವ ಕುಮಾರರಾಮನನ್ನು ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯರೂಪಕ್ಕೆ ಇಳಿಸದೆ ನಾಟಕ, ಕಾದಂಬರಿ, ಗದ್ಯ ಮೊದಲಾದ ಬರಹಗಳಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ. ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮನ ಬಗೆಗೆ ಕಾವ್ಯ-ಕವಿತೆಗಳು ರಚನೆಯಾಗದಿದ್ದರೂ ಯಕ್ಷಗಾನ ಪ್ರಸಂಗಗಳು ರಚನೆಯಾಗಿವೆ. ಯಕ್ಷಗಾನ ಪ್ರಸಂಗಗಳು ನಡುಗನ್ನಡ ಭಾಷಾ ಶೈಲಿಯ ಕಾವ್ಯಗಳಾಗಿದ್ದರೂ ಅವುಗಳು ಬಹುಮಟ್ಟಿಗೆ ಆಧುನಿಕ ಕಾಲಘಟ್ಟದಲ್ಲಿ ಹುಟ್ಟಿಕೊಂಡಿರುವುದರಿಂದ ಅವುಗಳನ್ನು ಹೊಸಗನ್ನಡ ಸಾಹಿತ್ಯದೊಳಗೆಯೇ ಪರಿಗಣಿಸಬೇಕಾಗುತ್ತದೆ.

ಕುಮಾರರಾಮನ ಕಥೆಯನ್ನಾಧರಿಸಿ ನಾಟಕ ಕೃತಿ ರಚಿಸಿದವರಲ್ಲಿ ವಸುದೇವ ಭೂಪಾಲಂ, ವೀರಣ್ಣ ರಾಜೂರ, ಚದುರಂಗ, ವಾದಿರಾಜ ಕನಕಗಿರಿ ಮೊದಲಾದವರು ಪ್ರಮುಖರಾಗಿದ್ದಾರೆ. ವಸುದೇವ ಭೂಪಾಲಂ ಅವರು 'ಕುಮ್ಮಟ ವಲ್ಲಭ' ಎಂದು ಐದಂಕದ ನಾಟಕ ರಚನೆಯ ಸಂದರ್ಭದಲ್ಲಿ ಮಧ್ಯಕಾಲೀನ ಸಾಂಗತ್ಯ ಕೃತಿಗಳನ್ನವಲೋಕಿಸಿ ಇತಿಹಾಸದ ಘಟನೆಗಳಿಗೆ ಚ್ಯುತಿ ಬರದಂತೆ ವಿಷಯವನ್ನು ವಿಸ್ತರಿಸಿಕೊಂಡಿದ್ದಾರೆ. ನಾಟಕದ ಮೂರನೇ ಅಂಕದಲ್ಲಿ ಸಾಂಗತ್ಯದ ಪ್ರಭಾವವು ಎದ್ದುಕಾಣುತ್ತದೆ. ಪ್ರಸ್ತುತ ಕೃತಿಯಲ್ಲಿ ಕುಮಾರರಾಮನ ತಾಯ್ನಾಡಿನ ಪ್ರೇಮ ಮತ್ತು ಶೌರ್ಯವನ್ನು ಚಿತ್ರಿಸಲಾಗಿದೆ. ಇನ್ನೂ ಚದುರಂಗದ 'ಕುಮಾರರಾಮ' ಮೊದಲ ದಾಟಿಗಿಂತ ಭಿನ್ನವಾದ ಕೃತಿಯೆನಿಸಿದ್ದರೂ ಕುಮಾರರಾಮನ ಪಾತ್ರವನ್ನೇ ಇಲ್ಲಿ ಉಜ್ವಲಗೊಳಿಸಲಾಗಿದೆ. ಒಟ್ಟು ಹತ್ತೊಂಬತ್ತು ದೃಶ್ಯಗಳ ಮೂಲಕ ನಿರೂಪಿಸಲಾಗಿದೆ. ವೀರಣ್ಣ ರಾಜೂರ ಅವರ 'ರತ್ನಾಜಿ' ಬಾನುಲಿ ನಾಟಕದಲ್ಲಿ ಕೂಡ

ಮಲಮಗನನ್ನು ಮೋಹಿಸಿ ದೊರಕದೆ ವಿಫಲಳಾದ ರತ್ನಾಜಿಯ ಭಗ್ನ ಪ್ರಣಯವು ಚಿತ್ರಣಗೊಂಡಿದೆ. ಇದು ನಂಜುಂಡನ ಜಾಡು ಹಿಡಿದು ಕೆಲವು ಮಾರ್ಪಾಡುಗಳೊಂದಿಗೆ ಮೂಡಿಬಂದ ಕೃತಿಯಾಗಿದೆ. ಇಲ್ಲಿಯೂ ಸಹ ಪ್ರಧಾನವಾಗಿ ಕುಮಾರರಾಮನ ಶಾಚ್ಛತೆಯನ್ನೇ ಬಿಂಬಿಸಲಾಗಿದೆ. ವಾದಿರಾಜ ಕನಕಗಿರಿ ಅವರ 'ಗಂಡುಗಲಿ ಕುಮಾರರಾಮ' ನಾಟಕವು ಉಳಿದ ಕೃತಿಗಳಿಗೆ ಭಿನ್ನವಾಗಿ ಹೊಸ ಪಾತ್ರ ಸೃಷ್ಟಿಗೆ ಮುಂದಾಗಿದೆ.

ಕುಮಾರರಾಮನನ್ನು ವಸ್ತುವಾಗಿರಿಸಿಕೊಂಡು ಹೊಸಗನ್ನಡದಲ್ಲಿ ಕೆಲವು ಕಾದಂಬರಿಗಳು ರಚನೆಯಾಗಿವೆ. ಕೊರಟ್ಟಿ ಶ್ರೀನಿವಾಸರಾವ್ ಅವರ 'ಕನ್ನಡಿಗರ ಕಾಳರಾತ್ರಿ' ಹಾಗೂ 'ಕುಮಾರರಾಮ' ಎಂಬ ಎರಡು ಕಾದಂಬರಿಗಳು ಕುಮಾರರಾಮನ ಸಾಹಸ, ದೇಶಪ್ರೇಮ, ಶೌರ್ಯೋನ್ನತಿ ಹಾಗೂ ತ್ಯಾಗ ಬಲಿದಾನಗಳನ್ನೇ ಕೊಂಡಾಡುತ್ತವೆ. ಇನ್ನು ರುದ್ರಮೂರ್ತಿ ಶಾಸ್ತ್ರಿಯವರ ಕುಮಾರರಾಮ ಕಾದಂಬರಿ ಕಾವ್ಯ, ಶಾಸನಗಳನ್ನು ಆಧರಿಸಿಯೇ ರಚಿತವಾದದ್ದಾಗಿದ್ದು, ಇಲ್ಲಿ ಮುಖ್ಯವಾಗಿ ಕುಮಾರ ರಾಮನ ಐತಿಹಾಸಿಕತೆಯ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಲಾಗಿದೆ. ಇದನ್ನಾಧರಿಸಿ ಗಂಡುಗಲಿ ಕುಮಾರರಾಮ ಎಂಬ ಚಲನಚಿತ್ರವು ನಿರ್ಮಾಣಗೊಂಡಿದೆ.

ಕುಮಾರರಾಮನ ಕಥೆಯನ್ನಾಧರಿಸಿ ರಚಿತವಾದ ಹಲವು ಗದ್ಯಬರಹಗಳು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಎಂ.ಎಚ್. ರಾಮಶರ್ಮರು ವಿದೇಶಿ ಪ್ರವಾಸಿ ನ್ಯೂನಿಜನು ತ್ರಿನಮಟ ಎಂದು ಕರೆದುದ್ದನ್ನೇ ಕುಮ್ಮಟದ ದುರ್ಗವೆಂದು ಮೊಟ್ಟಮೊದಲು ಗುರುತಿಸಿದ್ದಾರೆ. ಈ ಬಗ್ಗೆ ಅವರ ರಣಧೀರ ರಾಮನಾಥ ಎಂಬ ಕೃತಿ ತುಂಬ ಮಹತ್ವಪೂರ್ಣವಾಗಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಕುಮಾರರಾಮನ ಇತಿಹಾಸಕ್ಕೆ ಜೀವಂತಿಕೆಯನ್ನು ತಂದುಕೊಟ್ಟವರು. 'ಗಂಡುಗಲಿ ಕುಮಾರರಾಮ' ಎಂಬ ಕೃತಿಯು ಅವರ ಸೃಜನಶೀಲತೆಯ ಜೊತೆಗೆ ಸಂಶೋಧನೆಯ ಆಳವನ್ನು ತಿಳಿಸುತ್ತದೆ. ಜಿ. ವರದರಾಜ ರಾವ್ ಅವರ 'ಕುಮ್ಮಟ ಕೇಸರಿ'ಯಲ್ಲಿ ನಾಡಪ್ರೇಮಕ್ಕೆ ಆದ್ಯತೆ ನೀಡಲಾಗಿದೆ. ಸಿ.ಆರ್. ಹೊಸಳ್ಳಿಯ್ಯನವರ 'ಅಮರಕೀರ್ತಿ' ಕೃತಿಯಲ್ಲಿ ಕುಮಾರರಾಮನ ಬಲಿದಾನವನ್ನು ಕೊಂಡಾಡಲಾಗಿದೆ. ಮಧುಕುಮಾರ ಬೊಳೂರು ಅವರು ಕುಮಾರರಾಮನನ್ನು ವಸ್ತುವಾಗಿಸಿ ಯಕ್ಷಗಾನ ಪ್ರಸಂಗವನ್ನು ರಚಿಸಿದ್ದಾರೆ.

ಕುಮಾರರಾಮನು ಮೂಲತಃ ಐತಿಹಾಸಿಕ ವ್ಯಕ್ತಿ. ಐತಿಹಾಸಿಕ ಆಕರಗಳಲ್ಲಿ ಇತನ ಬಗೆಗೆ ಹೆಚ್ಚಿನ ವಿವರಗಳು ಸಿಗದೇ ಹೋದರೂ ವಿಜಯನಗರ ಪೂರ್ವದ ಕರ್ನಾಟಕದ ಇತಿಹಾಸದಲ್ಲಿ ಕುಮಾರರಾಮನ ಹೆಸರು ಉಲ್ಲೇಖನೀಯ. ಕುಮ್ಮಟ ದುರ್ಗದಂಥ ಚಿಕ್ಕ ಪ್ರದೇಶದ ಸ್ಥಳೀಯ ನಾಯಕನಾಗಿದ್ದ ಈತನ ಕೀರ್ತಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನೆಲೆ ನಿಲ್ಲುವಂಥದ್ದು. ಶಾಸನ, ಕೈಫಿಯತ್ತು, ವಿದೇಶಿ ಪ್ರವಾಸಿಗರ ಬರಹಗಳಂತೆ ಐತಿಹಾಸಿಕ ಆಕರಗಳು ಕುಮಾರರಾಮನ ಬಗೆಗೆ ಅತ್ಯಲ್ಪ ಮಾಹಿತಿಗಳನಷ್ಟೆ ಒದಗಿಸುತ್ತವೆ. ಆದರೆ ಮೌಖಿಕ ಮತ್ತು ಲಿಖಿತ ಸಾಹಿತ್ಯ ಪರಂಪರೆಗಳು

ಆತನನ್ನು ಜನರ ಸಾಂಸ್ಕೃತಿಕ ನಾಯಕನನ್ನಾಗಿ ಚಿತ್ರಿಸಿವೆ. ಕರ್ನಾಟಕಾಂಧ್ರ ಪರಿಸರದ ಕೆಲ ಸಮುದಾಯಗಳ ಜನಮಾನಸದಲ್ಲಿ ಆತ ಆರಾಧ್ಯ ದೈವವಾಗಿ ನೆಲೆ ನಿಂತಿದ್ದಾನೆ. ಅವರ ಅನನ್ಯತೆಯ ಪ್ರತೀಕನಾಗಿದ್ದಾನೆ.

ಕುಮಾರರಾಮನ ಬಗೆಗಿನ ಲಿಖಿತ ಸಾಹಿತ್ಯದಲ್ಲಿ ಆಧುನಿಕಪೂರ್ವ ಕಾಲಘಟ್ಟದ ಸಾಂಗತ್ಯ ಕೃತಿಗಳಿಗೆ ಮಹತ್ವದ ಸ್ಥಾನ ಸಲ್ಲುತ್ತದೆ. ಅದರಲ್ಲೂ ಕ್ರಿ.ಶ. ೧೬ನೇ ಶತಮಾನದ ನಂಜುಂಡ ಕವಿಯ 'ಕುಮಾರರಾಮನ ಸಾಂಗತ್ಯ'ವು ಗಮನಾರ್ಹವೆನಿಸುತ್ತದೆ. ಚರಿತ್ರೆಯ ಕಥನವಾಗಿ ಈ ಹಾಡುಗಬ್ಬಕ್ಕೆ ವಿಶಿಷ್ಟ ಸ್ಥಾನವಿದೆ. ಹೊಸಗನ್ನಡ ಸಾಹಿತ್ಯವು ಕುಮಾರರಾಮನ ಚರಿತ್ರೆಗೆ ಸ್ಪಂದಿಸಿದೆ. ಇಲ್ಲಿ 'ಚರಿತ್ರೆಗೆ ಸ್ಪಂದಿಸಿದೆ' ಎನ್ನುವುದಕ್ಕಿಂತಲೂ 'ಕಾವ್ಯಕ್ಕೆ ಸ್ಪಂದಿಸಿದೆ' ಎನ್ನುವುದು ಹೆಚ್ಚು ಸೂಕ್ತವೆನಿಸುತ್ತದೆ. ಯಾಕೆಂದರೆ ಅಷ್ಟರಮಟ್ಟಿಗೆ ಅದು ನಂಜುಂಡಾದಿ ಕವಿಗಳ ಕಾವ್ಯಗಳಿಗೆ ಋಣಿಯಾಗಿದೆ. ಹೊಸಗನ್ನಡದಲ್ಲಿ ಕುಮಾರರಾಮನನ್ನು ಕೇಂದ್ರವಾಗಿಸಿಕೊಂಡು ವಿವಿಧ ಪ್ರಕಾರಗಳ ಸುಮಾರು ಮೂವತ್ತರಷ್ಟು ಕೃತಿಗಳು ರಚನೆಯಾಗಿವೆ. ನಾಟಕ, ಕಾದಂಬರಿ, ಯಕ್ಷಗಾನ ಪ್ರಸಂಗ, ಗದ್ಯ ಬರಹ ಹೀಗೆ ಅವುಗಳನ್ನು ವರ್ಗೀಕರಿಸಬಹುದಾಗಿದೆ. ಇಲ್ಲೆಲ್ಲ ಮೂಲ ಚರಿತ್ರೆ ನೆಪಮಾತ್ರ. ಬಹುಪಾಲು ನಂಜುಂಡ ಕವಿಯ ರಾಮನಾಥ ಚರಿತೆ' ಕಾವ್ಯವನ್ನಾಧರಿಸಿಯೇ ಎಲ್ಲಾ ಕೃತಿಗಳು ಹುಟ್ಟಿಕೊಂಡಿವೆ. ಸ್ವಲ್ಪಮಟ್ಟಿಗೆ ಜನಪದ ಕಾವ್ಯ-ಐತಿಹ್ಯ-ನಂಬಿಕೆಗಳ ಪ್ರಭಾವವು ಆಗಿರಬಹುದು. ಹಾಗಾಗಿ ಇವೆಲ್ಲ ಚರಿತ್ರೆಯ "ಪುನಃ ಪುನಃ ಕಥನ ಎನಿಸುತ್ತವೆ.

ಈ ಪುನರ್ ಕಥನಗಳನ್ನಾಗಲಿ ಪುನರಪಿ ಕಥನಗಳನ್ನಾಗಲಿ ಇತಿಹಾಸ ಮತ್ತು ಸಾಹಿತ್ಯದ ಅಂತರ ಸಂಬಂಧದ ನೆಲೆಯಲ್ಲಿ ಪರಿಭಾವಿಸಬೇಕಾಗುತ್ತದೆ. ಐತಿಹಾಸಿಕ ವಸ್ತುಗಳುಳ್ಳ ಈ ಬಗೆಯ ಸಾಹಿತ್ಯ ಕೃತಿಗಳು ಇತಿಹಾಸವನ್ನು ಜನಪ್ರಿಯಗೊಳಿಸುವ ಇಲ್ಲವೇ ವೈಭವಿಕರಿಸುವ ಸಲುವಾಗಿ ಹುಟ್ಟಿ ಕೊಳ್ಳುತ್ತವೋ? ಅಥವಾ ಸಾಹಿತ್ಯದಲ್ಲಿ ಜನಪ್ರಿಯಗೊಳಿಸುವ ಸಲುವಾಗಿ ಹುಟ್ಟಿಕೊಳ್ಳುತ್ತವೋ? ಎಂಬ ಮೂಲಭೂತ ಪ್ರಶ್ನೆ ಉದ್ಭವವಾಗುತ್ತದೆ. ಉದ್ದೇಶ ಏನೇ ಇದ್ದರೂ ಇಂತಹ ಕೃತಿಗಳಿಂದ ಚರಿತ್ರೆ ಹಾಗೂ ಸಾಹಿತ್ಯಗಳೆರಡು ಜನಪ್ರಿಯವಾಗಿರುವುದಂತೂ ಸತ್ಯ. ಕುಮಾರರಾಮನ ವಿಷಯದಲ್ಲೂ ಈ ಮಾತು ಅನ್ವಯವಾಗುತ್ತದೆ. ಕನ್ನಡದ ಮಧ್ಯಕಾಲೀನ ಹಾಗೂ ಆಧುನಿಕ ಸಾಹಿತ್ಯ ಕೃತಿಗಳ ಮೂಲಕ ಕುಮಾರರಾಮನ ಚರಿತ್ರೆ ಜನಪ್ರಿಯಗೊಂಡಿದೆ. ಮೂಲ'ಚರಿತ್ರೆ'ಯು ಸಾಹಿತ್ಯ ಕೃತಿಗಳ ಮೂಲಕ ಚರಿತೆಯ ರೂಪ ಪಡೆದುಕೊಂಡಿದೆ. ಕುಮಾರರಾಮನ ಚಾರಿತ್ರ್ಯ'ವನ್ನೇ ಕೇಂದ್ರವಾಗಿರಿಸಿಕೊಂಡು ಈ ಎಲ್ಲಾ ಸಾಹಿತ್ಯ ಕೃತಿಗಳು ಹುಟ್ಟಿಕೊಂಡಿವೆ.

ಇಲ್ಲಿ ಇನ್ನೆರಡಂಶದ ಕುರಿತಾಗಿಯೂ ವಿಚಾರ ಮಾಡಬೇಕಾಗುತ್ತದೆ. ಚರಿತ್ರೆಯನ್ನು ಜನಪ್ರಿಯ ಗೊಳಿಸುವ ಉದ್ದೇಶಕ್ಕಿಂತಲೂ ಮುಖ್ಯವಾಗಿ ಚರಿತ್ರೆಯ ನಿರ್ದಿಷ್ಟ ವಸ್ತು, ಸನ್ನಿವೇಶ, ಘಟನೆಗಳು, ಕೃತಿಗಳನ್ನು ಜನಪ್ರಿಯಗೊಳಿಸಬಲ್ಲವು, ಕಲಾತ್ಮಕವಾಗಿಸಬಲ್ಲವೂ ಎಂಬ ಪ್ರಶ್ನೆಯೂ ಬರಹಗಾರರಲ್ಲಿ

ರುತ್ತದೆ. 'ಕಡುಗಲಿ ಕುಮಾರರಾಮ' ಯಕ್ಷಗಾನ ಪ್ರಸಂಗದ ಮುನ್ನುಡಿಯಲ್ಲಿ ಅಮೃತ ಸೋಮೇಶ್ವರ ಅವರು ಹೇಳುವ ಮಾತುಗಳನ್ನು ಇಲ್ಲಿ ಗಮನಿಸಬಹುದು. "ಅತ್ಯಂತ ಮಾರ್ಮಿಕವೂ ಹೃದಯಸ್ಪರ್ಶಿಯೂ ಆದ ದುರಂತ ವಸ್ತುವಿನ್ಯಾಸದಿಂದ ಕೂಡಿದ ಬಲಿಷ್ಠವಾದ ಇದರ ಕಥಾವಸ್ತುವು ಪ್ರದರ್ಶನ ಕಲೆಗೆ ಹೇಳಿಮಾಡಿಸಿದಂತಿದೆ". ಐತಿಹಾಸಿಕ ಘಟನೆ ಎಂಬ ಅರಿವಿಲ್ಲದೆಯೂ ಕುಮಾರರಾಮನ ಕಥೆಯನ್ನು ಓದಿದರೆ ಅಥವಾ ಕೇಳಿದರೆ ಅಥವಾ ದೃಶ್ಯಮಾಧ್ಯಮ ರೀತಿಯಲ್ಲಿ ಹೇಳುವುದಾದರೆ ಈ ಕಥೆಯನ್ನು ಪೌರಾಣಿಕ, ಐತಿಹಾಸಿಕ, ಹಾಗೂ ಸಾಮಾಜಿಕ ಚೌಕಟ್ಟುಗಳಿಗೂ ಹೊಂದಿಸಲು ಸಾಧ್ಯವಾಗುತ್ತದೆ. ಹೀಗಿರುವಾಗ ಸಾಹಿತ್ಯ ಕೃತಿಯೊಂದರ ವಸ್ತು ಮೂಲತಃ ಐತಿಹಾಸಿಕವಾಗಿದ್ದರೂ ಸಾಹಿತ್ಯ ಕೃತಿಯಾಗಿ ಮೂಡಿಬಂದಾಗ ಅದು ಇತಿಹಾಸವಾಗಿ ಉಳಿಯುವುದಿಲ್ಲ ಎಂಬ ವಿಚಾರವು ಇಲ್ಲಿ ಮುಖ್ಯವಾಗುತ್ತದೆ. ಪ್ರಸ್ತುತ ಕುಮಾರರಾಮನನ್ನು ಕುರಿತ ಹೊಸಗನ್ನಡ ಸಾಹಿತ್ಯ ಕೃತಿಗಳಿಗೂ ಈ ಮಾತು ಅನ್ವಯವಾಗುತ್ತದೆ. ಈ ದೃಷ್ಟಿಕೋನದಿಂದಲೇ ಇಲ್ಲಿ ಹೊಸಗನ್ನಡದ ಕೆಲವು ಸಾಹಿತ್ಯ ಕೃತಿಗಳನ್ನು 'ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮ' ಎಂಬ ಶೀರ್ಷಿಕೆ ಅಡಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸೀಮಿತ ಕಾಲಾವಧಿಯೊಳಗಡೆ ಪ್ರಸ್ತುತ ಸಂಪ್ರಬಂಧವನ್ನು ಸಿದ್ಧಪಡಿಸಬೇಕಾಗಿರುವುದರಿಂದ ಇಲ್ಲಿ ಸಾಕಷ್ಟು ಮಿತಿಗಳೂ ಕಾಣಿಸಿಕೊಂಡಿರಬಹುದು. ಇಲ್ಲಿ ಮುಖ್ಯವಾಗಿ ಕುಮಾರರಾಮನನ್ನು ಕುರಿತು ರಚಿತವಾಗಿರುವ ಹೊಸಗನ್ನಡ ಸಾಹಿತ್ಯ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅವುಗಳು ಮಧ್ಯಕಾಲೀನ ಸಾಹಿತ್ಯ ಕೃತಿಗಳಿಗೆ ಋಣಿಯಾಗಿರುವುದನ್ನು ಅಲ್ಲಲ್ಲಿ ಗುರುತಿಸಲಾಗಿದೆ. ಮಧ್ಯಕಾಲೀನ ಮತ್ತು ಆಧುನಿಕ, ಅದೇ ರೀತಿ ಮಧ್ಯಕಾಲೀನ ಸಾಹಿತ್ಯ, ಆಧುನಿಕ ಸಾಹಿತ್ಯ ಕೃತಿಗಳ ತೌಲನಿಕ ಅಧ್ಯಯನ ಇಲ್ಲಿ ಬಹುಮಟ್ಟಿಗೆ ಸಾಧ್ಯವಾಗಿಲ್ಲ. ಅದೇ ರೀತಿ ಆಧುನಿಕ ಸಾಹಿತ್ಯ ಕೃತಿಗಳ ಪರಸ್ಪರ ತೌಲನಿಕ ಅಧ್ಯಯನಕ್ಕೆ ಇಲ್ಲಿ ಅವಕಾಶವಾಗಿಲ್ಲ. ಈ ತೆರನಾದ ಅಧ್ಯಯನಗಳು ನಡೆದಲ್ಲಿ ಮಹತ್ವದ ಅಂಶಗಳು ಬೆಳಕಿಗೆ ಬರಬಹುದು. ಅದೇನೇ ಇದ್ದರೂ ಹೊಸಗನ್ನಡ ಸಾಹಿತ್ಯವು ಮಧ್ಯಕಾಲೀನ ಕರ್ನಾಟಕದ ಪ್ರಾದೇಶಿಕ ಚರಿತ್ರೆಯೊಂದಕ್ಕೆ ಹೇಗೆ ಸ್ಪಂದಿಸಿದೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದು ಕ್ಷೇತ್ರಕ್ಕೆ ಸಂಬಂಧಪಟ್ಟ ಇನ್ನಷ್ಟು ಅಧ್ಯಯನಗಳಿಗೆ ಪ್ರೇರಕವಾಗಬಹುದೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ.

ಅನುಬಂಧಗಳು

ಆಕರ ಗ್ರಂಥಗಳು

ಅ. ಪ್ರಧಾನ ಆಕರಗಳು

I. ನಾಟಕಗಳು

೧. ಉಮಾಪತಿ ಎಸ್.; ೧೯೭೫; **ಎರಡು ಐತಿಹಾಸಿಕ ನಾಟಕಗಳು**; ಸಂಸ್ಕೃತ ಸಾಹಿತ್ಯ ಸದನ, ಮೈಸೂರು.

೨. ಕನಕಗಿರಿ ವಾದಿರಾಜ; ೧೯೯೪; **ಕುಮಾರರಾಮ**; ನಟರಾಜ ಪ್ರಕಾಶನ, ಕಂಪ್ಲಿ.

೩. ಚದುರಂಗ; ೧೯೯೩; **ಕುಮಾರರಾಮ**; ನಾಗೇಂದ್ರ ಪ್ರಕಾಶನ, ಮೈಸೂರು.

೪. ವಿಜಯಲಕ್ಷ್ಮಿ ಎಂ. (ಸಂ.); ೨೦೦೧; **ಚದುರಂಗರ ಸಮಗ್ರ ನಾಟಕಗಳು**, ಅಭಿರುಚಿ ಪ್ರಕಾಶನ, ಮೈಸೂರು.

೫. ವೀರಣ್ಣ ರಾಜೂರು; ೧೯೮೦; **ರತ್ನಾಜಿ ಮತ್ತು ಕೆಳದಿ ಚೆನ್ನಮ್ಮ**; ಮಂಗಳ ಪ್ರಕಾಶನ, ಧಾರವಾಡ.

೬. ಶ್ರೀಕಂಠ ಕೂಡಿಗೆ (ಸಂ.); ೨೦೦೬; **ವಸುದೇವ ಭೂಪಾಲಂ ಅವರ ಸಮಗ್ರ ಸಾಹಿತ್ಯ ಸಂ.೧**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

II. ಕಾದಂಬರಿಗಳು

೧. ಕೊರಟಿ ಶ್ರೀನಿವಾಸರಾವ್; ೨೦೦೬; **ಕನ್ನಡಿಗರ ಕಾಳರಾತ್ರಿ**; ಆನಂದ ನಿಲಯ ಪ್ರಕಾಶನ, ಬೆಂಗಳೂರು.

೨. ಕೊರಟಿ ಶ್ರೀನಿವಾಸರಾವ್; ೨೦೦೬; **ಕುಮಾರರಾಮ**; ಆನಂದ ನಿಲಯ ಪ್ರಕಾಶನ, ಬೆಂಗಳೂರು.

೩. ರುದ್ರಮೂರ್ತಿ ಶಾಸ್ತ್ರಿ ಸು.; ೨೦೦೫; **ಕುಮಾರರಾಮ**; ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು

III. ಗದ್ಯ ಬರಹಗಳು

೧. ಕರಿಬಸವಯ್ಯ ಟಿ.ಆರ್.; ೧೯೮೭; **ಕುಮಾರರಾಮ**; ಕಂಠೀರವ ಕಲಾ ವೃಂದ, ಬೆಂಗಳೂರು.

೨. ಜವರೇಗೌಡ ದೇ.; ೧೯೬೩; **ಕಡುಗಲಿ ಕುಮಾರರಾಮ**; ನರೇಶ್ ಅಂಡ್ ಕಂಪನಿ, ಬೆಂಗಳೂರು.

೩. ತಗಡೆ ಬಿ.ಎಂ. (ಸಂ.); ೧೯೮೧; **ಪರದಾರ ಸೋದರ**; ಯುವಜನ ಸಾಹಿತ್ಯಾಧ್ಯಯನ ವೇದಿಕೆ, ಇಳಕಲ್ಲು

೪. ರಾಮಶರ್ಮ ವೈ.ಹ.; ೧೯೬೦; **ರಣಧೀರ ರಾಮನಾಥ**; ಶಾರದಾ ಮಂದಿರ, ಮೈಸೂರು.

೫. ವರದರಾಜ್ ರಾವ್ ಜಿ.; ೧೯೮೫; **ಕುಮ್ಮಟದುರ್ಗ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೬. ವರದರಾಜ್ ರಾವ್ ಜಿ.; ೧೯೯೩; **ಕುಮ್ಮಟದ ಕೇಸರಿ**; ಉಷಾ ಸಾಹಿತ್ಯ ಮಾಲೆ, ಮೈಸೂರು.

೭. ಶ್ರೀಧರ ಕೋಟೆಕಾರ; ೧೯೭೦; **ಕುಮಾರರಾಮ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೮. ಹುಲ್ಲೂರು ಶ್ರೀನಿವಾಸ ಜೋಯಿಸ್; ೧೯೫೫; **ಕಡುಗಲಿ ಕುಮಾರರಾಮ**; ರಸಿಕ ರಂಜನಾ ಪ್ರಕಾಶನ, ಅರಸೀಕೆರೆ.

೯. ಹೊಸಳ್ಳಯ್ಯ ಸಿ.ಆರ್.; ೧೯೫೪; **ಅಮರಕೀರ್ತಿ**; ಕೆ. ಸೀತಾರಾಮಶೆಟ್ಟಿ ಸನ್ಸ್, ಬೆಂಗಳೂರು.

IV. ಯಕ್ಷಗಾನ ಪ್ರಸಂಗ

೧. ಮಧುಕುಮಾರ ಬೋಳೂರು; ೧೯೮೪; **ಕಡುಗಲಿ ಕುಮಾರರಾಮ**; ಮರೋಳಿ ಪ್ರಕಾಶನ, ಮಂಗಳೂರು

ಆ. ಆನುಷಂಗಿಕ ಆಕರಗಳು

೧. ಅಂಬಳಿಕೆ ಹಿರಿಯಣ್ಣ (ಸಂ.); ೧೯೮೦; **ತಂಬೂರಿ ಸಂಪ್ರದಾಯದ ಕಾವ್ಯಗಳು**; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೨. ಕಲಬುರ್ಗಿ ಎಂ.ಎಂ. (ಸಂ.); ೧೯೯೯; **ಹೊಸ ಕುಮಾರರಾಮಯ್ಯನ ಸಾಂಗತ್ಯ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಜಯಪ್ರಕಾಶ್ ಮಾವಿನಕುಳಿ (ಸಂ.); ೧೯೯೨; **ಹರಿಕಾಂತರ ಪದಗಳು**; ಸ್ಫಟಿಕ ಪ್ರಕಾಶನ, ಮೂಡಬಿದರೆ.

೪. ಜೋಶಿ ಜಿ.ಡಿ.; ೧೯೯೬; **ಹುಯಿಲಗೋಳ ನಾರಾಯಣರಾಯರ ಜೀವನ ಹಾಗೂ ಸಾಹಿತ್ಯ**; ಮುಂಬೈ ವಿಶ್ವವಿದ್ಯಾಲಯ, ಮುಂಬೈ.

೫. ತಳವಾರ ಎನ್.ಎಂ.; ೨೦೦೨; **ನಂಜುಂಡ ಕವಿಯ ರಾಮನಾಥ ಚರಿತೆ ಸಾಂಸ್ಕೃತಿಕ ಅಧ್ಯಯನ**; ಅಭಿರುಚಿ ಪ್ರಕಾಶನ, ಮೈಸೂರು.

೬. ದೇಜಗೌ.; ೧೯೯೯; **ನಂಜುಂಡ ಕವಿ**; ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ.

೭. ದೇವಿರಪ್ಪ ಎಚ್.(ಸಂ.); ೧೯೯೪; **ಕುಮಾರರಾಮನಾಥ ಚರಿತೆ**; ಸಂ. ೧ ಮತ್ತು ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮. ಪಾಟೀಲ್ ಬೋಜರಾಜ; ೧೯೯೮; **ಕುಮಾರರಾಮನನ್ನು ಕುರಿತ ಐತಿಹಾಸಿಕ ಮಹತ್ವದ ಒಂದು ಹೊಸಶಾಸನ**; ಇತಿಹಾಸ ದರ್ಶನ, ಸಂ. ೧೩.

೯. ಪುರುಷೋತ್ತಮ ಬಿಳಿಮಲೆ; ೧೯೯೯; **ಕುಮಾರರಾಮ ಮತ್ತು ಕುಮ್ಮಟದುರ್ಗ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦, ಮಹದೇವ ಸಿ ಮತ್ತು ಇತರರು (ಸಂ.); ೨೦೦೨; **ಹೊಸಪೇಟೆ ತಾಲ್ಲೂಕು ದರ್ಶನ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಮೈತ್ರಿ ಕೆ.ಎಂ.; ೧೯೯೭; **ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ರಾಮೇಗೌಡ; ೧೯೯೦; **ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು**; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೩. ರುದ್ರಪ್ಪ ಪಿ.ನಂ.; ೧೯೮೦; **ಕುಮಾರರಾಮ**; ದೂರಾವಣಿ ಬಸವ ಸೇವಾ ಸಮಿತಿ, ಬೆಂಗಳೂರು.

೧೪. ವರದರಾಜ ರಾವ್ ಜಿ.; ೧೯೬೧; **ಕುಮಾರರಾಮನ ಸಾಂಗತ್ಯಗಳು**; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೫. ವೀರಣ್ಣ ರಾಜೂರು; ೧೯೯೮; **ಕರ್ನಾಟಕದ ಕೇಸರಿ**; ಅಶ್ವನಿ ಪ್ರಕಾಶನ, ಗದಗ.

೧೬. ಶಿವರಾಮು; ೧೯೭೧; **ಕನ್ನಡದ ಕಡುಗಲಿಗಳು**; ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

೧೭. ಶ್ರೀಕಂಠ ಕೊಡಿಗೆ; ೧೯೯೪; **ವಸುದೇವ ಭೂಪಾಲಂ ಸಾಹಿತ್ಯ ವಾಚಿಕೆ**; ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೧೮. ಸಾವಿತ್ರಿ ಎಸ್.ಎಂ.; ೨೦೦೨; **ಕುಮಾರರಾಮನ ಸಂಪ್ರದಾಯದ ಅಧ್ಯಯನ**; ಚಿತಶ್ರೀ ಪ್ರಕಾಶನ, ಹೊಸಪೇಟೆ.

೧೯. ಸುಂಕಾಪುರ ಎಂ.ಎಸ್. (ಸಂ.); ೧೯೭೫; **ಜೀವನ ಜೋಕಾಲಿ**; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦. ಸುಧೀಂದ್ರ ಎನ್.; ೧೯೯೭; **ಕನ್ನಡ ರೇಡಿಯೊ ನಾಟಕಗಳು**; ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

೨೧. ಹರ್ಲಾಪೂರ ಸುರೇಶ್ ಬಿ.; ೧೯೯೯; **ಕೈಫಿಯತ್ತುಗಳಲ್ಲಿ ಕುಮಾರರಾಮ**; ವಾಲ್ಮೀಕಿ ಪ್ರಕಾಶನ, ಹರ್ಲಾಪೂರ.

೨೨. ಹುಯಿಲಗೋಳ ವರದರಾಜ; ೧೯೫೨; **ಅಮೃತಮತಿ**; ಸಂಸ್ಕೃತಿ ಪ್ರಕಾಶನ, ಧಾರವಾಡ.

ಇ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳು

೧. ಮಂಜುನಾಥ ಟಿ.ಎಂ.; ೨೦೦೩; **ಕುಮ್ಮಟದ ನಾಯಕರು ಒಂದು ಸಾಂಸ್ಕೃತಿಕ ಅಧ್ಯಯನ**; ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಹಲ್ಲಾಪೂರ ಸುರೇಶ್ ಬಿ.; ೨೦೦೦; **ಕುಮಾರರಾಮನ ಅಧ್ಯಯನದ ಆಕಾರಗಳು**; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಈ. ಲೇಖನಗಳು

೧. ಅಭಿಶಂಕರ ಕೆ.; ೧೯೯೦; **ಕಂಪಿಲಿ ಕುಮ್ಮಟದ ಚಿಕ್ಕರಾಜ್ಯದ ದೊಡ್ಡಮಾರ್ಮಿಕ ಪಾತ್ರ**, ಇತಿಹಾಸ ದರ್ಶನ, ಸಂಪುಟ ೫

೨. ಕಪಟರಾಳ ಕೃಷ್ಣರಾಯ; ೧೯೪೧; **ಕಂಪಲಿರಾಯನೂ ಅವನ ಸ್ಥಾನಮಾನವೂ**; ಶರಣ ಸಾಹಿತ್ಯ.

೩. ಗದ್ದಗಿಮಠ ಬಿ.ಎಸ್. (ಸಂ.); ೧೯೬೨; **ಕುಮಾರರಾಮನ ದುಂದುಮಿ**; ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಲಕ್ಷ್ಮಣ ತೆಲಗಾವಿ (ಸಂ.); ೧೯೮೭; **ಅರಿಸೀರಿ**; ವಾಲ್ಮೀಕಿ ಸಾಹಿತ್ಯ ಸಂಪದ, ಕುರ್ತುಕೋಟಿ.

೫. ಲಕ್ಷ್ಮಣ ತೆಲಗಾವಿ; ೧೯೯೨; **ಕನ್ನಡ ಕಡುಗಲಿ ಕುಮಾರರಾಮನ ಚಾರಿತ್ರಿಕತೆ**; ಮಾನವಿಕ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬. ಪಾಂಡುರಂಗ ರಾವ್ ದೇಸಾಯಿ; ೧೯೬೦; **ಕರ್ನಾಟಕದ ಪ್ರಥಮ ಸ್ವಾತಂತ್ರ್ಯವೀರ**; ಕರ್ಮವೀರ.

೭. ವರದರಾಜ್ ರಾವ್ ಜಿ. ಮತ್ತು ಇತರರು; ೧೯೮೯; **ಕುಮ್ಮಟದುರ್ಗದ ಹೊಸಶಾಸನ ಕರ್ನಾಟಕ ಚರಿತ್ರೆಯ ಮೇಲೆ ಹೊಸಬೆಳಕು**; ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.